ಮಾನವಿಕ ಕರ್ಣಾಟಕ

ಸಂಪುಟ ೧೩ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೩ ಸಂಚಿಕೆ ೩

೫೧

ಮೇ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

MANAVIKA KARNATAKA, Kannada quarterly of the University of Mysore, Volume 13, Number 3, May 1983. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವಿ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧	ಎಂ. ಎಸ್. ತಿಮ್ಮಪ್ಪ ಮನೆಘಟ್ಟ	ಮನೆಘಟ್ಟ ಅಂಚೆ, ಮಾಸೂರು-೫೭೭೪೦೧, ಸಾಗರ-ಶಿವಮೊಗ್ಗ
೨	ಎಂ. ಎನ್. ವಿಜಯ ಕುಮಾರ್	ಅಧ್ಯಾಪಕರು, ವಾಣಿಜ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೩	ಕೆ. ವಾಸುದೇವಮೂರ್ತಿ	ಅಧ್ಯಾಪಕರು, ವಾಣಿಜ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೪	ವಿ. ಎನ್. ಶೇಷಗಿರಿರಾವ್	ಅಧ್ಯಾಪಕರು, ತತ್ತ್ವಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೫	ಸಿ. ಎಂ. ಮುನಿರಾಮಪ್ಪ	ಮುಖ್ಯಸ್ಥರು, ವಾಣಿಜ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೬	ವೈ. ಎ. ದೇವಪಾಲ್	ಸಂಶೋಧಕರು, ವಾಣಿಜ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬

ಎಂ. ಎಸ್. ತಿಮ್ಮಪ್ಪ ಮನೆಘಟ್ಟ

ಮಾತಿನ ಕಲೆ

ಮಾತಿನ ಮಹತ್ವ

ಮಾತು ಮನುಷ್ಯನಿಗೆ ಪ್ರಕೃತಿ ದತ್ತ ವರ. ಚಿಂಪಾಂಜಿ, ಮಂಗ, ಗಿಳಿ ಮೊದಲಾದ ಪಶು ಪಕ್ಷಿಗಳು ಕೆಲಮಟ್ಟಿಗೆ ಮನುಷ್ಯನಂತೆ ಮಾತುಗಳನ್ನು ಅನುಕರಿಸಿ ಆಡಬಲ್ಲವು. ಮನುಷ್ಯನಿಗೆ ಸಮನಾಗಿ ನಾಲಗೆಯನ್ನಾಗಲೀ ಮಾತಿನ ಹಿನ್ನೆಲೆಯಾದ ಬುದ್ಧಿಯನ್ನಾಗಲೀ ಬಳಸಲು ಸಾಧ್ಯವಿಲ್ಲ. ಇಂತಹ ಮಾತಿನ ಬಗ್ಗೆ ಹಿಂದಿನಿಂದಲೂ ಅಧ್ಯಯನ ನಡೆಯುತ್ತ ಬಂದಿದೆ. "ಮಾತು" ಮಾತುಗಾರಿಕೆಯಾಗಿ, ಮಾತಿನ ಕಲೆಯಾಗಿ ಬೆಳೆದಿದೆ.

ಮಾತಿನ ಮಹತ್ವದ ಬಗ್ಗೆ ಕೆಲವರು ಆಡಿರುವ ಮಾತುಗಳು ಮನನೀಯವಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು—'ಮಾತುಬಲ್ಲವನಿಗೆ ಜಗಳವಿಲ್ಲ',— 'ಆಡಿದರೆ ಮಾತು ಹೋಯಿತು ; ಒಡೆದರೆ ಮುತ್ತು ಹೋಯಿತು', "ಬಾಯಿ ಇದ್ದರೆ ತಾಯಿ ಇದ್ದಹಾಗೆ". ಎಂಬ ನಾಣ್ಣುಡಿಗಳೂ, 'ನುಡಿದರೆ ಮುತ್ತಿನ ಹಾರದಂತಿರಬೇಕು'—ಅಯ್ಯಾ ಎನೆ ಸ್ವರ್ಗ ಎಲವೋ ಎನೆ ನರಕ ಎಂಬ ಬಸವಣ್ಣನವರ ವಚನಗಳೂ ಮಾತಿನ ಮಹತ್ವವನ್ನು ಎತ್ತಿ ತೋರಿಸುವ ಕೆಲವು ಉದಾಹರಣೆಗಳು ಮಾತ್ರ. ಇಂತಹ ಮಹತ್ವವುಳ್ಳ ಮಾತು ನಮ್ಮ ಜೀವನದಲ್ಲಿ ಬೃಹತ್ ಪಾತ್ರ ವಹಿಸುತ್ತಿದೆ. ಬಹು ಯಾತನೆಯಿಂದ ಬದುಕುವ ಮೂಗರು ಈ ಮಾತಿನ ಶಕ್ತಿಯಿಂದ ವಂಚಿತರಾಗಿದ್ದಾರೆ.

ಒಬ್ಬರು ಕೆಲವು ಕಾಲ ಆಡುವ ಮಾತುಗಳನ್ನು ಆಧರಿಸಿ ಅವರ ಕುಲ, ಶೀಲ, ಸಂಸ್ಕೃತಿ, ಸ್ವಭಾವಗಳನ್ನು ಅಳೆಯಬಲ್ಲ, ಅರಿಯಬಲ್ಲ ಚತುರರಿಗೆ ನಮ್ಮಲ್ಲೇನೂ ಕೊರತೆಯಿಲ್ಲ ; 'ಕುಲವನರುಹುವುದು ನಾಲಗೆ' ಎಂದರೆ ಅದು ಒಬ್ಬನ ಶೀಲ, ಸಂಸ್ಕಾರಗಳನ್ನು ತಿಳಿಸುತ್ತದೆ ಎಂದೇ ಅರ್ಥ. ನಮ್ಮಲ್ಲಿ "ತ್ರಿಕರಣ"ಗಳು ಎಂದು ಗುರುತಿಸುವುದರಲ್ಲಿ ಮಾತು (ವಚಸ್) ಕೂಡಾ ಒಂದು. ಇದು ಶುದ್ಧವಾಗಿರಬೇಕು ಎಂದು ತಿಳಿದವರು ಹೇಳುತ್ತಾರೆ.

ಹೀಗೆ ಮಾತಿನ ಅಗಾಧವಾದ ಹಿನ್ನೆಲೆಯನ್ನು ಅರಿಯ ಹೊರಟ ನಮ್ಮ ಪೂರ್ವಿಕರು ಅದರ ನಿಗೂಢತೆಯನ್ನೇ ಬೇಧಿಸಲಾಗದೆ ಅದೊಂದು ದೈವದತ್ತವರವೆಂದು ಭಾವಿಸಿದರು.

ಸಂಸ ತದಲ್ಲಿ ಮಾತಿಗೆ "ವಾಕ್" ಎನ್ನುತ್ತಾರೆ. ಇಂತಹ "ವಾಕ್ ಶಕ್ತಿ" ವಾಗ್ದೇವಿಯ ಕೃಪೆಯಿಂದ ದೊರೆಯುವಂತಹುದೆಂದೂ, ವಾಗ್ದೇವಿಯಾದ ಶಾರದೆಯನ್ನು ಸುಪ್ರೀತ ಗೊಳಿಸಬೇಕೆಂದೂ ಭಾವಿಸಿದ್ದರು. ಆದಕ್ಕಾಗಿ ಅನೇಕ ಸ್ತೋತ್ರಗಳನ್ನು ರಚಿಸಿದ್ದರು.

ಜಗತ್ತಿನ ಬೇರೆ ಬೇರೆ ಸುಸಂಸ್ಕೃತ ಮತ್ತು ಪ್ರಾಚೀನ ನಾಗರಿಕ ದೇಶಗಳಲ್ಲೂ ಜನರಿಗೆ ಮಾತಿನ ಮಹತ್ವ ಗೊತ್ತಿತ್ತು—ಎಂಬುದಕ್ಕೆ ಅನೇಕ ಆಧಾರಗಳಿವೆ. ಪ್ರಾಚೀನ ಗ್ರೀಸ್ ದೇಶದಲ್ಲಿ 'ಮಾತು' ಜನಪ್ರಿಯ "ಭಾಷಣಕಲೆ"ಯಾಗಿ ಬೆಳೆದಿತ್ತು. ಅಲ್ಲದೆ ಇಂಗ್ಲೆಂಡಿನ ಖ್ಯಾತ ನಾಟಕಕಾರ ಷೇಕ್ಸ್‌ಪಿಯರ್‌ನ ಹಲವು ನಾಟಕಗಳಲ್ಲಿ ಮಾತು ಗಾರಿಕೆಯ ಕಲಾತ್ಮಕತೆಯನ್ನು ಕಾಣಬಹುದಾಗಿದೆ. ಫ್ರಾನ್ಸ್, ಇಂಗ್ಲೆಂಡ್, ಅಮೆರಿಕಾ ದೇಶಗಳ ಕ್ರಾಂತಿಯ ಅಧ್ಯಾಯಗಳನ್ನೂ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಅಧ್ಯಾಯಗಳನ್ನೂ ಗಮನಿಸಿದಾಗ ಮಾತುಗಾರಿಕೆ ಅಥವಾ ಮಾತಿನಕಲೆ ಜಗತ್ತಿನ ಇತಿ ಹಾಸಕ್ಕೆ ಹೊಸ ತಿರುವುಕೊಡುವುದರಲ್ಲಿ ಮಹತ್ವದ ಮಾಧ್ಯಮವಾಗಿದ್ದುದನ್ನು ಗಮನಿಸ ಬಹುದಾಗಿದೆ.

ನಮ್ಮ ಸರ್ವಶಕ್ತಿ ಇರುವುದೂ ಮಾತಿನಲ್ಲಿ ಅಂದರೆ ತಪ್ಪಲ್ಲ. ಆದರೆ ನಾವಾಡುವು ದೆಲ್ಲ ಮಾತಾಗುವುದಿಲ್ಲ. ಆಡುವಂತಹುದು ಅರ್ಥಪೂರ್ಣವೂ ಅಗತ್ಯವೂ ಕರ್ಣಾನಂದ ಕರವೂ ಕಲಾತ್ಮಕವೂ ವೃಥಾಕಾಲಹರಣಕಾರಿಯಾಗದೆಯೂ ಇರಬೇಕಾಗುತ್ತದೆ. ಇಂತಹ ಮಾತುಗಾರಿಕೆಗೆ ದೋಷನಿವಾರಣೆ, ಭಾಷಾಪ್ರಭುತ್ವ, ಸಂಯಮ, ಚಿತ್ತಾ ರೋಗ್ಯ ಇವೆಲ್ಲಾ ಅಗತ್ಯವಾಗಿರಬೇಕಾಗುತ್ತದೆ.

ಇವುಗಳನ್ನು ಬಹಳ ಆಳವಾಗಿ ಅಲ್ಲದಿದ್ದರೂ ಜನಸಾಮಾನ್ಯರಿಗೆ ಸರಳವಾಗಿ ಮನದಟ್ಟು ಮಾಡುವಂತಹ ಪ್ರಯತ್ನ ಇಲ್ಲಿದೆ.

ಮಾತಿನರಚನೆ

ಮಾತೆಂಬುದು ಶ್ರವಣಸಾಧ್ಯ. ಅದು ಅದೃಷ್ಟ. ಆದರೆ ಅದಕ್ಕೆ ತನ್ನದೇ ಆದ ಒಂದು ನಿರೂಪವಿದೆ. ಅದು ಅನುಭವವೇದ್ಯ. ಮಾತು ಆತ್ಮಸಹಿತವಾದದ್ದು. ಕಲಾತ್ಮಕ ವಾದದ್ದು. ಆದರೆ ವೈಜ್ಞಾನಿಕತೆಗೆ ಬದ್ಧವೂ ಆದದ್ದು, ಇದೇ ಅದರ ವಿಶಿಷ್ಟತೆ. ನಾವು ಕೇಳುವ "ಮಾತು" ಏಕವಲ್ಲ. ಅದು ಅನೇಕದ ಸಂಘಟಿತ ಮತ್ತು ಸಂಘರ್ಷಿತ ಕ್ರಿಯೆ ಗಳಿಂದ ಹುಟ್ಟುವಂತಹುದು. ಇಲ್ಲಿ ಮಾತಿನ ಜನನದಲ್ಲಿ ಅಂಗಗಳು, ಮನಸ್ಸು ಭಾಷೆ ಪಾಲ್ಗೊಳ್ಳುತ್ತವೆ. ಇನ್ನೊಂದು ನೆನಪಿನಲ್ಲಿಡಬೇಕಾದ ಅಂಶವೆಂದರೆ 'ಮಾತೇ ಉದ್ದೇಶವಲ್ಲ'. ಅದು ಬರಿಯ ಮಧ್ಯವರ್ತಿ. ಒಂದು ಮನಸ್ಸಿನ ಭಾವನೆಗಳನ್ನು ಭಾಷೆಯ ಉಡುಗೆ ತೊಡಿಸಿ ತನ್ನ ಮೂಲಕ ಬೇರೆ ಮನಸ್ಸಿಗೆ, ಮನಸ್ಸುಗಳಿಗೆ ಮುಟ್ಟಿಸುವ ಮಧ್ಯವರ್ತಿ ಮಾತು. ಮಾತೆಂದರೆ ಭಾಷೆಯಲ್ಲ, ಮಾತೆಂದರೆ ಭಾವನೆಯೂ ಅಲ್ಲ. ಮಾತಿಲ್ಲದೆ ಭಾಷೆ ಮತ್ತು ಭಾವನೆಗಳು ವ್ಯಕ್ತವಾಗಲು ಸಾಧ್ಯ. ಆದರೆ ಮಾತು ವ್ಯಕ್ತ ವಾಗಲು ಭಾಷೆ ಮತ್ತು ಭಾವನೆಗಳು ಅಗತ್ಯವಾಗಿ ಬೇಕು. ಮಾತಿನ ದೊಡ್ಡ ಭಾಗ ಧ್ವನಿ.

ಆದರೆ ಧ್ವನಿಯೆಲ್ಲಾ ಮಾತಾಗುವುದಿಲ್ಲ. ಮಾತಿನ ಉತ್ಪತ್ತಿ ಅಥವಾ ರಚನೆ ಹೇಗೆಂದರೆ ತನ್ನ ಇಂದ್ರಿಯಗಳ ಮೂಲಕ ಏನನ್ನೋ ಗ್ರಹಿಸುವ, ಊಹಿಸುವ ಮನಸ್ಸು ತನ್ನ ಶರೀರದ ವಾಗಂಗಗಳ ಸಹಾಯದಿಂದ ತಾನು ಬಲ್ಲ ಭಾಷೆಯಲ್ಲಿ ಧ್ವನಿಯುಂಟು ಮಾಡಿದಾಗ ಅದು ಮಾತನ್ನು ಸೃಷ್ಟಿಸುತ್ತದೆ. ಇಂತಹ ಮಾತು ದೋಷಮುಕ್ತವಾಗಿರಬೇಕಾಗುತ್ತದೆ. ಮಾತಿನಲ್ಲಿ ಇರಬಹುದಾದ ದೋಷಗಳನ್ನು ಮೂರು ಗುಂಪುಗಳಲ್ಲಿ ನೋಡಬಹುದು—ಅವು ಅಂಗದೋಷ ಮತ್ತು ಭಾಷಾ ದೋಷ ಹಾಗೂ ವಿಚಾರ ದೋಷ ಇವುಗಳನ್ನೆ ಸ್ವಲ್ಪ ವಿವರವಾಗಿ ನೋಡಬಹುದು.

ಅಂಗದೋಷ

ಮಾತಿನ ಕ್ರಿಯೆಯಲ್ಲಿ ಭಾಗವಹಿಸುವ ಅಂಗಗಳನ್ನು ವಾಗಂಗಗಳು ಎಂದು ಗುರುತಿಸಿದ್ದಾರೆ. ಈ ವಿಚಾರದಲ್ಲಿ ಸಂಸ್ಕೃತದ ವ್ಯಾಕರಣಕಾರ ಪಾಣಿನಿಯೂ, ಕನ್ನಡದ ಶಬ್ದಮಣಿದರ್ಪಣದ ಕೇಶಿರಾಜನೂ ಕ್ರಮವಾಗಿ ಸಂಸ್ಕೃತ ಮತ್ತು ಕನ್ನಡ ಅಕ್ಷರಗಳ ಉತ್ಪತ್ತಿ ಸ್ಥಾನಗಳನ್ನು ತಮ್ಮ ತಮ್ಮ ಕೃತಿಗಳಲ್ಲಿ ಸೂಚಿಸಿದ್ದಾರೆ. ಎದೆ, ಗಂಟಲು, ಮುಖ, ಕುಹರದ ಮೂರ್ಧನ್ಯಭಾಗ, ನಾಲಿಗೆಯ ಬುಡ, ಹಲ್ಲು, ಮೂಗು ಮತ್ತು ತುಟಿಗಳು ಪಾಣಿನಿಯ ಪ್ರಕಾರ ಅಕ್ಷರೋತ್ಪತ್ತಿಯ ಸ್ಥಾನಗಳು. ಇವು ಎಂಟು. ಕೇಶಿರಾಜನು ಶಬ್ದಮಣಿದರ್ಪಣದ ಸಂಜ್ಞಾಪ್ರಕರಣದಲ್ಲೂ ಈ ಎಂಟು ಸ್ಥಾನಗಳನ್ನು ಉಲ್ಲೇಖಿಸಿದ್ದಾನೆ.

ನಮ್ಮ ದೇಹದ ಯಾವ ಯಾವ ಭಾಗದಲ್ಲಿ ಯಾವ ಯಾವ ಅಕ್ಷರಗಳು ಹುಟ್ಟುತ್ತವೆ ಎಂಬುದನ್ನು ನಾವೇ ಪರಿಶೀಲಿಸಿ ತಿಳಿದುಕೊಳ್ಳಬಹುದಾಗಿದೆ. ಉದಾಹರಣೆಗೆ ತುಟಿಗಳಲ್ಲಿ 'ಪ' ವರ್ಗಾಕ್ಷರಗಳೂ, ನಾಲಿಗೆ–ದಂತಗಳಿಂದ 'ತ' ವರ್ಗಾಕ್ಷರಗಳೂ ಹುಟ್ಟುತ್ತವೆ. ಹೀಗೆ ಹುಟ್ಟುವ ಅಕ್ಷರಗಳನ್ನು ಅವುಗಳ ಮೂಲದ ಆಧಾರದಿಂದಲೇ ಸ್ವರ, ವ್ಯಂಜನ, ಅನುನಾಸಿಕ, ಮೊದಲಾಗಿ ಗುಂಪುಗಳಾಗಿ ಮಾಡಿದೆ.

ಇವುಗಳಲ್ಲಿ ದೋಷ ಹೇಗೆ ಉಂಟಾಗುತ್ತದೆ ನೋಡೋಣ. ತುಟಿ ಹರಿದವರು, 'ಪ' ವರ್ಗದ ಅಕ್ಷರಗಳನ್ನು ಉಚ್ಚರಿಸಲಾರರು. ಹಲ್ಲಿಲ್ಲದವರು ಸಂಗೀತ ಹೇಳುವಾಗ ಏನಾಗುತ್ತದೆ ಎಂಬುದನ್ನು ಪುನಃ ಹೇಳುವುದೇ ಬೇಡ. ಕೆಲವರಿಗೆ "ಉಗ್ಗು" ದೊಡ್ಡ ದೋಷ. ಇನ್ನು ಕೆಲವರಿಗೆ 'ಒಡಕು ಗಂಟಲು', ಕೀರಲು ಗಂಟಲು, ದಪ್ಪ ಧ್ವನಿ. ಹೀಗೆ ವಾಗಂಗಗಳಿಗೆ ಸಂಬಂಧಿಸಿದ ದೋಷಗಳು ಹತ್ತಾರು ರೀತಿಯವು. ಇವುಗಳಲ್ಲಿ ಅನೇಕ ರೀತಿಯ ದೋಷಗಳನ್ನು ಚಿಕಿತ್ಸೆಯಿಂದ ಸರಿಪಡಿಸಿಕೊಳ್ಳಬಹುದು. ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ 'ವಾಕ್ ಮತ್ತು ಶ್ರವಣ ವಿಜ್ಞಾನ' ವೆಂಬ ಪ್ರತ್ಯೇಕ ಶಾಖೆಯೇ ಬೆಳೆದಿದೆ. ಅನೇಕ ತಜ್ಞ ವೈದ್ಯರಿದ್ದಾರೆ. ಮೈಸೂರಿನಲ್ಲಿರುವ "ವಾಕ್ ಮತ್ತು ಶ್ರವಣ ಸಂಸ್ಥೆ" ಇಂತಹ ಅಂಗ ದೋಷಗಳ ಬಗ್ಗೆ ಚಿಕಿತ್ಸೆ ನಡೆಸುತ್ತದೆ. ಯಾರು ಇಂತಹ ಅಂಗ

ದೋಷಗಳಿಂದ ತೊಂದರೆಪಡುತ್ತಾರೋ ಅವರು ಒಳ್ಳೆಯ ಮಾತುಗಾರರಾಗಲಾರರು. ಅವುಗಳನ್ನು ಸರಿಪಡಿಸಿಕೊಳುವುದರಿಂದ 'ಮಾತುಗಾರಿಕೆ' ಯಶಸ್ವಿಯಾಗುತ್ತದೆ.

ಭಾಷಾದೋಷ

ನಮ್ಮ ಮಾತುಗಾರಿಕೆ ದೈಹಿಕವಾದ ವಾಗಂಗಗಳ ದೋಷಗಳಿಂದ ಮುಕ್ತವಾಗಿದ್ದರೂ ಭಾಷಾದೋಷವಿದ್ದರೆ ಯಶಸ್ವಿಯಾಗುವುದಿಲ್ಲ. ಇದಕ್ಕೊಂದು ಉದಾಹರಣೆ—ಒಂದು ಸಮಾರಂಭ. ಒಬ್ಬ ಮಂತ್ರಿ ಬರಬೇಕಿತ್ತು, ಬರಲಿಲ್ಲ, ಆಗ ಸಮಾರಂಭದ ವ್ಯವಸ್ಥಾಪಕರೊಬ್ಬರು—"ಮಿನಿಸ್ಟರ್ ಮಿಸೆಸ್ ಕಳಿಸ್ಯಾರ್ರೀ" ಎಂದು ಹೇಳುತ್ತಿದ್ದರು. ಅನೇಕರಿಗೆ ಗಾಬರಿ. ಅರ್ಥವೂ ಆಗಲಿಲ್ಲ. ಕೊನೆಗೆ ತಿಳಿದಿದ್ದಿಷ್ಟು. ಮಂತ್ರಿಗಳಿಂದ ಸಂದೇಶ (ಮೆಸೇಜ್) ಬಂದಿದೆ. ಇಲ್ಲಿನ ದೋಷ ತಿಳಿದಾಗ ನಗದಿರಲು ಸಾಧ್ಯವೇ ? ಊಹಿಸಿಕೊಳ್ಳಿ. ಇಂತಹ ಉದಾಹರಣೆಗಳನ್ನು ಹಲವಾರು ದಿನ ನಿತ್ಯವೂ ಗುರುತಿಸಬಹುದಾಗಿವೆ.

ಭಾಷೆ ಎಂಬುದು ಭಾವನೆಗಳನ್ನು ವ್ಯಕ್ತಗೊಳಿಸಲು ಇರುವ ಸಮರ್ಥ ಸಾಧನಗಳಲ್ಲೊಂದು. ಇದು ಅರ್ಥಪೂರ್ಣ ಪದಪ್ರಯೋಗದಿಂದ ಉಂಟಾಗುವಂತಹುದು. ಭಾಷೆಯ ಬಗ್ಗೆ ಇಲ್ಲಿ ಹೆಚ್ಚಿನ ವಿವರಣೆ ಅನಗತ್ಯ. ಭಾಷೆಯ ಹುಟ್ಟು ಬೆಳವಣಿಗೆಗೆ ಸಂಬಂಧಿಸಿದಂತೆ "ಭಾಷಾವಿಜ್ಞಾನ" ಎಂಬ ಶಾಖೆಯೇ ಇದೆ. ಅದರ ಅಧ್ಯಯನವೂ ಮಾತುಗಾರಿಕೆಗೆ ಸಹಾಯಕ. ಜಗತ್ತಿನಲ್ಲಿ ಅನೇಕ ಭಾಷೆಗಳಿವೆ. ಹಲವು ಬರಿಯ ಗ್ರಾಂಥಿಕ ಭಾಷೆಗಳು. ಕೆಲವು ಬರಿಯ ಆಡು ಭಾಷೆಗಳು. ಹಲ ಕೆಲವು ಆಡುವ ಮತ್ತು ಬರೆಯುವ ಭಾಷೆಗಳು. ಭಾಷೆಗಳ ಬಳಕೆಯನ್ನು ವ್ಯವಸ್ಥಿತವಾಗಿಡಲು ವ್ಯಾಕರಣ ಶಾಸ್ತ್ರವೆಂಬುದಿದೆ. ಮಾತುಗಾರಿಕೆಗೆ ವ್ಯಾಕರಣದ ಅರಿವು ಅತ್ಯಗತ್ಯವಾದರೂ ಎಲ್ಲರೂ ಕ್ರಮಬದ್ಧವಾಗಿ ವ್ಯಾಕರಣ ಕಲಿತೇ ಮಾತನಾಡುತ್ತಾರೆ ಎಂದರ್ಥವಲ್ಲ. ಮಾತು ಭಾಷೆಯ ಮೂಲಕ ವ್ಯಕ್ತವಾಗುತ್ತದೆ.

ನಾವು ಕನ್ನಡ, ಇಂಗ್ಲಿಷ್, ಹಿಂದಿ, ಕೊಂಕಣಿ, ತುಳು, ಸಂಸ್ಕೃತ, ಉರ್ದು ಹೀಗೆ ಅನೇಕ ಭಾಷೆಗಳನ್ನು ದಿನಾ ನಮ್ಮ ಸುತ್ತಮುತ್ತಲಿನವರು ಬಳಸುವುದನ್ನು ನೋಡಬಹುದು. ಇವುಗಳಲ್ಲಿ ಸಂಸ್ಕೃತ ಬರಿಯ ಗ್ರಾಂಥಿಕವಾದರೆ ಕೊಂಕಣಿ ಬರಿಯ ಆಡು ಭಾಷೆ. ಉರ್ದು ಬಹುದೊಡ್ಡ ಪ್ರಮಾಣದ ಮಿಶ್ರ ಭಾಷೆಯಾದರೆ ತುಳು ಒಂದು ಸಣ್ಣ ಪ್ರಾದೇಶಿಕ ಭಾಷೆ. ಹಾಗೆಯೇ ಜಗತ್ತಿನ ಹತ್ತಾರು ಭಾಷೆಗಳಿಂದ ಪದಗಳನ್ನು ಜೀರ್ಣಿಸಿಕೊಂಡು ಬೃಹತ್ತಾಗಿ ಬೆಳೆದು ಇದೇ ನಮ್ಮ ತಾಯಿ ಭಾಷೆಯೇನೋ ಎಂಬ ಭ್ರಮೆ ಹುಟ್ಟಿಸುವ ಭಾಷೆ ಇಂಗ್ಲಿಷ್. ಕನ್ನಡ ನಮ್ಮ ತಾಯಿ ಭಾಷೆ. ದಕ್ಷಿಣದ ಹಲವು ಭಾಷೆಗಳೊಡನೆ ಸಂಬಂಧ ಹೊಂದಿರುವ ಒಂದು ದ್ರಾವಿಡ ಭಾಷೆ ಇದು.

ನಾವು ಮಾತಾಡುವಾಗ ಒಂದು ಭಾಷೆಯನ್ನು ಮಾಧ್ಯಮವಾಗಿ ಬಳಸುತ್ತೇವೆ ಅಥವಾ ಬಳಸಬೇಕು ಎನ್ನೋಣ. ಆದರೆ ನಮಗರಿವಿಲ್ಲದೆಯೇ ಪರಭಾಷೆಯ ಪದಗಳು

ನಾವಾಡುವ ಭಾಷೆಯೊಳಗೆ ನುಸುಳಿರುವುದು ನಮಗೆ ತಿಳಿಯದಿರಬಹುದು. ಇಲ್ಲವೇ ನಮ್ಮ ಮಾತುಗಾರಿಕೆಯ ಪ್ರತಿಷ್ಠೆಯನ್ನು ತೋರಿಸಲು ಇಂಗ್ಲಿಷ್ ನಂತಹ ಭಾಷೆಯ ಪದಗಳನ್ನು ಬೆರೆಸಿ ಮಾತನಾಡಬಹುದು. ಇಲ್ಲಿ ಒಂದು ಮುಖ್ಯ ಅಂಶವಿದೆ. ಸಂಕೇತ ಭಾಷೆಗಳ ಹೊರತಾದ ಭಾಷೆಗಳೆಲ್ಲ ಮೊದಲು ಮಾತಿನಲ್ಲೇ ಹುಟ್ಟಿದವು, ಆದರೆ ಅವು ಬೆಳೆದ ಹಾಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೂಪಾಂತರಗಳನ್ನು ಪಡೆದವು. ಲಿಪಿಗಳನ್ನೂ ಪಡೆದವು. ಕೆಲವು ಭಾಷೆಗಳು ಕ್ರಮೇಣ ಮಾತಿನಿಂದ ಲೋಪವಾಗಿ ಬರಿಯ ಗ್ರಾಂಥಿಕವಾಗಿ ಉಳಿದದ್ದು ನಿಜಕ್ಕೂ ಒಂದು ಸೋಜಿಗ. ಅನೇಕ ಭಾಷೆಗಳ ನಡುವೆ ನಿಕಟ ಸಂಬಂಧವಿದೆ. ಪದಗಳು ತೀರಾ ಸ್ವಲ್ಪ ವ್ಯತ್ಯಾಸದೊಡನೆ ಬೇರೆ ಬೇರೆ ಭಾಷೆಗಳಲ್ಲಿರುವುದನ್ನು ನೋಡಬಹುದು. ಅಥವಾ ಒಂದು ಭಾಷೆಯ ಪದ ಇನ್ನೊಂದು ಭಾಷೆಗೆ ಭಾಷಾಂತರ ಹೊಂದಿರಬಹುದು. ಉದಾಹರಣೆಗೆ "ಕ್ಯಾಂಡಲ್" ಇಂಗ್ಲಿಷ್ ಪದ, "ಕಂದೀಲು" ಕನ್ನಡ ಪದ. ಎರಡೂ ಬೆಳಕಿಗೆ ಸಂಬಂಧಿಸಿದ್ದೇ. ಆದರೆ ವಸ್ತುಗಳು ಬೇರೆ ಬೇರೆ. ಹಾಗೆಯೇ ದ್ರಾವಿಡ ಭಾಷೆಗಳ ನಡುವೆ (ಕನ್ನಡ, ತಮಿಳು, ಮಲೆಯಾಳಿ, ತುಳು, ತೆಲುಗು) ಆರ್ಯ ಭಾಷೆಗಳ ನಡುವೆ (ಉತ್ತರ ಭಾರತದ ಹಿಂದಿ, ಬಂಗಾಲಿ ಮೊದಲಾದುವು) ಇಂತಹ ಅನೇಕ ಸಾಮ್ಯಗಳನ್ನು ನೋಡಬಹುದು. ಕೆಲವು ಬಾರಿ ಪರಭಾಷಾ ಪದಗಳನ್ನು ಬಳಸುವಾಗ ಅದನ್ನು ಕೆಡಿಸಿ ಬಳಸುವುದೂ ಉಂಟು. ಇದು ಕೂಡಾ ಭಾಷಾ ದೋಷವೇ ಸರಿ. "ತನಗೆ ರಕ್ತದ ಒತ್ತಡ"ವಿದೆ ಎಂದು ಸರಳವಾಗಿ ಹೇಳಬಹುದಾದರೂ "ಬ್ಲಡ್ ಪಸ್ಸ್" ಇದೆ ಎಂದು ಒಬ್ಬರು ಹೇಳುವುದನ್ನು ಕೇಳಿದ್ದೇನೆ. ಇಲ್ಲಿ "ಪ್ರೆಶರ್" ಬದಲು "ಪಸ್" ಎಂದು ಹೇಳುವುದು ಎಲ್ಲ ರೀತಿಯಿಂದಲೂ ತಪ್ಪೇ ಸರಿ. 'ಪ್ರೆಶರ್' ಎಂದರೆ 'ಒತ್ತಡ. 'ಪಸ್' ಎಂದರೆ ಕೀವು !

ಮಾತುಗಾರಿಕೆಗೆ ಸಂಬಂಧಿಸಿದ ಹಾಗೆ ಇನ್ನೊಂದು ಅಂಶವನ್ನು ಗಮನಿಸಬಹುದು. ಕನ್ನಡ ಮಾತಿಗೆ ಹನ್ನೆರಡು ಅರ್ಥವೆನ್ನುತ್ತಾರೆ. ಸಾಮಾನ್ಯವಾಗಿ ಎಲ್ಲಾ ಭಾಷೆಯಲ್ಲೂ ಇಂತಹ ನುಡಿ ಕಟ್ಟು ಇರುತ್ತದೆ. ಉದಾಹರಣೆಗೆ 'ಬಟ್ಟೆ' ಎಂದರೆ ದಾರಿ. ವಸ್ತ್ರ ಎಂದರ್ಥ. ಹಾಗೆಯೇ 'ತಿಂಡಿ' ಎಂದರೆ ಉತ್ತರ ಕರ್ನಾಟಕದಲ್ಲಿ ತುರಿಕೆ ಎಂದರ್ಥವಾದರೆ ಮಲೆನಾಡಿನಲ್ಲಿ 'ತಿನ್ನುವ ವಸ್ತು'. ಹಾಗೆಯೇ ಭಾಷೆಗಳಲ್ಲಿ ಒಳ ಪ್ರಭೇಧಗಳಿರುತ್ತವೆ. ಕನ್ನಡದ ಇಂತಹ ಪ್ರಭೇಧಗಳನ್ನರಿತು ಖ್ಯಾತ ಸಾಹಿತಿ ದಿ|| ಬೀಚಿಯವರು 'ಮೈನಾಟಕೋದಯಂ' ಎಂಬ ಹಾಸ್ಯ ಪ್ರಹಸನವನ್ನೇ ಕರ್ನಾಟಕ ಏಕೀಕರಣವಾದಾಗ ಬರೆದರು, ಹವ್ಯಾಸ ಕನ್ನಡ, ದೇವರ ಕನ್ನಡ, ಮಂಗಳೂರು ಕನ್ನಡ, ಹೈದರಾಬಾದ್ ಕನ್ನಡ, ಹೀಗೆ ಹತ್ತಾರು ರೀತಿಯಲ್ಲಿ ಒಂದೊಂದು ಪದಗಳು ಉಚ್ಚಾರಣೆಯಲ್ಲಿ ಅರ್ಥದಲ್ಲಿ ಭಿನ್ನವಾಗುವುದನ್ನ ನೋಡಬಹುದು—'ನೀನು ಬರುತ್ತೀಯಾ–'ನೀ ಬಪ್ಪನಾ' 'ನೀ ಬತ್ತ್ಯಾ ?," –ನೀ ಬತ್ತೀಯಾ, "– "ನೀ ಬರಾಕಲ್ಲೀ", ಹೀಗೆ ಬೇರೆ ಬೇರೆ ರೀತಿಯಲ್ಲಿ ಹೇಳಿದರೂ ಅರ್ಥ ಒಂದೇ. ಇವೆಲ್ಲ ಒಂದೇ ಅರ್ಥ ಕೊಡುವ ಬೇರೆ ಬೇರೆ ಕನ್ನಡ. ಯಾವುದೇ ಭಾಷೆಯಲ್ಲಿ ಆಡು ಭಾಷೆಗೂ, ಬರಹದ ಭಾಷೆಗೂ

ವ್ಯತ್ಯಾಸವಿದೆ. ಬರಹದಲ್ಲಿ ವ್ಯಾಕರಣದ ನಿಯಮಗಳನ್ನು ಕಡೆಗಣಿಸಲಾಗದು. ಆಡುಮಾತಿನಲ್ಲಿ ವ್ಯಾಕರಣದ ನಿಯಮಗಳನ್ನು ಅನುಸರಿಸಲಾಗದು. ಅನುಸರಿಸಿದರೂ ಅದು ಸೊಗಸಲ್ಲ. ರಗಳೆಯಾಗುತ್ತದೆ. ಆದರೆ, ಕಾಲ, ವಚನ, ಮೊದಲಾದ ಕೆಲವು ನಿಯಮಗಳನ್ನು ಬಿಡುವಂತಿಲ್ಲ, ಸಾಮಾನ್ಯವಾಗಿ ಆಡುಮಾತಿನಲ್ಲಿ ವ್ಯಾಕರಣದ ಬಳಕೆ ಎಷ್ಟು ಎಂಬುದು ಎಲ್ಲರಿಗೂ ತಿಳಿದಿರುತ್ತದೆ.

ಮಗು ಹುಟ್ಟಿದ ವರ್ಷದೊಳಗೆ ಮಾತಾಡಲು ಆರಂಭಿಸುತ್ತದೆ. ಅದು ಅಕ್ಷರೋಚ್ಚಾರಣೆ ಕುರಿತು ಪದಗಳನ್ನು ಜೋಡಿಸಿ ವಾಕ್ಯರಚನೆ ಮಾಡಲು ಕೆಲವು ಕಾಲವೇ ಬೇಕು. ಮೊದಮೊದಲಿಗೆ ಅದು ಬೇರೆಯವರನ್ನು ಅನುಕರಿಸುತ್ತದೆ. ಕ್ರಮೇಣ ಭಾಷೆಯನ್ನು ಕಲಿತು ತನ್ನ ಬೇಕು ಬೇಡಗಳನ್ನು ವಿಚಾರಗಳನ್ನು ವ್ಯಕ್ತಮಾಡಲು ಸೂಕ್ತವೂ ಸಂಕ್ಷಿಪ್ತವೂ ಸರಳವೂ ಆದ ಭಾಷೆಯನ್ನು ಹುಡುಕುತ್ತದೆ. ಅದೇ ಅದರ ಮೊದಲು ಭಾಷೆ. ನಮಗೆಲ್ಲ ಮೋಜೆನ್ನಿಸುವ ಮಗುವಿನ ಮುದ್ದು ಭಾಷೆ. ಅದು ಯಾವ ಭಾಷೆಯಲ್ಲೂ ಇರಬಹುದು. ಮುಂದೆ ಮಗು ಬೆಳೆದ ಹಾಗೆ ಮಗುವಿನ ಪದ ಸಂಪತ್ತು ಬೆಳೆದು ಉಚ್ಚಾರಣೆ ಸ್ಪಷ್ಟವಾಗುತ್ತಾ ಭಾಷೆ, ವಾಕ್ಯಗಳು ಶುದ್ಧವಾಗುತ್ತ ಹೋಗುತ್ತವೆ. ವ್ಯಾಕರಣದ ಅನೇಕ ನಿಯಮಗಳಿಗೆ ಸ್ವಯಂ ಬದ್ಧವಾಗುತ್ತ ಹೋಗುತ್ತದೆ. ಅಲ್ಲಿಗೆ ಸಾಮಾನ್ಯ ದೃಷ್ಟಿಯಿಂದ ಮಾತು ಕಲಿತಂತಾಗುತ್ತದೆ.

ನಮ್ಮ ದೈನಂದಿನ ಜೀವನಕ್ಕೆ ಯಾವುದೇ ಭಾಷೆಯ ಕೆಲವೇ ಸಾವಿರ ಪದ ಸಂಗ್ರಹ ಸಾಕಾಗುತ್ತದೆ. ಆದರೆ ವಿಚಾರವಂತರಿಗೆ ಹೆಚ್ಚು ಹೆಚ್ಚು ಪದಗಳ ಅಗತ್ಯವಾಗುತ್ತದೆ. ಸಾಮಾನ್ಯ ಮಾತಿಗೂ, ಮಾತುಗಾರಿಕೆಗೂ ಇಲ್ಲಿ ನಾವು ವ್ಯತ್ಯಾಸವನ್ನು ನೋಡಬಹುದು. ಸಾಮಾನ್ಯ ಮಾತೆಂದರೆ ಸರಳ ಹಾಗೂ ಕಡಿಮೆ ಪದಗಳ ಬಳಕೆ. ಮತ್ತು ಹೆಚ್ಚಿನ ವಿಚಾರವಿಲ್ಲದಿರುವುದು. ಆದರೆ ಮಾತುಗಾರಿಕೆ ಹಾಗಲ್ಲ, ಅದು ಕಲಾತ್ಮಕ. ಅಂದರೆ ಸರಳವಾಗಿ ಹೇಳಬಹುದಾದ್ದನ್ನೇ ಮೋಹಕವಾಗುವಂತೆ ಸುಂದರವಾಗಿ ಹೇಳುವುದು. ಎಲ್ಲ ರೀತಿಯ ದೋಷಗಳಿಂದ ಮುಕ್ತವಾದದ್ದು.

ಉದಾಹರಣೆಯೊಂದನ್ನು ಗಮನಿಸೋಣ — "ನೀವು ಬಂದದ್ದು ನಮಗೆ ಸಂತೋಷ". ಇದು ಸರಳವಾಗಿದೆ.—"ನಿಮ್ಮ ಆಗಮನದಿಂದ ನಿಮ್ಮ ಪಾದ ಧೂಳಿ ಸ್ಪರ್ಶದಿಂದ, ನಮ್ಮ ಹೃನ್ಮನಗಳು ಗರಿಗೆದರುವಂತಾಯಿತು" ಇಂತಹ ಮಾತು ಕಲಾತ್ಮಕ, ಸುಂದರ. ಇಲ್ಲಿ ಮಾತುಗಾರಿಕೆಯ ಚಮತ್ಕಾರವಿದೆ. ಈ ಉದಾಹರಣೆಯನ್ನು "ಒಳ್ಳೆಯ ಭಾಷೆ" ಎಂಬುದಕ್ಕೂ ತೆಗೆದುಕೊಳ್ಳಬಹುದು.

ನಾವು ಮಾತನಾಡುವಾಗ ಅನೇಕರು ಅದು "ಒಳ್ಳೆಯ ಭಾಷೆ", "ಕೆಟ್ಟಭಾಷೆ" ಎನ್ನುವುದನ್ನು ಕೇಳುತ್ತೇವೆ. ಸಭ್ಯತೆಯ ಎಲ್ಲೆಯೊಳಗಿರುವುದೆಲ್ಲ ಒಳ್ಳೆಯಭಾಷೆ. ಶಾಸನ ಸಭೆಯ ಕಲಾಪಗಳಲ್ಲಿ ಅನೇಕ ಬಾರಿ "ಪಾರ್ಲಿಮೆಂಟರಿ ಅಲ್ಲದ ಪದಗಳನ್ನು ತೆಗೆದು ಹಾಕುವುದು" ಎಂದು ಕೇಳುತ್ತೇವೆ. ಸಾಮಾನ್ಯವಾಗಿ ಒಳ್ಳೆಯ ಭಾಷೆಯನ್ನು ನಾವು ಹೀಗೆ ಗುರುತಿಸಬಹುದು—ನಮ್ಮ ಮಾತಿಗೆ ಬಳಸುವ ಭಾಷೆ ಕನ್ನಡ, ಇಂಗ್ಲಿಷ್

ಅಥವಾ ಬೇರೆ ಯಾವುದೇ ಇರಲಿ ಅದು ಸಂಪೂರ್ಣವಾಗಿ, ಇಲ್ಲವೇ ಸಾಧ್ಯವಾದಷ್ಟು ತನ್ನ ಭಾಷೆಯ ಪದಗಳಿಂದಲೇ ಕೂಡಿರಬೇಕು, ಒಳ್ಳೆಯ ಪದಗಳಿಂದ, ಎಲ್ಲರಿಗೂ ಅರ್ಥವಾಗುವ ಪದಗಳಿಂದ, ಕರ್ಕಶ, ಮತ್ತು ಉದ್ರೇಕಕಾರಿಯಲ್ಲದ ಪದಗಳಿಂದ ಕೂಡಿರಬೇಕು. ವ್ಯಾಕರಣ ದೋಷದಿಂದ ಮುಕ್ತವಾಗಿರಬೇಕು. ಪದಾರ್ಥಗ್ರಹಣಕಾರರಿಗೆ ಗಲಿಬಿಲಿಯುಂಟಾಗಬಾರದು. ಬಳಸುವ ಪದಗಳು ಕಾಲ, ಸಂದರ್ಭ, ಶ್ರೋತೃಗಳಿಗೆ ತಕ್ಕಂತೆ ಇದ್ದರೆ ಒಳ್ಳೆಯ ಭಾಷೆಯೆಂದು ಗುರುತಿಸಲ್ಪಡುತ್ತದೆ.

ಪರಭಾಷಾ ಪದಗಳ ಬಳಕೆ ಒಳ್ಳೆಯ ಮಾತುಗಾರಿಕೆಯಲ್ಲಿ ನಿಷಿದ್ಧವೇನಲ್ಲ. ಕೆಲವು ಬಾರಿ ಬಳಕೆಯಲ್ಲಿಲ್ಲದ ಸ್ವಭಾಷಾಪದಗಳನ್ನು ಬಳಸಿ ಕೇಳುಗರನ್ನು ಗೊಂದಲದಲ್ಲಿ ಕೆಡುಹುವುದಕ್ಕಿಂತ ಎಲ್ಲರಿಗೂ ಗೊತ್ತಿರುವ ಪರಭಾಷಾಪದಗಳನ್ನು ಬಳಸುವುದು ಹಿತಕರವಾಗಿರುತ್ತದೆ. ಹಾಗೆಯೇ ಕಾಲ ಸಂದರ್ಭ ಹಾಗೂ ಜನರನ್ನು ನೋಡಿ ಹೊಂದುವಂತಹ ಭಾಷೆಯನ್ನು ಉಪಯೋಗಿಸಬೇಕಾಗುತ್ತದೆ. ಯಾರಿಗೆ ಭಾಷೆಯ ಮೇಲೆ ಹಿಡಿತವಿರುತ್ತದೋ ಪದಗಳನ್ನು ಲೀಲಾಜಾಲವಾಗಿ ಬಳಸಬಲ್ಲರೋ ಅವರು ಒಳ್ಳೆಯ ಮಾತುಗಾರರಾಗಲು ಅವಕಾಶ ಹೆಚ್ಚು.

ವಾಗ್ದೋಷಗಳಿಗೆ ಸಂಬಂಧಿಸಿದಂತೆ ಅಂಗದೋಷ, ಭಾಷಾದೋಷಗಳನ್ನು ನೋಡಿದ್ದಾಯಿತು. ಇನ್ನೊಂದು ದೋಷ ವಿಚಾರ ದೋಷ. ಕೆಲವರಿಗೆ ಸ್ಫುಟವಾದ ಉಚ್ಚಾರಣೆ ಆಕರ್ಷಕ ಭಾಷೆ ಇದ್ದರೂ ಅವರ ಮಾತು ಸರಿಯೆನ್ನಿಸುವುದಿಲ್ಲ. ಇದಕ್ಕೆ ಅವರ ಮಾತಿನಲ್ಲಿರುವ ವಿಚಾರಗಳೇ ಕಾರಣವಾಗಬಹುದು. ಮಾತಿನ ಉದ್ದೇಶವೆಂದರೆ ಮನಸ್ಸಿನ ಭಾವನೆಗಳ ಅಭಿವ್ಯಕ್ತಿ. ಹೀಗೆ ವ್ಯಕ್ತವಾಗುವ ಭಾವನೆಗಳನ್ನು ಇನ್ನೊಂದು ಮನಸ್ಸಿಗೆ ನಾಟುವಂತೆ ಮಾಡುವುದರಲ್ಲಿ ಮಾತಿನ ಪ್ರಭಾವ ದೊಡ್ಡದು—'ಅಯ್ಯಾ ಎನೆ ಸ್ವರ್ಗ ; ಎಲವೋ ಎನೆ ನರಕ' ಎಂದರು ಬಸವಣ್ಣನವರು. ನಮ್ಮ ವಿಚಾರ ಅಥವಾ ಭಾವನೆ ಹುಟ್ಟುವುದು ನಮ್ಮ ಮೆದುಳಿನಲ್ಲಿ ಎನ್ನುತ್ತಾರೆ ವಿಜ್ಞಾನಿಗಳು. ಬೇರೆ ಬೇರೆ ಪಶು ಪಕ್ಷಿಗಳ ಮೆದುಳಿಗಳಿಗಿಂತ ಮನುಷ್ಯನ ಮೆದುಳು ಭಿನ್ನವಾಗಿರುವುದರಿಂದ ಈತ ಬುದ್ಧಿಶಾಲಿಯಾಗಿದ್ದಾನೆ. ಈತನ ಮೆದುಳು ಉಳಿದ ಪಶು, ಪಕ್ಷಿಗಳ ಮೆದುಳಿಗಳಿಗಿಂತ ಹೆಚ್ಚು ತೂಕವುಳ್ಳದ್ದೆಂದೂ ಇದು ಇವನ ಮೇಧಾವಿತನಕ್ಕೊಂದು ಕಾರಣವೆಂದು ಕೆಲವು ವಿಜ್ಞಾನಿಗಳ ಮತ. ಈ ಮೇಧಾವಿತನವನ್ನು "ಮತಿ" ಎನ್ನುತ್ತಾರೆ. ಈ ಮತಿಯಿಂದಲೇ 'ಮಾತು' ಹುಟ್ಟುತ್ತದೆ. ಮತಿಯ ಕೇಂದ್ರ ನೆಲೆ ಮೆದುಳು. ಒಬ್ಬರು ತಪ್ಪು ಮಾತಾಡಿದಾಗ "ಅವನಿಗೆ ತಲೆ ಸರಿ ಇಲ್ಲ "— "ಮೆದುಳು ಸರಿ ಇಲ್ಲ" ಎಂದೆಲ್ಲ ಹೇಳುವುದು ಇದಕ್ಕಾಗಿಯೇ. ಮೆದುಳಿನ ಬಗ್ಗೆ ಅಧ್ಯಯನ ಮಾಡಿದ ವಾಗ್ಭಟನೆಂಬ ಪ್ರಾಚೀನ ವಿಜ್ಞಾನಿಯು ಮೆದುಳಿನಲ್ಲಿರುವ "ಸ್ಮೃತಿ ಅಥವಾ "ಎಚ್ಚರ''ದ ವಿಭಾಗಕ್ಕೆ ದೋಷ ತಗುಲಿದರೆ "ಅಪಸ್ಮಾರ" ರೋಗ ಉಂಟಾಗುತ್ತದೆ ಮತ್ತು "ಧೀ" ಶಕ್ತಿಯು ಸ್ತಬ್ಧವಾದಾಗಲೂ ಚಿಂತೆ, ಶೋಕ ಭಯಗಳಿಂದ ಚಿತ್ತಕ್ಕೆ ಹಾನಿಯಾದಾಗಲೂ ವಾಗಂಗಗಳು ಸರಿ ಇದ್ದರೂ ಮಾತು ನಿಲ್ಲುತ್ತದೆ ಎಂದು ಅಭಿಪ್ರಾಯಪಡುತ್ತಾನೆ.

ಮೆದುಳು ಮಾತಿನ ಕ್ರಿಯೆಯ ಮೂಲಾಂಗವೂ ಹೌದು. ಆದರೆ ಅಗೋಚರವಾದ, ಅನುಭವ ವೇದ್ಯವಾದ ಮನಸ್ಸು, ಪ್ರಾಣ, ಜೀವ ಎಂದೆಲ್ಲ ಕರೆಸಿಕೊಳ್ಳುವುದೊಂದು ನಮ್ಮಲ್ಲಿದೆ. ಅದೇ ಮಾತಿನ ಮೂಲ. ವಿಜ್ಞಾನಿಗಳು, ಆಧ್ಯಾತ್ಮವಾದಿಗಳು ಈ ಅಸಂಗವಾದುದನ್ನು ಎಷ್ಟೋ ವಿಭಾಗ ಮಾಡುತ್ತಾರೆ. ಒಟ್ಟಿನಲ್ಲಿ ಮನಸ್ಸು ಮಾತಿನ ಮೂಲ ಎಂದುಕೊಂಡು ನೋಡೋಣ. ವಾಕ್ಕ್ರಿಯನ್ನು ಕುರಿತು ಅಧ್ಯಯನ ಮಾಡಿದ ಪ್ರಾಚೀನ ಆಯುರ್ವೇದ ವಿಜ್ಞಾನಿ "ಚರಕ"ನು ಸೂಕ್ಷ್ಮತೆ ಮತ್ತು ಅಖಂಡತೆಗಳು ಮನಸ್ಸಿನ ಗುಣಗಳೆಂದೂ ಇವಕ್ಕೆ ಅಪಾಯವಾದರೆ ಮಾತಿನಲ್ಲಿ ದೋಷ ಹುಟ್ಟುತ್ತದೆಂದೂ ಹೇಳಿದ್ದಾನೆ.

ಮನಸ್ಸು ವಿಚಾರ ಮಾಡುವಂತಹುದು. ಇದಕ್ಕೆ ಮೆದುಳಿನ ಸಹಕಾರ ಬೇಕು. ಒಬ್ಬರ ಆಸೆ, ಆಕಾಂಕ್ಷೆ, ಅನುಭವ, ಕಲ್ಪನಾ ಸಾಮರ್ಥ್ಯ, ಮೊದಲಾದ ಅನೇಕ ಅಂಶಗಳ ಒತ್ತಡದಿಂದ ಮನಸ್ಸಿನಲ್ಲಿ ಅನೇಕ ಭಾವನೆಗಳು ಹುಟ್ಟುತ್ತವೆ. ಇವುಗಳನ್ನೆಲ್ಲ ಪರಿಶೀಲಿಸಿ ಮಾತಿನ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಇದೇ ವಿಚಾರ ಕ್ರಿಯೆ. ಭಾವನೆಗಳು ಹೆಚ್ಚಾದಾಗ ವಿಚಾರ ಕ್ರಿಯೆ ಸರಳವಾಗಿ ನಡೆಯದು. ಅಥವಾ ಮನಸ್ಸಿಗೆ ಅನ್ನಿಸಿದ್ದನ್ನೆಲ್ಲಾ ಹೇಳುವುದೂ ವಿಚಾರವಾಗದು. ಮನಸ್ಸಿನಲ್ಲಿ ವಿಚಾರದಿಂದ ಆಯ್ಕೆಯಾದ ಭಾವನೆ ಧ್ವನಿಯಾಗಿ ವಾಗಂಗಗಳ ಮೂಲಕ ಪ್ರಕಟವಾಗುತ್ತದೆ. ಇದನ್ನೇ ಪ್ರಾಚೀನ ವಿದ್ವಾಂಸರು "ವಾಣಿ" ಎಂದು ಕರೆದರು. ಚಿಂತನ ಕ್ರಿಯೆಗೆ ಸಂಬಂಧಿಸಿದ ಇಂತಹ ವಾಣಿಯನ್ನು ಪೂರ್ವಿಕರು ನಾಲ್ಕು ಪ್ರಭೇದಗಳಿಂದ ಗುರುತಿಸಿದ್ದಾರೆ. ಅವು ಯಾವುವೆಂದರೆ— (೧) ಸೂಕ್ಷ್ಮ ಅರಿವಿನ ಪರಾವಾಣಿ, (೨) ಅಂತರಂಗದಲ್ಲಿ ಧ್ವನಿತವಾಗುವ ವಾಣಿ (೩) ತನ್ನಲ್ಲೇ ಗುಣಗುಣಿಸುವ ಮಧ್ಯಮ ವಾಣಿ (೪) ಪ್ರತ್ಯಕ್ಷವಾಣಿ.

ನಮ್ಮ ಬಹಿರಂಗದ ಮಾತೇ ಪ್ರತ್ಯಕ್ಷವಾಣಿ. ಉಳಿದುದೆಲ್ಲ ಒಳಗಿನವು. ಪ್ರತ್ಯಕ್ಷವಾಣಿ ಮುಖದಿಂದ ಹೊರಬೀಳುತ್ತದೆ. ಹೀಗೆ ಹೊರಹೊಮ್ಮುವ ವಾಣಿಯು ಎರಡು ರೀತಿಯಲ್ಲಿರಬಹುದು. ಮೊದಲನೆಯದು ಗದ್ಯವಾದರೆ ಎರಡನೆಯದು ಕಿವಿಗಿಂಪಾಗುವ ಹಾಡು ಅಥವಾ ಪದ್ಯ. ಹಾಡು, ಸಂಗೀತ, ಪದ್ಯ ಎಂದೆಲ್ಲ ಕರೆಸಿಕೊಳ್ಳುವ ವಾಣಿ ಹೇಗಿರಬೇಕು ಎಂಬುವರ ಬಗ್ಗೆ ಹಿಂದಿನಿಂದಲೂ ಅಧ್ಯಯನ ನಡೆದು ಬಂದಿದೆ. ತಾಳ, ಲಯ, ರಾಗ, ಕೃತಿ, ಇವುಗಳನ್ನೆಲ್ಲ ಸೃಷ್ಟಿಸಿರುವ ಸಂಗೀತ ಶಾಸ್ತ್ರವೊಂದು ಬೆಳೆದಿದೆ. ನಮ್ಮ ಪೂರ್ವಿಕರು "ಸಪ್ತಸ್ವರ"ಗಳನ್ನೆ ಅನ್ವೇಷಿಸಿದ್ದಾರೆ. ಉಸಿರಿನಿಂದ ಊದಿ ವಿವಿಧ ವಾದ್ಯಗಳಲ್ಲಿ 'ವಾಣಿ'ಯನ್ನು ಹೊರ ಹೊಮ್ಮಿಸುವ ಸಾಧನೆ ಅಮೋಘ, ಅದ್ಭುತ, ಇದು ವಾಕ್ಕ್ರಿಯ ಒಂದು ರೂಪ.

ಇನ್ನು ಮಾತುಗಾರಿಕೆಯತ್ತ ಹೊರಳೋಣ. ಗದ್ಯಕ್ಕೆ ಸಾಮಾನ್ಯವಾಗಿ ಒಂದೇ ರಾಗ. ಆದರೆ ಇಲ್ಲಿಯೂ ಕೂಡಾ ಧ್ವನಿಯಲ್ಲಿ ಏರಿಳಿತಗಳುಂಟು. ಕೋಪ ದುಃಖ ಸಾಂತ್ವನ ಹೀಗೆ ಬೇರೆ ಬೇರೆ ಭಾವನೆಗಳನ್ನು ವ್ಯಕ್ತಪಡಿಸಲು ಧ್ವನಿಯಲ್ಲಿ ಉಚ್ಚಾರಣೆಯಲ್ಲಿ ಏರಿಳಿತಗಳನ್ನುಂಟು ಮಾಡಬೇಕಾಗುತ್ತದೆ.

ನಮ್ಮ ಪ್ರಾಚೀನ ವಿದ್ವಾಂಸರು ಓದುವ ಮತ್ತು ಮಾತಾಡುವವನನ್ನು "ಪಾಠಕ" ಎಂದು ಗುರುತಿಸಿ ಅವನಲ್ಲಿರಬೇಕಾದ ಮತ್ತು ಇರಬಾರದ ಗುಣಗಳನ್ನು ಪಟ್ಟಿ ಮಾಡಿದ್ದಾರೆ. ಪಾಠಕನಲ್ಲಿ ಇಂಪಾದ ಧ್ವನಿ, ಸ್ಫುಟವಾದ ಅಕ್ಷರೋಚ್ಚಾರಣೆ, ಅರ್ಥವಾಗುವಂತಹ ಪದವಿಭಾಗ ಮತ್ತು ಗ್ರಾಹಕರಿಗೆ ತಲುಪುವಷ್ಟು ಘಟ್ಟಿಧ್ವನಿ, ಸಭಾಕಂಪನವಿಲ್ಲದಿರುವುದು, ಲಯಬದ್ಧವಾದ ಧ್ವನಿ ಇವು ಇರಬೇಕು ಎನ್ನುತ್ತಾರೆ.

ಹಾಗೆಯೇ ರಾಗವಾಗಿ ಎಳೆದು ಮಾತನಾಡುವುದು, ತ್ವರಿತವಾಗಿ ಹೇಳುವುದು, ತಲೆಯಾಡಿಸುತ್ತ ಹೇಳುವುದು, ತಪ್ಪಿದ್ದರೂ ತಿದ್ದಿಕೊಳ್ಳದೇ ಓದುವುದು, ಅರ್ಥವರಿಯದೆ ಆಡುವುದು, ಕೇಳದಂತಹ ಧ್ವನಿಯಲ್ಲಿ ಮಾತಾನಾಡುವುದು ಇವೆಲ್ಲ ಇರಬಾರದೆಂದೂ ಇಂತಹ ಅಭ್ಯಾಸದವರನ್ನು "ಪಾಠಕಾಧಮ"ರೆಂದೂ ಗುರುತಿಸಿದ್ದಾರೆ. ನಮ್ಮ ಪ್ರಾಚೀನ ವಿದ್ವಾಂಸರು ಶಬ್ದೋಚ್ಚಾರಣೆಯಲ್ಲಿ ಕಂಡುಬರುವ ಕೆಲವು ದೋಷಗಳನ್ನು ಗುರುತಿಸಿ ಹೇಳಿದ್ದಾರೆ. ಇವುಗಳನ್ನು ಮಾತುಗಾರರು ಗಮನದಲ್ಲಿಟ್ಟುಕೊಳ್ಳಬೇಕು. ಅವು ಯಾವುವೆಂದರೆ— (೧) ಶಂಕಿಸಿ ಆಡುವುದು (೨) ಭಯದಿಂದ ಆಡುವುದು (೩) ವಿರಾಮರಹಿತವಾಗಿ, (೪) ಅಸ್ಪಷ್ಟವಾಗಿ (೪) ಮೂಗಿನಲ್ಲಿ ಆಡುವುದು (೬) ಕಾಗೆಯಂತೆ ಕರ್ಕಶವಾಗಿ (೭) ಅಕ್ಷರಗಳನ್ನು ಏರಿಸಿ (೮) ಅಕ್ಷರಗಳನ್ನು ಅನಗತ್ಯವಾಗಿ ತಪ್ಪು ಸ್ಥಾನಗಳಲ್ಲಿ ಬಳಸಿ (೯) ತಡೆದು ತಡೆದು (೧೦) ಬಿಕ್ಕುವಂತೆ (೧೧) ಅಕ್ಷರಗಳನ್ನು ಎಳೆದು ರಾಗವಾಗಿ (೧೨) ಅಕ್ಷರಗಳನ್ನೋ ಪದಗಳನ್ನೋ ನುಂಗುತ್ತ ಆಡುವುದು (೧೩) ಹ್ರಸ್ವವನ್ನು ದೀರ್ಘವಾಗಿಯೂ, ದೀರ್ಘವನ್ನೇ ಹ್ರಸ್ವವಾಗಿಯೂ ಆಡುವುದು (೧೪) ಅಕ್ಷರಗಳನ್ನು ಸಂದೇಹಾಸ್ಪದವಾಗಿ ಉಚ್ಚರಿಸುವುದು (೧೫) ಎಂಜಲು ತುಂಬಿಕೊಂಡು ಆಡುವುದು—ಇವೆಲ್ಲ ಮಾತುಗಾರಿಕೆಗೆ ಸಂಬಂಧಿಸಿದ ದೋಷಗಳು. ಒಳ್ಳೆಯ ಮಾತುಗಾರರಾಗಬಯಸುವವರು ಇಂತಹ ದೋಷಗಳಿಂದ ಮುಕ್ತರಾಗಬೇಕು.

ಎಳೆಯ ಮಗು ಬಾಯಿಗೆ ಬಂದದ್ದನ್ನೆಲ್ಲಾ ಆಡುತ್ತದೆ. ಹಾಗೆ ಆಡುವಾಗ ಯಾವುದನ್ನು ಹೇಗೆ ಹೇಳಬೇಕು ಮತ್ತು ಯಾವಾಗ ಹೇಳಬೇಕು ಎಂಬ ಪರಿವೆ ಅದಕ್ಕಿರುವುದಿಲ್ಲ. ಇದೇ ವಿಚಾರ ದೋಷ. ಮಕ್ಕಳು ಏನು ಹೇಳಿದರೂ ಅದಕ್ಕೆ ಕ್ಷಮೆಯಿದೆ. ಆದರೆ ಮಗು ಬೆಳೆಯುತ್ತ ಹೋದಂತೆ ಅದರ ಜೀವನ, ಬುದ್ಧಿ ವಿಕಾಸವಾದಂತೆ ಅದರ ಪ್ರಪಂಚ ಜ್ಞಾನ ಬೆಳೆಯುತ್ತ ಹೋಗುತ್ತದೆ. ವಿವಿಧ ರೀತಿಯಲ್ಲಿ ಶಿಕ್ಷಣ ದೊರಕುತ್ತದೆ. ಕ್ರಮೇಣ ಮಗು ದೊಡ್ಡದಾದ ಹಾಗೆ ಮಾತಿನ ಬಗ್ಗೆ ಸಂಯಮ ತಾಳುವುದನ್ನು ಕಲಿಯುತ್ತ ಹೋಗುತ್ತದೆ. ತೊದಲ್ನುಡಿಯಿಂದ ಪ್ರೌಢೋಚ್ಚಾರಣೆಗೆ ಅದು ಬರುತ್ತದೆ. ಹಾಗೆಯೇ ಅದು ವಿಚಾರಿಸ ತೊಡಗುತ್ತದೆ. ಶಿಕ್ಷಣ, ಸಂಸ್ಕಾರ, ಅನುಭವ, ಪರಿಸರದ ಒತ್ತಡ ಇವುಗಳಿಂದ ವಿಚಾರಶಕ್ತಿಯೊಂದು ನಮ್ಮಲ್ಲಿ ಉಂಟಾಗುತ್ತದೆ. ಅದು ವಿಚಾರಲೋಪವನ್ನು ತಡೆಗಟ್ಟುತ್ತದೆ.

ಇಲ್ಲಿ ಇನ್ನೊಂದು ಸಮಸ್ಯೆ ಹುಟ್ಟುತ್ತದೆ. ಯಾವುದು ವಿಚಾರ ಮತ್ತು ಯಾವುದು ಅವಿಚಾರ. ಅಥವಾ ದೋಷಯುಕ್ತ ವಿಚಾರ. ಇದನ್ನ ಸುಲಭವಾಗಿ ಹೇಳಲಾಗದು.

ಆದರೆ ಹಾನಿಕಾರಕವಾದುದೆಲ್ಲ ಅವಿಚಾರ ಅಥವಾ ಅಸಕ್ತ ವಿಚಾರ ಎನ್ನಬಹುದು. ಆದರೆ ನಾವು ಕೋಪ, ದುಃಖ, ಉದ್ವೇಗ, ನಂಬಿಕೆ, ಸಂತೋಷದಂತಹ ಸಂದರ್ಭಗಳಲ್ಲಿ ಮನಸ್ಸಿನಲ್ಲಿರುವುದನ್ನೆಲ್ಲಾ ಆಡಿಬಿಡುತ್ತೇವೆ. ಇದರಿಂದ ಅನೇಕ ಅಪಾಯಗಳಾಗುವುದೂ ಉಂಟು. ಆದ್ದರಿಂದ ಇಲ್ಲಿ ಸಂಯಮ, ಪರಿಶೀಲನೆ, ಪರಿಣಾಮ, ವಿವೇಚನೆಗಳು ಅಗತ್ಯ. ಅವಿಚಾರವನ್ನು ಕುರಿತು ಹಳ್ಳಿಗಾಡಿನಲ್ಲಿರುವ ಒಂದು ನುಡಿಕಟ್ಟು ಒಳ್ಳೆಯ ವಿವರಣೆಯಾಗಬಹುದು. ಅದು ಯಾವುದೆಂದರೆ—'ನೂರು ಬೀಳುಮಾತಿಗಿಂತ ಒಂದು ಕಾಳು ಮಾತು ಉತ್ತಮ' ಎಂಬುದು.

ನಾವು ಮಾತನಾಡುವುದು ಪರರ ಗಮನವನ್ನು ನಮ್ಮತ್ತ ಸೆಳೆಯಲಿಕ್ಕಾಗಿ. ಆದರೆ ನಾವು ಮಾತನ್ನ ಆಡಬೇಕಾಗುತ್ತದೆ. ಆದರೆ ಕೆಲವರು ಅಗತ್ಯವಿರುವಷ್ಟು ಮಾತನ್ನೂ ಆಡುವುದಿಲ್ಲ. ಇಂತಹವರನ್ನು "ಗುಮ್ಮನಗುಸುಗ" ಎಂದು ಕರೆಯುತ್ತಾರೆ. ಹಾಗೆಯೇ ಅಗತ್ಯಕ್ಕಿಂತ ಹೆಚ್ಚು ಮಾತಾಡುವವರನ್ನು "ವ್ಬೈರಿಗೆ" ಎಂದೂ ಕರೆಯುತ್ತಾರೆ. ಆದ್ದರಿಂದ ಹಿತವಾಗಿ, ಮಿತವಾಗಿ, ಸುಂದರವಾಗಿ, ಆಕರ್ಷಣೀಯವಾಗಿ ಮಾತಾಡುವುದೇ "ಮಾತುಗಾರಿಕೆ." ನಮ್ಮ ಮಾತಿನ ಆತ್ಮವು 'ವಿಚಾರ' ಎಂಬುದು ಸ್ಪಷ್ಟ. ಆದ್ದರಿಂದ ನಮ್ಮ ಮಾತುಗಳೆಂದರೆ ನಮ್ಮ ವಿಚಾರಗಳೆಂದೇ ಅರ್ಥ. ನಮ್ಮ ವಿಚಾರಗಳು ರಚನಾತ್ಮಕವೂ, ಸೃಜನಶೀಲವೂ, ವ್ಯಷ್ಟಿ ಹಾಗೂ ಸಮಷ್ಟಿ ಬದುಕಿಗೆ ಹಿತಕಾರಿಯೂ ಆಗಿದ್ದರೆ ಒಳ್ಳೆಯದು. ಹಿಟ್ಲರ್ ಒಳ್ಳೆಯ ಮಾತುಗಾರನಾಗಿದ್ದನಂತೆ. ಆದರೆ ಆತನ ವಿಚಾರಗಳು ದೋಷಪೂರ್ಣವಾಗಿದ್ದವು. ಪ್ರತಿದಿನವೂ ನಾವು ಬೆಣ್ಣೆಯಹಾಗೆ ಮಾತನಾಡಿ ಮೋಸಪಡಿಸುವ ಜನರ ಬಗ್ಗೆ ಕೇಳುತ್ತೇವೆ. ನಮ್ಮ ಮಾತು ಹೇಗಿರಬೇಕು ಎಂಬ ಬಗ್ಗೆ ಅನೇಕರು ಹೇಳಿದ್ದಾರೆ.—"ನುಡಿದರೆ ಮುತ್ತಿನ ಹಾರದಂತಿರಬೇಕು." ಎಂದು ವಚನಕಾರರು ಹೇಳಿದ್ದಾರೆ. ಸಂಸ್ಕೃತ ಸುಭಾಷಿತವೊಂದು—"ಸತ್ಯವನ್ನು ಹೇಳು ಪ್ರಿಯವನ್ನು ಹೇಳು ಅಪ್ರಿಯವಾದ ಸತ್ಯವನ್ನು ಹೇಳಬೇಡ. ಪ್ರಿಯವಾದ ಅಸತ್ಯವನ್ನು ಹೇಳಬೇಡ" ಎನ್ನುತ್ತದೆ. ಇದು ತನಕ ವಾಗ್ದೋಷಗಳಿಗೆ ಸಂಬಂಧಿಸಿದ ಅನೇಕ ವೈಜ್ಞಾನಿಕ ವಿಚಾರಗಳನ್ನು ನೋಡಿದ್ದಾಯಿತು. ಇನ್ನು ಮುಂದೆ ಮಾತುಗಾರಿಕೆಯ ವಿಸ್ತೃತ ರೂಪವನ್ನು ಅದರ ಕಲಾಸ್ವರೂಪವನ್ನು ನೋಡಬಹುದಾಗಿದೆ.

ಮಾತಿನ ಮುಖಗಳು

ಮೂಗರ ಹೊರತಾಗಿ ಎಲ್ಲರೂ ಮಾತಾಡುತ್ತೇವೆ. ಆದರೆ ಸಮಾಜ ಕೆಲವರನ್ನು ಮಾತ್ರ ಮಾತುಗಾರರೆಂದು ಗುರುತಿಸುತ್ತದೆ. ಇದಕ್ಕೆ ಕಾರಣ ಅವರ "ಪ್ರತಿಭಾಪೂರ್ಣ" ಮಾತುಗಾರಿಕೆ. ವಾಕ್‌ಪ್ರತಿಭೆ ದೈವದತ್ತವೆಂದು ಕೆಲವರು ಹೇಳುತ್ತಾರಾದರೂ ಅದನ್ನು ಸತತ ಪ್ರಯತ್ನದಿಂದ ಸಿದ್ಧಿಸಿಕೊಂಡವರ ಉದಾಹರಣೆಗಳೂ ಇವೆ. ಮಾತು ಗದ್ಯ–ಪದ್ಯಗಳಲ್ಲಿ ವ್ಯಕ್ತವಾಗಬಹುದೆಂದು ಹಿಂದೆ ಹೇಳಿವೆ. ಹಾಗೆಯೇ ಅದು

ಸಂಭಾಷಣೆ, ಭಾಷಣ, ವಾದ, ಚರ್ಚೆ, ಮೊದಲಾದ ರೀತಿಯಲ್ಲೂ ವ್ಯಕ್ತವಾಗುತ್ತದೆ. ಇವುಗಳನ್ನು ಮಾತಿನ ಬಹುಮುಖಗಳೆಂದು ಕರೆಯಬಹುದಾಗಿದೆ.

ಸಂಭಾಷಣೆ

"ಸಂಭಾಷಿಸು" ಎಂದರೆ ಸರಿಯಾಗಿ ಮಾತನಾಡು ಎಂದರ್ಥ. ಭಾಷಣದ ರೂಪಾಂತರಿತ ಪದವಿದು. 'ಭಷಣ' ಎಂದರೆ "ಬೊಗಳು" ಎಂದರ್ಥ, ಬರಿಯ ಮಾತನ್ನ "ಬೊಗಳೆ" ಎಂದು ಹೇಳುತ್ತಾರೆ. ಹಾಗೆಂದರೆ ಹೊಟ್ಟ ಮಾತು. ಸತ್ವ ಹೀನ ಮಾತು. ಕನ್ನಡದಲ್ಲಿ ಇಬ್ಬರು ಸೇರಿ ಪರಸ್ಪರ ಮಾತಾಡುವುದನ್ನ "ಸಂಭಾಷಣೆ" ಎನ್ನುತ್ತಾರೆ. ಇಲ್ಲಿ ನಡೆಯುವ ಮಾತಿನ ವಿನಿಮಯ ಅರ್ಥಪೂರ್ಣವೂ ಸುಲಲಿತವೂ ಆಗಿರಬೇಕು. ಕೆಲವು ಬಾರಿ ಇಬ್ಬರ ನಡುವೆ 'ಮಾತೇನೋ ನಡೆಯುತ್ತದೆ' ಆದರೆ ಅದು ಉದ್ರೇಕ, ಅಶ್ಲೀಲ, ಅರ್ಥ ಹೀನತೆಯಿಂದಲೂ ಕೂಡಿರಬಹುದು. ಅದನ್ನು ಜಗಳ, ಕಲಹ ಎಂದೆಲ್ಲ ಕರೆಯುತ್ತಾರೆ. ಜಗಳ, ಸಂಭಾಷಣೆಗಳ ನಡುವಿನ ವ್ಯತ್ಯಾಸ ಎಲ್ಲರಿಗೂ ತಿಳಿಯುವಂತಹ ವಿಚಾರ. ನಮ್ಮ ಜನಪದ ನಾಣ್ಣುಡಿಯೊಂದು—"ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ" ಎಂದು ಹೇಳುತ್ತದೆ.

ಮಾತು ಸಂಭಾಷಣೆಯಾಗಬೇಕಾದರೆ ಅದು ಕೆಲವು ನಿಯಮಗಳಿಗೆ ಹೊಂದಬೇಕಾಗುತ್ತದೆ. ಸಂಭಾಷಣೆಗೆ ಹೇಳುವವ ಮತ್ತು ಕೇಳುವವ ಇರಬೇಕು. ತಾವು ಸಂಭಾಷಿಸುತ್ತಿರುವುದೂ, ಸಂಭಾಷಣೆಯ ವಿಚಾರವೂ ಇಬ್ಬರಿಗೂ ಗೊತ್ತಿರಬೇಕು. ಹೇಳುವಾತ ಕೇಳುವಾತನ ಶ್ರವಣಶಕ್ತಿ, ಕಾಲಾನುಕೂಲತೆ, ವಿಷಯಾಸಕ್ತಿ, ಇವುಗಳನ್ನು ಪರಿಶೀಲಿಸಿಕೊಳ್ಳಬೇಕು. ಪರಸ್ಪರ ಪ್ರತಿಕ್ರಿಯೆಯಿರಬೇಕು. ಕೆಲವರಿಗೆ ಎದುರಿನವರು ಹೇಳುವುದನ್ನು ಕೇಳಲು ತಾಳ್ಮೆಯಿರುವುದಿಲ್ಲ. ಏಕಮುಖವಾಗಿ ಮಾತನಾಡುತ್ತ ಹೋಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಂಭಾಷಣೆ ಫಲಿಸುವುದಿಲ್ಲ. ಇಂಗ್ಲಿಷ್‌ನಲ್ಲಿ ಸಂಭಾಷಣೆಗೆ "ಕನ್‌ವರ್ಜೇಶನ್ (conversation) ಎನ್ನುತ್ತಾರೆ. ಹಾಗೆಂದರೆ ಸಭ್ಯರ ನಡುವಿನ ಮಾತುಕತೆ. ಸಂಭಾಷಿಸುವಾಗ ಗೌರವಕೊಟ್ಟು ಗೌರವ ಪಡೆಯುವ ಸೂತ್ರಕ್ಕೆ ಬದ್ಧವಾಗಬೇಕು. ತೀರಾ ಆತ್ಮೀಯರೊಡನೆ ಏಕವಚನದಲ್ಲಿ ಸಂಭಾಷಣೆ ನಡೆಯುತ್ತದೆಯಾದರೂ, ಅಪರಿಚಿತರೊಡನೆ, ಅಲ್ಪಪರಿಚಿತರೊಡನೆ, ಸ್ವಾಭಿಮಾನಿಗಳೊಡನೆ, ಹಿರಿಯರೊಡನೆ, ಅಧಿಕಾರಿಗಳೊಡನೆ, ಬಹುವಚನ ಪ್ರಯೋಗವೇ ಲೇಸು.

ಕುಶಲ ಸಂಭಾಷಣೆಗೂ, ವ್ಯಾವಹಾರಿಕ ಸಂಭಾಷಣೆಗೂ ವ್ಯತ್ಯಾಸವಿದೆ. ಕುಶಲ ಸಂಭಾಷಣೆಯಲ್ಲಿ ಸಾಮಾನ್ಯವಾಗಿ ನಿರೀಕ್ಷಿತ ಅಥವಾ ನಿರ್ದಿಷ್ಟ ಉತ್ತರ ಪಡೆಯುತ್ತೇವೆ. ಒಬ್ಬರು ಪರಿಚಿತರು ಎದುರು ಸಿಕ್ಕಾಗ—ಆರೋಗ್ಯವೆ?—ಊಟವಾಯಿತೆ? ಮಳೆ ಬಂದಿತೆ?, ಸಮಾಚಾರವಿದೆಯೆ?, ಇಂತಹ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತೇವೆ. ಇವು ಅನೇಕ ಬಾರಿ ಸಾಂಪ್ರದಾಯಿಕ, ಇಲ್ಲವೇ ಪ್ರಾಸಂಗಿಕ ಮಾತುಗಳು. ಕೆಲವು ಬಾರಿ ಮಾತಾಡುವುದಷ್ಟೇ ಉದ್ದೇಶ.

ಆದರೆ ಇಂತಹ ಸಂದರ್ಭದಲ್ಲಿ ಉತ್ತರಿಸುವಾಗ— "ನನ್ನ ಆರೋಗ್ಯ ಚೆನ್ನಾಗಿಲ್ಲ ಎಂದು ಯಾರು ಹೇಳಿದರು?—ನಾನು ಆರೋಗ್ಯವಾಗಿದ್ದೇನೆಂದು ನಿಮ್ಮ ಅನಿಸುತ್ತಿಲ್ಲವೆ? ನಿಮ್ಮ ಕಣ್ಣಿಗೆ ಹೇಗೆ ಕಾಣಿಸುತ್ತದೆ?" ಹೀಗೆ ಪ್ರಶ್ನಾರ್ಥಕ ನಿಲುವಿನಿಂದಲೂ ಇದೆಲ್ಲ ಸ್ಪಷ್ಟವು ಕೊಡುವ ಉತ್ತರಗಳಲ್ಲವೇನು. ಸಾಮಾನ್ಯರಿಗೂ ಗೊತ್ತು. ಆದರೂ ಅದರೂ ಬದಲಾಗಿ ಈ ಧಾಟಿಯಲ್ಲಿ ಉತ್ತರ ಕೊಡುವುದನ್ನು ನೋಡುತ್ತೇವೆ. ಇದರಿಂದ ಅಸಹ್ಯಪಡುವನೆ, ಅಪಹಾಸ್ಯಗೊಳ್ಳುವನೆ. ಕೆಲವು ಸಂಭಾಷಣೆಗಳನ್ನು ಎಚ್ಚರಿಕೆಯಿಂದ ನಡೆಸಬೇಕು. ಕೆಲವು ಸಂಭಾಷಣೆಗಿಂತ ಭಿನ್ನವಾದ ವ್ಯವಹಾರಿಕ ಸಂಭಾಷಣೆ ಪತ್ರಿಕಾಗೋಷ್ಠಿಗಳಲ್ಲಿಯೂ ನಡೆಯುತ್ತದೆ. ಅನೇಕ ವಿಚಾರಗಳನ್ನು ಅದು ಒಳಗೊಂಡಿರುತ್ತದೆ. ವ್ಯಾಪಾರಿ ಪ್ರತಿನಿಧಿಗಳು ಜಾಹೀರಾತುದಾರರು ಸಂಭಾಷಣೆಯನ್ನು ಮಾಧ್ಯಮವಾಗಿ ಬಳಸುವುದು ಹೆಚ್ಚು.

ಚರ್ಚೆ ಮತ್ತು ವಾದ

ಇವು ಮಾತಿನ ಬೇರೆ ಬೇರೆ ಮುಖಗಳು. "ಚರ್ಚೆ" ಎಂದರೆ ವಿಚಾರವಿನಿಮಯ. ಇಂಗ್ಲಿಷಿನಲ್ಲಿ ಇದನ್ನು "ಡಿಸ್ಕಷನ್" ಎನ್ನುತ್ತಾರೆ. ಶಾಲಾ ಕಾಲೇಜುಗಳಲ್ಲಿ ಮಾತುಗಾರಿಕೆಯನ್ನು ಕಲಿಯಲು - ಚರ್ಚಾಗೋಷ್ಠಿ"ಗಳನ್ನು ನಡೆಸುತ್ತಾರೆ. ಇಲ್ಲಿ ಒಂದೊಂದು ವಿಚಾರದ ಮೇಲೆ ಪರ ಮತ್ತು ವಿರೋಧವಾಗಿ ವಾದ ನಡೆಸುತ್ತಾರೆ. ಈ ವಾದಗಳಲ್ಲಿ ಸತ್ಯವೂ ಇರಬಹುದು. ಅಸತ್ಯವೂ ಇರಬಹುದು. ಚರ್ಚೆಯಿಂದ ವಿಷಯದ ಮಥನ ನಡೆದು ಅದರ ವಿಕಾಸವಾಗುತ್ತದೆ. ನಿರ್ಧಾರ, ನಿರ್ಣಯಗಳು ಚರ್ಚೆಯಿಂದ ಫಲಿತ ಬರಬಹುದಾಗಿದೆ. ಚರ್ಚಾಗೋಷ್ಠಿಯಲ್ಲಿನ ಮಾತುಗಳನ್ನು (೧) ಖಂಡನೆ (೨) ಪ್ರತಿಪಾದನೆ ಎಂಬ ಎರಡು ರೀತಿಯಲ್ಲಿ ನೋಡಬಹುದು. ಖಂಡನೆಯೆಂದರೆ ಎದುರಾಳಿಗಳ ಅಭಿಪ್ರಾಯವನ್ನು ಸಾಧಾರಪೂರ್ವಕವಾಗಿ ಅಲ್ಲಗಳೆಯುವುದು. ಪ್ರತಿಪಾದನೆ ಎಂದರೆ ತಾನು ಹೇಳಬೇಕಾದ ಅಭಿಪ್ರಾಯಗಳನ್ನು ಆಧಾರಪೂರ್ವಕ ಸಮರ್ಥಿಸುವುದು.

ವಾದ

ಇಂಗ್ಲಿಷಿನಲ್ಲಿ "ಆರ್ಗ್ಯುಮೆಂಟ್" ಎಂಬುದನ್ನು ವಾದವೆನ್ನಬಹುದು. 'ವಾದ' ಎಂಬುದು ಸಂಸ್ಕೃತ ಪದ. ಒಬ್ಬನು ತಾನು ಅಪೇಕ್ಷಿತ ಮನಸ್ಸಿನೊಳಗಿಟ್ಟುಕೊಳ್ಳಲು, ತಾನು ಹೇಳುವ ವಿಚಾರಗಳನ್ನು ಕೇಳುವವರಿಗೆ ಅರಿವು ಮಾಡಿಸಲು ಸಾಕ್ಷ್ಯಾಧಾರ ಸಹಿತವಾಗಿ ಆಡುವ ಮಾತೇ 'ವಾದ'. ವಾದ ನಡೆಯುತ್ತಾ ಹೋದಾಗ ಸತ್ಯದ ಅರಿವು ದೊರಕುತ್ತದೆ ಎಂದು ಶಾಸ್ತ್ರವು ಹೇಳುತ್ತದೆ. ವಾದಕ್ಕೊಂದು ಕ್ರಮವಿದೆ. ಅದು ತಪ್ಪಿದಾಗ ಅದು 'ವಿತಂಡ'ವಾಗಬಹುದು ಇಲ್ಲವೇ 'ವಿವಾದ'ವಾಗಬಹುದು. ವಾದಗಳಿಂದ ಹುಟ್ಟಬೇಕಾದುದು ತೀರ್ಮಾನ. ಒಬ್ಬನು ಮೊಲಕ್ಕೆ ಮೂರೇ ಕಾಲು

ವಿಚಾರದ ಬೇರೆ ಬೇರೆ ಮುಖಗಳನ್ನು ಪ್ರಕಟಿಸಬಹುದು. ಅವು ಒಂದಕ್ಕೊಂದು ಪೂರಕವೂ ಆಗಿರಬಹುದು.

ರಂಗಭೂಮಿಯ ಮಾತುಗಾರಿಕೆ

ರಂಗಭೂಮಿಯ ಮಾತುಗಾರಿಕೆ ಒಂದು ದೊಡ್ಡ ಕಲೆ. ನಾಟಕ, ಚಲನಚಿತ್ರಗಳಲ್ಲಿ ಲಿಖಿತ ಸಂಭಾಷಣೆಯನ್ನು ಕಲಾತ್ಮಕವಾಗಿ ಆಡುತ್ತಾರೆ. ಕೆಲವರು ಸಂದರ್ಭಗಳನ್ನು ಬಳಸಿಕೊಂಡು ತಮ್ಮ ಸೃಜನಶೀಲತೆಯನ್ನು ತೋರಿಸುತ್ತಾರೆ. ಯಕ್ಷಗಾನ, ತಾಳಮದ್ದಳೆ, ಹರಿಕತೆ ಮೊದಲಾದವೂ ಸೃಜನಶೀಲಮಾತುಗಾರರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಒಳ್ಳೆಯ ಮಾಧ್ಯಮಗಳು ಯಾವುದೋ ವಿಚಾರಗಳನ್ನು ಗುಪ್ತವಾಹಿನಿಯಾಗಿಸಿ ಎಲ್ಲೆಲ್ಲೋ ಹೇಳಿ ಶ್ರೋತೃಗಳಿಗೆ ಅದು ಗೊತ್ತಾಗುವಂತೆ ಮಾಡುವ ಅನೇಕ ಕಲಾವಿದರು ಈ ರಂಗಗಳಲ್ಲಿ ಯಶಸ್ವಿ ಮಾತುಗಾರರಾಗಿದ್ದಾರೆ. ಮಾತುಗಾರಿಕೆಯ ಕಲೆ ಜೀವಂತವಾಗಿ ರಂಜನೀಯವಾಗಿ ಉಳಿದಿರುವುದು ಈ ಕ್ಷೇತ್ರಗಳಲ್ಲಿಯೇ ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ.

ಭಾಷಣ

ಇಂದಿನ ಮಾತುಗಾರಿಕೆಯಲ್ಲಿ ಭಾಷಣದ ಸ್ಥಾನ ಪ್ರಮುಖವಾಗಿದೆ. ಭಾಷಣ ನಡೆಯುವ ಸ್ಥಳವೇ ಇಲ್ಲ ಭಾಷಣ ಮಾಡದ ಜನರೇ ಇಲ್ಲ ಎಂದರೆ ಅತಿಶಯೋಕ್ತಿಯಲ್ಲ. ಆದ್ದರಿಂದಲೇ ಜನರು ಅನೇಕಬಾರಿ ಭಾಷಣವೆಂದರೆ ಮುಖಗಂಟಿಕ್ಕುತ್ತಾರೆ. ಒಳ್ಳೆಯ ಆಹಾರವಿಲ್ಲದಿದ್ದರೆ ದೈಹಿಕ ಆರೋಗ್ಯ ಹೇಗೆ ಕೆಡುತ್ತದೋ ಒಳ್ಳೆಯ ಭಾಷಣಗಳಾಗದಿದ್ದರೆ ಕೇಳುವವರ ಮನಸ್ಸು, ಸಾಮಾಜಿಕ ಆರೋಗ್ಯ ಕೆಡುತ್ತದೆ. ಒಳ್ಳೆಯ ಅಡುಗೆ ಮಾಡಲು ಹೇಗೆ ಪದಾರ್ಥಗಳು ಮತ್ತು ತಜ್ಞತೆ ಅಗತ್ಯವೋ ಹಾಗೆ ಒಳ್ಳೆಯ ಭಾಷಣ ಮಾಡಲು ವಿಷಯ ಮತ್ತು ತಜ್ಞತೆ ಅತ್ಯಗತ್ಯ. 'ಭಾಷಣ' ಹಲವರಿಗೆ ಹವ್ಯಾಸವಾದರೆ ಹಲವರಿಗೆ ಅದು ಜೀವನದ ವೃತ್ತಿಯೂ ಹೌದು. ಇನ್ನು ಕೆಲವರಿಗೆ ಅದು ಬಿಡಲಾರದ ಚಟ. ಆದರೆ ಪ್ರಯೋಜನವಿಲ್ಲದ್ದು.

ಹಿಂದೆ ಹೇಳಿದಂತೆ ಭಾಷಣವೆಂದರೆ ಸಂಸ್ಕೃತದಲ್ಲಿ ಒಳ್ಳೆಯ ಮಾತು ಎಂದರ್ಥ. ಅದು ಸರಿಯಾಗದಿದ್ದರೆ ಆಡುವ ಮಾತೆಲ್ಲ ಭಷಣ (ಬೊಗಳೆ) ವಾಗುತ್ತದೆ. 'ಭಾಷಣ'ವನ್ನು ಹಲವು ರೀತಿಯಲ್ಲಿ ಅಧ್ಯಯನ ಮಾಡಬಹುದಾಗಿದೆ. ಭಾಷಣಕಾರರು ಅನುಸರಿಸಬೇಕಾದ ಅನೇಕ ನಿಯಮಗಳನ್ನು ಈ ಸಂದರ್ಭದಲ್ಲಿ ನೋಡಬಹುದಾಗಿದೆ.

ಒಂದು ಭಾಷಣವಾಗಬೇಕಾದರೆ ಭಾಷಣಕಾರ, ಶ್ರೋತೃಗಳು ಮತ್ತು ವೇದಿಕೆ ಬೇಕಾಗುತ್ತದೆ. ಈ ಶ್ರೋತೃ ಸಮೂಹವೇ ಸಭೆ. ಇಂತಹ ಸಭೆಗೆ ಕೆಲವು ಲಕ್ಷಣಗಳಿವೆ. ಜನಸಮೂಹವೆಲ್ಲಾ ಸಭೆಯಲ್ಲ. ಸಭೆಯಲ್ಲಿರುವವರೆಲ್ಲ ಸಭ್ಯರಾಗಿರಬೇಕು. ಒಂದೇ ಉದ್ದೇಶದವರಾಗಿರಬೇಕು. ಸಭೆಯ ಸಭ್ಯತೆಯನ್ನು ಅರಿತು ನಡೆಯಬೇಕು. ಸಭೆಗಳು

ಎಲ್ಲಿ ಬೇಕೆಂದರಲ್ಲಿ ಸೇರಬಹುದು. ಜನರ ಸಂಖ್ಯೆಗೇನೂ ಮಿತಿ ಇಲ್ಲ. ಇಂಥವೇ ಸೀಠೋಪಕರಣ ಇರಬೇಕೆಂಬ ನಿರ್ಬಂಧವಿಲ್ಲ. ಸಾರ್ವಜನಿಕ ಸಭೆಗಳು ಹೇಗಿರುತ್ತವೆ ಎಂದು ಎಲ್ಲರಿಗೂ ಗೊತ್ತು.

ಸಭೆಗಳನ್ನು ಸಾಮಾನ್ಯ ಸಭೆಗಳು ಮತ್ತು ಶಾಸನ ಬದ್ಧ ಸಭೆಗಳೆಂದು ವಿಂಗಡಿಸಬಹುದು. ಶಾಸನಬದ್ಧ ಸಭೆಗಳಿಗೆ ಸದಸ್ಯರ ಮಿತಿ, ಮತ್ತಿತರ ಅನೇಕ ವಿಧಿ ನಿಯಮಗಳಿವೆ. ಅವುಗಳನ್ನು ಕಡ್ಡಾಯವಾಗಿ ಪಾಲಿಸಲೇ ಬೇಕಾಗುತ್ತದೆ. ನಮ್ಮ ಶಾಸನ ಸಭೆಗಳೂ ಅನೇಕ ಸಂಘ ಸಂಸ್ಥೆಗಳ ಆಡಳಿತ ಮಂಡಲಿಗಳೂ ಇಂತಹ ಶಾಸನಬದ್ಧ ಸಭೆಗಳಾಗಿವೆ. ಇವು ಶಾಶ್ವತ ಸಭೆಗಳು.

ಭಾಷಣಕಾರರು ಇಂತಹ ಸಭೆಗಳ ಸ್ವರೂಪ, ನಿಯಮಗಳು, ಅಲ್ಲಿ ಸದಸ್ಯರಿಗೆ, ಅಥವಾ ಭಾಗವಹಿಸುವವರಿಗೆ ಇರುವ ಹಕ್ಕುಬಾಧ್ಯತೆಗಳನ್ನು ಅರಿತಿರಬೇಕು. ಯಾವುದೇ ಸಭೆಗಾದರೂ ಒಬ್ಬ ಅಧ್ಯಕ್ಷರಿರುತ್ತಾರೆ. ಇವರೇ ಸಭಾನಾಯಕರು. ಮಾತಾಡುವವರಿಗೆ ಅವಕಾಶ ಮತ್ತು ಅವರ ಹಕ್ಕುಗಳನ್ನು ಕಲ್ಪಿಸುವ, ರಕ್ಷಿಸುವ ಹೊಣೆ ಇವರದೂ ಸಭೆಯಲ್ಲಿರುವವರೆಲ್ಲ ಇವರಿಗೆ ವಿಧೇಯರು. ಅವರ ತೀರ್ಮಾನ, ಆಜ್ಞೆಯೇ ಸಭೆಗೆ ಅಂತಿಮ. ಸಭೆಯನ್ನು ಯಾರಾದರೂ ಸಹಿಸಿಕೊಳ್ಳಲಾಗದಿದ್ದರೆ ಪ್ರತಿಭಟಿಸಿ 'ಸಭಾತ್ಯಾಗ' ಮಾಡಬಹುದೇ ಹೊರತು ಸಭೆಯನ್ನು ಕೆಡಿಸುವುದು ಸಂಸ್ಕೃತಿಯಲ್ಲ. ಸಭೆಯಲ್ಲಿ ಮಾತಾಡುವಾಗ ಗೌರವಾನ್ವಿತ ಭಾಷೆ, ಬಹುವಚನ ಪ್ರಯೋಗ ಅತ್ಯಗತ್ಯ.

ಶಾಲಾ ಕಾಲೇಜುಗಳ ಶೈಕ್ಷಣಿಕ ಸಭೆಗಳಿಗೂ, ರಸ್ತೆಬದಿಯಲ್ಲಿ ನಡೆಯುವ ಸಾರ್ವಜನಿಕ ಸಭೆಗಳಿಗೂ, ಭವ್ಯಮಂದಿರಗಳಲ್ಲಿ ನಡೆಯುವ ಶಾಸನ ಸಭೆಗಳಿಗೂ, ಗಣ್ಯರಿಗೆ, ಗೌರವಸ್ಥರಿಗೆ, ಪ್ರಿಯರಿಗೆ, ಮಾಡುವ ಸನ್ಮಾನ ಸಭೆಗಳಿಗೂ ಸತ್ತಾಗ ನಡೆಸುವ ಸಂತಾಪ ಸೂಚಕ ಸಭೆಗಳಿಗೂ, ಸಂಘ ಸಂಸ್ಥೆಗಳ ವಾರ್ಷಿಕ, ಮಾಸಿಕ ಸಭೆಗಳಿಗೂ ವ್ಯತ್ಯಾಸವಿದೆ.

ಸಭೆಗಳಲ್ಲಿ ನಡೆಯುವ ಭಾಷಣಗಳು ಹಲವು ರೀತಿಯವು. ಮೊದಲಿಗೆ ಸಭೆಯ ಸಂಪ್ರದಾಯ ವಿಧಿಗಳಿಗೆ ಒಳಪಡುವ ಸ್ವಾಗತ, ಪರಿಚಯ, ಉದ್ದೇಶವಿವರಣೆ, ಅಧ್ಯಕ್ಷ ಭಾಷಣ, ವಂದನಾರ್ಪಣೆ ಇವು ಒಂದು ರೀತಿಯವು. ಒಂದು ಉದ್ದೇಶದಿಂದ ಸಭೆಯನ್ನುದ್ದೇಶಿಸಿ ಮಾತನಾಡುವುದು ಇನ್ನೊಂದು ಬಗೆಯದು.

ಒಂದನ್ನು ಸ್ಪಷ್ಟವಾಗಿ ನೆನಪಿನಲ್ಲಿಡಬೇಕು. ಸಭೆ ಅಥವಾ ಭಾಷಣಗಳ ವರ್ಗೀಕರಣ ಅಧ್ಯಯನದ ದೃಷ್ಟಿಯಿಂದಲೇ ಹೊರತು ಎಲ್ಲಾ ಸಭೆಗಳಲ್ಲೂ ಎಲ್ಲಾ ಭಾಷಣಗಳಲ್ಲೂ ಒಂದೇ ರೀತಿಯ ಅಂಶವಿರುತ್ತದೆ. ಅನೇಕಬಾರಿ ಇಂತಹ ವರ್ಗೀಕರಣ ತಪ್ಪಾಗಬಹುದು.

ಭಾಷಣ 'ಲಿಖಿತ' ಅಥವಾ 'ಆಶು'ವಾಗಿರಬಹುದು. 'ಆಶು'ವೆಂದರೆ ಸ್ಥಳದಲ್ಲೇ ಯೋಚಿಸಿ ಮಾತನಾಡುವಂತಹುದು. ಇದು ಪ್ರತಿಭಾವಂತರಿಗೆ ಸಾಧ್ಯ. ಲಿಖಿತವೆಂದರೆ ಬರೆದುಕೊಂಡದ್ದನ್ನು ಓದುವುದು. ಇದೊಂದು ರೀತಿಯ ಭಾಷಣದ ವಿಂಗಡಣೆ.

ಹಾಗೆಯೇ ಭಾಷಣಗಳನ್ನು ರಂಜಕ, ಪ್ರಚೋದಕ, ಬೋಧಕ ಎಂದೂ ವಿಂಗಡಿಸಬಹುದು. ಶ್ರೋತೃಗಳು ಭಾಷಣಕಾರನಿಗೆ ಕಾಣಿಸದ "ದೂರದರ್ಶನ", ಶ್ರೋತೃಗಳೂ ಭಾಷಣಕಾರರೂ ಪರಸ್ಪರ ಕಾಣಿಸದ "ಆಕಾಶವಾಣಿ"ಗಳಲ್ಲಿನ ಭಾಷಣಗಳೂ ಉಂಟು. ಇಲ್ಲಿ ಯಾರಿಗೆ ಯಾರು ಕಾಣಿಸಲಿ ಬಿಡಲಿ ಶ್ರೋತೃಗಳೇ ಭಾಷಣದ ಗುರಿ.

ಅಧ್ಯಯನಕ್ಕಾಗಿ ನಾವು ವರ್ಗೀಕರಿಸಿಕೊಂಡ ಭಾಷಣಗಳನ್ನು ಸ್ವಲ್ಪ ವಿವರವಾಗಿ ನೋಡಬಹುದು. ಲಿಖಿತವೆಂದರೆ ಬರೆದುಕೊಂಡು ಓದುವ ಭಾಷಣಗಳು. ಸಾಮಾನ್ಯವಾಗಿ ಪಳಗದ ಭಾಷಣಕಾರರು, ಇಲ್ಲವೇ ಜ್ಞಾಪಕಶಕ್ತಿ ಕಡಿಮೆ ಇರುವವರು. ಭಾಷಣಗಳನ್ನು ದಾಖಲೆಯಾಗಿಸುವ ಉದ್ದೇಶವಿರುವವರು 'ಲಿಖಿತ' ಭಾಷಣದ ಮೊರೆ ಹೋಗುತ್ತಾರೆ.

"ಆಶು" ಭಾಷಣವೆಂದರೆ ಮಾತನಾಡುವ ವಿಚಾರದ ಮೇಲೆ ಪೂರ್ವ ತಯಾರಿಯಿಲ್ಲದೆ ಭಾಷಣಕ್ಕೆ ನಿಂತಾಗ ತಮ್ಮ ಪಾಂಡಿತ್ಯ, ವಿಚಾರ ಶಕ್ತಿಗಳ ಸಹಾಯದಿಂದ ಸ್ಥಳದಲ್ಲೇ ರೂಪಿಸಿಕೊಂಡು ಮಾತನಾಡುವುದು. 'ಆಶು' ಭಾಷಣ ಇದು ಕಠಿಣಕಲೆಯೂ ಹೌದು. ಸೂಕ್ಷ್ಮ ಬುದ್ಧಿ, ಅಪಾರ ಪದಸಂಪತ್ತು ಇದಕ್ಕೆ ವಿಶೇಷವಾಗಿ ಅಗತ್ಯ. ಶೈಕ್ಷಣಿಕ ಭಾಷಣವೆಂದರೆ ಯಾವ ಭಾಷಣದ ಉದ್ದೇಶ "ಬೋಧಕತೆ"ಯದಾಗಿರುತ್ತದೋ ಅದು ಬೋಧಕ ಭಾಷಣ ಅಥವಾ ಶೈಕ್ಷಣಿಕ. ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ವೃತ್ತಿಯೇ ಮಾತನಾಡುವುದು — ಅಂದರೆ ಬೋಧಿಸುವುದು. ತರಗತಿಗಳೇ ಇವರ ಸಭೆಗಳು. ವಿದ್ಯಾರ್ಥಿಗಳೇ ಸಭಾ ಸದಸ್ಯರು. "ಲೆಕ್ಚರರ್" "ಪ್ರೊಫೆಸರ್" "ಟೀಚರ್" ಇವರೆಲ್ಲ ನಿತ್ಯ ಭಾಷಣಕಾರರು. ಇದಲ್ಲದೇ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಸಾಮಾಜಿಕ ಕಾರ್ಯಕರ್ತರು, ತಜ್ಞರೂ ಕೂಡಾ ವಿಷಯ ಬೋಧನೆಗಾಗಿ ನಡೆಸುವ ಸಭೆಗಳಲ್ಲಿ ನಡೆಯುವ ಭಾಷಣಗಳನ್ನು ಬೋಧಕವೆನ್ನಬಹುದು. ರಂಜಕ ಭಾಷಣವೆಂದರೆ ಸಭೆಗಳಲ್ಲಿ ಜನರನ್ನು ನಗಿಸಲು, ತೃಪ್ತಿಪಡಿಸಲು, ಮತ್ತು ಅದರ ಮೂಲಕ ವಿಚಾರ ಬೋಧಿಸಲು ಮಾಡುವ ಭಾಷಣ. ಸಾಮಾನ್ಯವಾಗಿ ಹಾಸ್ಯ ಸಾಹಿತಿಗಳು ಕತೆ, ಉಪಕತೆ, ಚುಟುಕ, ಚಟಾಕಿಗಳನ್ನ ಬೆರೆಸಿ ಮಾತನಾಡುವಾಗ 'ರಂಜಕ' ಭಾಷಣಗಳನ್ನು ಗುರುತಿಸಬಹುದು.

ಪ್ರಚೋದಕ ಭಾಷಣಗಳೆಂದರೆ ಶ್ರೋತೃಗಳನ್ನು ಯಾವುದಾದರೊಂದು ಕಾರ್ಯದಲ್ಲಿ ತೊಡಗಲು ಇಲ್ಲವೆ ನಿವೃತ್ತರಾಗಲು ಅಗತ್ಯ ವಿಚಾರಗಳನ್ನು ಸ್ಫೂರ್ತಿದಾಯಕವಾಗಿ ಹೇಳುವಂತಹ ಭಾಷಣಗಳು. ಚುನಾವಣೆ, ಚಳುವಳಿ, ಸತ್ಯಾಗ್ರಹಗಳ ಸಂದರ್ಭದಲ್ಲಿ ಇವುಗಳನ್ನು ಗುರುತಿಸಬಹುದು.

ಸಾಂಪ್ರದಾಯಿಕ ಭಾಷಣಗಳು

ಸಭೆಗಳನ್ನು ನಡೆಸುವಾಗ ಕೆಲವು ಸಾಂಪ್ರದಾಯಿಕ ಭಾಷಣಗಳನ್ನು ಮಾಡಬೇಕಾಗುತ್ತದೆ—ಸ್ವಾಗತ, ಪರಿಚಯ, ಪ್ರಸ್ತಾವನೆ, ಅಧ್ಯಕ್ಷತೆ, ವಂದನಾರ್ಪಣೆಗಳೇ

ಈ ಸಾಂಪ್ರದಾಯಿಕ ಭಾಷಣಗಳು ಇಂದು ಅನೇಕ ಸಂದರ್ಭಗಳಲ್ಲಿ ನಾಮಮಾತ್ರಕ್ಕೆ ಅಥವಾ ಸಂಪ್ರದಾಯಕ್ಕಾಗಿ ಇರುತ್ತವೆ. ಆದರೆ ಈ ಭಾಷಣಮಾಡುವವರು ಮಿತಿ ತಪ್ಪಿ ಸಭೆಯ ಬೇಸರಕ್ಕೇ ಕೆರಳಿಸುತ್ತಾರೆ. ಆದ್ದರಿಂದ ಈ ಭಾಷಣಮಾಡುವವರು ಎಚ್ಚರ ವಹಿಸಬೇಕು. 'ಸ್ವಾಗತ ಭಾಷಣ'ವೆಂದರೆ ಸಭೆಯ ವ್ಯವಸ್ಥಾಪಕರ ಪರವಾಗಿ ಅತಿಥಿ, ಅಭ್ಯಾಗತರನ್ನು ಸಭೆಗೆ ಆಹ್ವಾನಿಸಿ ಗೌರವಿಸುವುದು. 'ಪ್ರಸ್ತಾವನೆ' 'ಪರಿಚಯ'ಗಳೆಂದರೆ ಸಭೆಯ ಉದ್ದೇಶಗಳನ್ನು ತಿಳಿಸುವುದು, ವೇದಿಕೆಯಲ್ಲಿರುವವರ ಅಥವಾ ಬೇರೆಯವರ ಪರಿಚಯ ಮಾಡಿಕೊಡುವುದು. 'ಅಧ್ಯಕ್ಷ ಭಾಷಣ' ಅನೇಕ ಸಭೆಗಳಲ್ಲಿ ಸಂಪ್ರದಾಯಿಕವೇ ಹೊರತು ದೊಡ್ಡ ಭಾಷಣವಾಗಬಾರದು. ಸಭಾಕಾರ್ಯ ಕ್ರಮಗಳ ಕೊನೆಗೊಳಿಸುವವರು ಅಧ್ಯಕ್ಷರು. ಅವರು ಹೇಳಬೇಕಾದ್ದನ್ನು ಹೇಳುವುದೇ ಅಧ್ಯಕ್ಷ ಭಾಷಣ. 'ವಂದನಾರ್ಪಣೆ'ಯೆಂದರೆ, ಗೌರವ ಸಲ್ಲಿಸುವುದು.

ಸಾಮಾನ್ಯವಾಗಿ ಸಭೆಗಳಲ್ಲಿ ಪ್ರಮುಖ ಭಾಷಣ ಮಾಡುವವರನ್ನು ಮುಖ್ಯ ಅತಿಥಿ, ಉಪನ್ಯಾಸಕಾರರು, ಅಭಿನಂದನಕಾರರು, ಮುಕ್ತಾಯ ಭಾಷಣಕಾರರು ಇಲ್ಲವೇ ಮುಖ್ಯಭಾಷಣಕಾರರು ಹೀಗೆ ಗುರುತಿಸುತ್ತಾರೆ. ಸಾಮಾನ್ಯವಾಗಿ ಸಭೆಗಳು ಪ್ರಾರ್ಥನೆ ಯೊಂದಿಗೆ ಆರಂಭವಾಗಿ ಬೇರೆಬೇರೆ ಭಾಷಣಗಳನ್ನೊಳಗೊಂಡು ವಂದನಾರ್ಪಣೆಯೊಡನೆ ಮುಕ್ತಾಯವಾಗುತ್ತವೆ. ಅಗತ್ಯವಿದ್ದಾಗ ಚರ್ಚೆ ಪ್ರಶ್ನೋತ್ತರಗಳನ್ನು ಇಲ್ಲಿ ನಡೆಸು ತ್ತಾರೆ. ಆಗ ವೇದಿಕೆಯಲ್ಲಿಲ್ಲದ್ದೇ ಅನ್ಯ ಸಭೆಯಿಂದಲೇ ಮಾತನಾಡಬೇಕಾಗುತ್ತದೆ. ಸಭೆ ಯಲ್ಲಿ ಮಾತನಾಡುವಾಗ ಅಧ್ಯಕ್ಷರನ್ನೇ ಸಂಬೋಧಿಸಿ ಅವರ ಮೂಲಕ ಉಳಿದವರೊಡನೆ ಮಾತಾಡಬೇಕು. ಇದು ಸಭೆಯ ಪ್ರಮುಖ ನಿಯಮ.

ಭಾಷಣ ಕಲೆ

ಇದುತನಕ ಮಾತಿಗೆ ಸಂಬಂಧಿಸಿದ, ಸಭೆ ಭಾಷಣಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಗಮನಿಸಿದ್ದಾಯಿತು. ಇವೆಲ್ಲ ಅನೇಕ ವಿಚಾರಗಳು ಬಂದಿದ್ದರೂ ಸಂಗ್ರಹವಾಗಿ ಕೆಲವು ಅಂಶಗಳನ್ನು ಪುನಃ ಗಮನಿಸಬೇಕಾಗಿದೆ. ಭಾಷಣ ಕಲೆಯಲ್ಲಿ ಯಶಸ್ಸು ಗಳಿಸಲು ಇವು ತೀರಾ ಅಗತ್ಯ. ಭಾಷಣಕಾರನು ಹಿಂದೆ ಹೇಳಿದ "ವಾಚಕಾಧಮನ"ನ ಗುಣಗಳನ್ನು ಹೊಂದಿರಬಾರದು, "ವಾಚಕೋತ್ತಮ"ನ ಗುಣ ಗಳನ್ನು ಹೊಂದಿರಬೇಕು. ವಾಗ್ದೋಷಗಳಿಂದ ಮುಕ್ತನಾಗಿರಬೇಕು. ಇನ್ನು ಸಭೆಯ ಎದುರಿನಲ್ಲಿ ತನ್ನ ನಿಲುವಿನ ಬಗ್ಗೆ ಗಮನವಿರಿಸಿಕೊಳ್ಳಬೇಕು. ಸ್ವಚ್ಛವಾದ ಉಡುಪು ಅಗತ್ಯ. ತನ್ನ ಕಣ್ಣು ಕೈಗಳನ್ನು ಅಗತ್ಯವಿದ್ದಾಗ ಮಾತುಗಳಿಗೆ ಹಿತವಾಗಿ ಬಳಸಿ ಕೊಳ್ಳುವುದು ಒಂದು ಕಲೆ. ಇದೇ ಹಾವ-ಭಾವ ಸಹಿತ ಭಾಷಣ. ಇದು ಕಠಿಣ ಕಲೆ. ಅಲ್ಲದೆ ಭಾಷಣಕಾರ ತನ್ನ ವ್ಯಕ್ತಿತ್ವದ ಪ್ರಭಾವ ಸಭಾಸದರ ಮೇಲೆ ಬಿದ್ದಿದೆ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ತಾನು ಮಾತನಾಡುವ ಉದ್ದೇಶ, ವೇಳೆ

ಗಳನ್ನು ಸಂಪೂರ್ಣವಾಗಿ ತಿಳಿದಿರಬೇಕು. ಇದಕ್ಕಾಗಿ ಭಾಷಣಕಾರ ಕೆಲವು ಕೆಲಸಗಳನ್ನು ವೇದಿಕೆಗೆ ಬಂದೊಡನೆ ಮಾಡಿಕೊಳ್ಳಬೇಕು.

ಸಭಾವೀಕ್ಷಣೆ

ಭಾಷಣಕಾರನು ತನ್ನ ಸಭೆಯನ್ನು ವೀಕ್ಷಿಸಬೇಕು. ಅದರ ಗಾತ್ರ, ದರ್ಜೆ, ಗುಣಗಳನ್ನು ಅರಿಯಬೇಕು. ಸಭೆಗೆ ಬಂದವರೆಲ್ಲರೂ ಭಾಷಣ ಕೇಳಲು, ಎಲ್ಲರ ಭಾಷಣ ಕೇಳಲು ಬಂದವರಾಗಿರುವುದಿಲ್ಲ. ಕೆಲವರ ಭಾಷಣ ಕೇಳಲು, ಇಲ್ಲವೇ ಗಲಭೆಯೆಬ್ಬಿಸಲು ಬಂದವರೂ ಇರುತ್ತಾರೆ. ಚಲನಚಿತ್ರ ತಾರೆಯರ, ರಾಜಕಾರಣಿಗಳ ಸಭೆಗಳೇ ಇವಕ್ಕೆ ಉದಾಹರಣೆ. ಆದ್ದರಿಂದ ಸಭೆಯನ್ನು ಅರಿತು ಮಾತನಾಡುವುದೇ ಭಾಷಣ ಕಲೆಯ ಬಹುದೊಡ್ಡ ಗುಟ್ಟು. ಅಲ್ಲದೆ ಭಾಷಣಕಾರನ ನೋಟ, ನಿಲುವು, ಗಾಂಭೀರ್ಯ ಶ್ರೋತೃಗಳ ಮೇಲೆ "ಸಮ್ಮೋಹಕತೆ" ಬೀರಲು ಸಾಧ್ಯತೆಯಿದೆ. ಸಭಾವೀಕ್ಷಣೆಯಿಂದ ಸಭಾಧ್ಯಯನ ಮಾಡಿಕೊಳ್ಳುವ ಭಾಷಣಕಾರ ಸಭೆಯಲ್ಲಿರುವ ಬೇರೆ ಬೇರೆ ವಯಸ್ಸಿನ ಬೇರೆ ಬೇರೆ ದರ್ಜೆಯ, (ಮಾನಸಿಕ) ಜನರಿಗೆ ಯಾವ ವಿಚಾರವನ್ನು ಎಷ್ಟೆಷ್ಟು ವಿಸ್ತರಿಸಿ, ಸಂಕ್ಷೇಪಿಸಿ, ಉದಾಹರಿಸಿ, ಉತ್ಪ್ರೇಕ್ಷಿಸಿ, ಪಾಂಡಿತ್ಯಪೂರ್ಣವಾಗಿ ಸರಳವಾಗಿ ಹೇಳಬೇಕೆಂಬುವನ್ನು ನಿರ್ಧರಿಸಿಕೊಳ್ಳಬೇಕು. ತಾನೆಷ್ಟು ಹೊತ್ತು ಮಾತಾಡಬೇಕೆಂದು ಅಧ್ಯಕ್ಷರಿಂದ ಆದೇಶ ಬಂದಿರುತ್ತದೋ ಅಷ್ಟೇ ಕಾಲ ಮಿತಿಯಲ್ಲಿ ಮಾತನಾಡುವುದರ ಮೂಲಕ ವ್ಯವಸ್ಥಾಪಕರೊಂದಿಗೆ ಸಹಕರಿಸಬೇಕು. ತಾನು ಹೇಳಬೇಕಾದುದನ್ನು ಬಿಡದೆ ಕ್ಲಿಪ್ತ ಅವಧಿಯಲ್ಲಿ ಮಾತನಾಡುವುದೇ "ಕಲೆ", ಹಾಗಲ್ಲದಿದ್ದರೆ, "ಭಾಷಣದ ಕೊಲೆ". ಇರುವ ಅವಧಿಗಿಂತ ಮೀರಿ—ಇನ್ನೊಂದು ಮಾತು ಹೇಳುತ್ತೇನೆ, ದಯವಿಟ್ಟು ಕೇಳಿ, ಸ್ವಲ್ಪವೇ ಇದೆ ಹೇಳಿ ಮುಗಿಸುತ್ತೇನೆ ಎಂದು ಬಲವಂತದಿಂದ ಜನರನ್ನು ಹಿಡಿದು ಕೂರಿಸುವುದು ಒಂದು ಸಾಮಾಜಿಕ ಅಪರಾಧವೇ ಸರಿ. ಕೆಲವು ಬಾರಿ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಮಾತಾಡಬೇಕಾಗಬಹುದು. ಆಗಲೂ ಭಾಷಣಕಾರರು ಸಿದ್ಧರಾಗಿರಬೇಕು. "ಭಾಷಣದ ಶೈಲಿ"ಯು ಅವರ ಯಶಸ್ಸಿಗೆ ಅಷ್ಟೇ ಮುಖ್ಯ. ಒಬ್ಬರ ಶೈಲಿ ಧಾಟಿಯನ್ನು ಬೇರೆಯವರು ಅನುಕರಿಸುವುದೂ ಉಂಟು. ಆದರೆ 'ಸೃಜನಶೀಲತೆ'ಯುಳ್ಳವರು ತಮ್ಮವೇ ಆದ ಶೈಲಿ, ಧಾಟಿಗಳನ್ನು ರೂಪಿಸಿಕೊಳ್ಳಬೇಕು. ಇದೇ ಭಾಷಣ ಕಲೆಯ ದೊಡ್ಡ ಅಂಶ. ಇಂದಿರಾಗಾಂಧಿಯವರು ಜನರನ್ನುದ್ದೇಶಿಸಿ ಭಾಷಣ ಮಾಡಿದಾಗಲೆಲ್ಲ ಕೊನೆಯಲ್ಲಿ "ಜೈಹಿಂದ್" ಎಂದು ಕೂಗುವುದು, ಕೂಗಿಸುವುದು ಸಾಮಾನ್ಯ ಶ್ರೋತೃಗಳ ಆಕರ್ಷಣೆಗೆ ಒಳ್ಳೆಯ ಉದಾಹರಣೆ. ನಿರರ್ಗಳವಾಗಿ ಮಳೆಸುರಿದಂತೆ ಮಾತನಾಡುವುದು ಜನ್ಮತಃ ಪಡೆದ ಶಕ್ತಿಯೆಂದೇ ಕೆಲವರ ಅಭಿಪ್ರಾಯ. ಅಲ್ಲಿ ವಾಗ್ಧಾಟಿಗೆ ಬಿಡುವಿಲ್ಲದ ಹಾಗೆ ಪದಸಂಪತ್ತಿನ ಬಳಕೆಯಾಗುತ್ತದೆ. ಹಾಗೆಯೇ ಭಾಷಣಮಾಡುವಾಗ

ನಡುವೆ ನಡುವೆ ನಿಲ್ಲಿಸಿ ಅತ್ತಿತ್ತ ನೋಡುತ್ತ ಕೇಳುವವರಿಗೆ ತಾವೇನು ಕೇಳಿದೆವು ಎಂಬುದರ ಬಗ್ಗೆ ವಿಚಾರಿಸಿಕೊಳ್ಳಲು ಅವಕಾಶ ಕೊಡುತ್ತಾ, ಹಾ–ಹೂ, ಎನ್ನುತ್ತ ಹಾವ ಭಾವದಿಂದ ಅಂಗಾಂಗ ಕುಣಿಸುತ್ತ ಮಾತನಾಡುವುದೂ ಒಂದು ಶೈಲಿಯೇ. ನಗಿಸುತ್ತಾ, ಹಾಸ್ಯಸನ್ನಿವೇಶಗಳನ್ನೇ, ಕತೆ, ಉಪಕತೆಗಳನ್ನೇ ಹೇಳುತ್ತಾ ಮಾತಾಡು ವುದೂ ಒಂದು ಶೈಲಿ. ಗಾಂಭೀರ್ಯದಿಂದ ವಿಚಾರಕ್ಕೆ ಸಂಬಂಧಿಸಿದಂತೆ ಅಂಕಿ–ಅಂಶದ ಆಧಾರಗಳನ್ನಿಡುತ್ತಾ ವಿಚಾರದಿಂದ ಸ್ವಲ್ಪವೂ ಹೊರಗೆ ಹೋಗದೆ ನಿರರ್ಗಳವಾಗಿ ಮಾತಾಡುವುದೂ ಒಂದು ಶೈಲಿಯೇ. ಸಭಿಕರಿಗೇ ಪ್ರಶ್ನೆ ಕೇಳುವಂತೆ ಪ್ರಶ್ನೋತ್ತರದಂತೆ ಮಾತಾಡುವುದೂ ಒಂದು ಶೈಲಿ. ಹೀಗೆ ಅನೇಕ ಶೈಲಿ, ರೀತಿ, ಧಾಟಿಗಳನ್ನು ಭಾಷಣ ದಲ್ಲಿ ಗುರುತಿಸಬಹುದು. ಆದರೆ ವಾದ, ತರ್ಕಗಳನ್ನ ನಡೆಸುವಾಗ, ಸಾಕ್ಷ್ಯಾಧಾರ ವನ್ನು ಬಳಸುವಾಗ, ಧ್ವನಿಯ ಏರಿಳಿತ ನಡೆಸುವಾಗ ಕಣ್ಣು, ಕೈ, ಹುಬ್ಬು, ಕತ್ತುಗಳನ್ನು ಬಳಸಿಕೊಳ್ಳುವಾಗ ಶೈಲಿಯು ಹಾಳಾಗದಂತೆ ಎಚ್ಚರ ವಹಿಸಲೇಬೇಕು.

ಕ್ಯಾಸನ್ನನ ಸಲಹೆಗಳು

ಭಾಷಣಕಲೆ ನಮ್ಮ ದೇಶಕ್ಕಿಂತ ಪಾಶ್ಚಿಮಾತ್ಯದೇಶಗಳಲ್ಲಿ ಹಿಂದೆಯೇ ಬೆಳವಣಿಗೆ ಯಾಗಿತ್ತು. ಗ್ರೀಸ್‌ನಲ್ಲಿ ಹಿಂದೆ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದ್ದಾಗ "ಭಾಷಣ" ಒಂದು ಕಲೆಯಾಗಿ ಗುರುತಿಸಲ್ಪಟ್ಟಿತ್ತು. ಇಂಗ್ಲೆಂಡಿನ ಹೆಚ್. ಎನ್. ಕ್ಯಾಸನ್ ಎಂಬಾತ ಭಾಷಣ ಕಲೆಯ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ಅದಕ್ಕಾಗಿ ಶಾಲೆಗಳನ್ನೇ ನಡೆಸಿದಾತ. ಆತ ಪ್ರಕಟಿಸಿದ ಪ್ರೇಕ್ಷಕರು (Audience) ಎಂಬ ಹೊತ್ತಿಗೆಯಲ್ಲಿ ಭಾಷಣಕಾರರಿಗೆ ಕೆಲವು ಸಲಹೆ ನೀಡಿದ್ದಾನೆ. ಅವು ಯಾವುವೆಂದರೆ : ೧) ಭಾಷಣಕಾರನಿಗೆ ಪ್ರೇಕ್ಷಕರು ಹತ್ತಿರವಾಗಿರಬೇಕು. ಮತ್ತು ಸಭಾಭವನದ ತುಂಬಾ ಜನರಿರಬೇಕು ಎನ್ನುತ್ತಾನೆ. ಅವನ "ಹ್ಯೂಮನ್ ನೇಚರ್" ಎಂಬ ಪುಸ್ತಕದಲ್ಲಿ ಮನುಷ್ಯನ ಮೂಲಭೂತ ಸ್ವಭಾವಗಳನ್ನು ಗುರುತಿಸಿದ್ದಾನೆ. ಭಾಷಣಕಾರರು ಜನರ ಸ್ವಭಾವಗಳನ್ನು ಅರಿತಿರುವುದು ಮುಖ್ಯ. ಆದ್ದರಿಂದ ಇವುಗಳನ್ನು ಗಮನಿಸಬಹುದಾಗಿದೆ. ೨) ಪ್ರತಿಯೊಬ್ಬನೂ ಆಸೆಪಡುತ್ತಾನೆ. ಭಾವುಕನಾಗಿದ್ದಾನೆ. ಭೀತಿಯುಳ್ಳವನಾಗಿದ್ದಾನೆ. ಅನುಕರಣಶೀಲನಾಗಿದ್ದಾನೆ. ನಂಬಿಕೆಯುಳ್ಳವನಾಗಿದ್ದಾನೆ. ಹವ್ಯಾಸಗಳುಳ್ಳವನಾಗಿ ದ್ದಾನೆ. ಅಭ್ಯಾಸವುಳ್ಳವನಾಗಿದ್ದಾನೆ; ಯೋಚನಾಸಾಮರ್ಥ್ಯವಿರುವಾತ, ಬದಲಾಗುವ ಗುಣವಿರುವಾತ, ಹೊಗಳಿಕೆಯಿಂದ ಸುಪ್ರೀತ. ಪರರನ್ನು ಟೀಕಿಸಬಲ್ಲಾತ. ನಾಯಕರನ್ನು ಬಯಸುವಾತ. ಲೈಂಗಿಕ ಗುಣರಹಿತ, ಆದರ್ಶವಿರುವಾತ. ಹೀಗೆ ಹದಿನಾಲ್ಕು ಗುಣ ಗಳನ್ನು ಹೇಳುತ್ತಾನೆ.

ಕ್ಯಾಸನ್ನನು ಇಂಗ್ಲಿಷ್ ಭಾಷಣಕಾರರಿಗೆ ಕೊಟ್ಟ ಕೆಲವು ಸಲಹೆಗಳನ್ನು ನಾವೂ ಗಮನಿಸಬಹುದಾಗಿದೆ. ಭಾಷಣಕಾರರು ಸಾಧ್ಯವಾದಷ್ಟು ಗ್ರಾಮ್ಯಪದಗಳನ್ನು ಬಳಸ ಬಾರದೆಂದೂ ಇದರಿಂದ ಭಾಷೆಯ ಬಿಡವೇ ಸಡಿಲವಾಗುತ್ತದೆ ಎಂದೂ ಹೇಳುತ್ತಾನೆ.

ಪ್ರಾಸಬದ್ಧ ಭಾಷೆಯಿಂದ ಸಮೂಹವನ್ನು ಆಕರ್ಷಿಸುವುದು ಸುಲಭವೆನ್ನುತ್ತಾನೆ. ಅಲ್ಲದೆ ಸಮೂಹದಲ್ಲಿ ಭಾಷಣಕಾರನೊಬ್ಬ ಎಂಬ ಭಾವನೆ ಬರುವಂತೆ ಮಾಡಬೇಕಾಗುತ್ತದೆ.

ಸಭಾಕಂಪನ

ಭಾಷಣಕಲೆಗೆ ದೊಡ್ಡ ಅಡಚಣೆ 'ಸಭಾಕಂಪನ'. ಇದರ ಅನುಭವ ಒಮ್ಮೆಯಾದರೂ ಎಲ್ಲ ಭಾಷಣಕಾರರಿಗೂ ಆಗಿರುತ್ತದೆ. ಸಭೆಯಲ್ಲಿ ನಿಂತಾಗ, ಕೈಕಾಲು ನಡುಗುವುದು, ಗಂಟಲೊಣಗುವುದು, ಕಣ್ಣುಕತ್ತಲೆಗಟ್ಟುವುದು, ಎದೆಯಲ್ಲಿ ಡವಡವಿಸುವುದು ಇವೆಲ್ಲಾ ಸಭಾಕಂಪನದ ಲಕ್ಷಣಗಳು. ಇದನ್ನು ಹೋಗಲಾಡಿಸಿಕೊಳ್ಳಲು ಧೈರ್ಯ, ಸ್ಥಿರಚಿತ್ತ, ಸತತ ಅಭ್ಯಾಸಗಳು ಬೇಕಾಗುತ್ತವೆ. ಕನ್ನಡಿಯೆದುರು ನಿಂತು ಮಾತನಾಡುವುದರಿಂದ ಸಭಾಕಂಪವನ್ನು ತಡೆಯುವುದು ಸಾಧ್ಯವೆಂದು ಕೆಲವರ ಅಭಿಪ್ರಾಯ ಸತತವಾಗಿ ಭಾಷಣ ಮಾಡುವುದರಿಂದ ಸಭಾಕಂಪನವನ್ನು ಕಳೆದುಕೊಳ್ಳಬಹುದು. ಶಾಲಾ ಕಾಲೇಜುಗಳಲ್ಲಿ ಚರ್ಚಾಸ್ಪರ್ಧೆ, ಭಾಷಣಸ್ಪರ್ಧೆಗಳನ್ನು ನಡೆಸುವುದು ಇಂತಹ ತಯಾರಿಗಾಗಿಯೇ.

ಧ್ವನಿವರ್ಧಕ ಮತ್ತಿತರ ಉಪಕರಣಗಳು

ಇಂದಿನ ದಿನಗಳಲ್ಲಿ "ಸಭೆ" ಎಂದರೆ ಧ್ವನಿವರ್ಧಕ ಇರಬೇಕು ಎಂಬ ಅನ್ನಿಸಿಕೆ ಕಾಣಿಸುತ್ತಿದೆ. ಇದು ಭಾಷಣ ಮಾಡುವವರಿಗೂ, ಕೇಳುವವರಿಗೂ ಸಹಕಾರಿ. ಆದರೆ ಇವು ಸರಿಯಾಗಿಲ್ಲದಿದ್ದರೆ 'ರಗಳೆ' ಎನ್ನಿಸುತ್ತವೆ. ಸಣ್ಣಸಭೆಗಳಲ್ಲಿ ಇವುಗಳನ್ನು ಬಳಸದಿರುವುದೇ ಸೂಕ್ತ. ದೊಡ್ಡಸಭೆಗಳಲ್ಲಿ ಇವು ಅತ್ಯಗತ್ಯ. ಹಾಗೆಯೇ ಸಭಾವ್ಯವಸ್ಥೆಯಲ್ಲಿ ಕುರ್ಚಿ, ಮೇಜುಗಳಿರಬಹುದು ಇಲ್ಲವೆ ಬರಿಯ ನೆಲದ ಮೇಲೆ, ಹಾಸು ಚಾಪೆಗಳಲ್ಲಿ ನಡೆಯಬಹುದು. ಮಾತುಗಾರರು ಎಲ್ಲಾ ರೀತಿಯ ವ್ಯವಸ್ಥೆಗೂ ಹೊಂದಿಕೊಳ್ಳಲು ಕಲಿಯಬೇಕಾಗುತ್ತದೆ.

ಭಾಷಣಕಾರನ ನೈತಿಕ ಹೊಣೆಗಾರಿಕೆ

ಇದುವರೆಗೆ ಭಾಷಣಕಾರರು-ಮಾತುಗಾರರು ಎದುರಿಸಬೇಕಾದ ಸಮಸ್ಯೆಗಳನ್ನು ನೋಡಿದ್ದಾಗಿದೆ. "ಭಾಷಣ" ಎಂಬುದನ್ನು-"ವರ"ವೆಂದೋ, ಪ್ರಯತ್ನದಿಂದ ಪಡೆಯಬಹುದಾದ "ಸಿದ್ಧಿ" ಎಂದೋ ಒಪ್ಪಿಕೊಳ್ಳೋಣ. ಇದು ಮನುಷ್ಯನ ಕೈಯಲ್ಲಿರುವ ಒಂದು ಅಸ್ತ್ರವೂ ಹೌದು ಎಂಬುವನ್ನು ಜ್ಞಾಪಕದಲ್ಲಿಡಬೇಕು. ಒಳ್ಳೆಯ ಮಾತುಗಾರಿಕೆಯಿಂದ ಪ್ರಯೋಜನವಾಗುವ ಹಾಗೆ ಕೆಟ್ಟಮಾತುಗಾರಿಕೆಯಿಂದ ಹಾನಿಯೂ ಉಂಟು. "ಭಾಷಣದ ಅಸ್ತ್ರ"ವನ್ನು ದುರುಪಯೋಗಪಡಿಸಿಕೊಳ್ಳುವುದೂ ಉಂಟು.

ಭಾಷಣ ಸಮೂಹ ಸುಧಾರಣೆಗೆ, ಬದಲಾವಣೆಗೆ, ಪ್ರಚೋದನೆಗೆ ಬಳಸಬಹುದಾದ ಒಂದು ಮಾಧ್ಯಮ. ಆದ್ದರಿಂದ ಈ ಸಮೂಹ ಮಾಧ್ಯಮವನ್ನೇ ದುರುಪಯೋಗಪಡಿಸಿ ಕೊಳ್ಳುವುದು ಒಂದು ನೈತಿಕ ಅಪರಾಧವೆಂದು ಭಾಷಣಕಾರರು ಭಾವಿಸಬೇಕು. ಒಂದು ಸಭೆಯೆಂದರೆ ಅನೇಕ ಜನರು ತಮ್ಮ ಕೆಲಸ ಕಾರ್ಯಗಳನ್ನು ತ್ಯಜಿಸಿ ಸಂಘಟಿತರಾಗು ತ್ತಾರೆ. ಅವರ ಹಣ, ಆಯುಷ್ಯ, ನೆಮ್ಮದಿಗಳನ್ನು ಸದುಪಯೋಗವಾಗುವಂತೆ ಮಾಡು ವುದು ಭಾಷಣಕಾರನ ಹೊಣೆ. ಕೆಟ್ಟ ಭಾಷಣಗಳಿಂದ ಯಾರಿಗೆ ತಾನೇ ಸಮಾಧಾನ ವಾದೀತು ? ಇಂದು ಅನೇಕರು ಸೇರಿಸುತ್ತಿರುವ ಸಭೆ, ಸಮ್ಮೇಳನ, ರ್‍ಯಾಲಿಗಳಲ್ಲಿ ನಡೆಯುವ ಕನಿಷ್ಠ ದರ್ಜೆಯ ಭಾಷಣಗಳನ್ನು ವಿಚಾರಗಳನ್ನು ನೋಡಿದಾಗ ಖೇದವೆನ್ನಿಸು ತ್ತದೆ. ನಮ್ಮಲ್ಲಿ ಭಾಷಣಕಾರರಿಗೆ ವ್ಯವಸ್ಥಿತ ತರಬೇತಿ ನೀಡುವ ಕ್ರಮ ಬಳಕೆಯಲ್ಲಿ ಸಾಕಷ್ಟಿಲ್ಲ. ಭಾಷಣದ ಮಹತ್ವ ತಿಳಿಯದ ಭಾಷಣಕಾರರೇ ಬಹಳ ಮಂದಿ. ಹೀಗಾಗಿ ಅನೇಕರ ಭಾಷಣವೆಂದರೆ ಶ್ರೋತೃಗಳಿಗೆ ಅಪಾರ ಹಿಂಸೆ.

ನಮ್ಮ ಸಮಾಜದಲ್ಲಿ ವಕೀಲರು, ಅಧ್ಯಾಪಕರು, ಕಲಾವಿದರೂ ಮಾತುಗಾರರೇ. ಆದರೂ ಸಾರ್ವಜನಿಕ ಮುಖಂಡರ ಮಾತುಗಾರಿಕೆ ಇವರೆಲ್ಲರಿಗಿಂತ ಭಿನ್ನ. ಅನೇಕ ಮುಖಂಡರಿಗೆ ಮಾತೇ ಬಂಡವಾಳ; ಆದರೆ ಸರಿಯಾಗಿ ಯೋಚಿಸಿ ಮಾತನಾಡುವ ಮುಖಂಡರು ಅಪರೂಪ. ಮಾತಿನಕಲೆ ಸಿದ್ಧಿಸಿದ ಅನೇಕ ನಾಯಕರು ರಾವಣಾಸುರ, ಭಸ್ಮಾಸುರ, ಹಿರಣ್ಯಕಶ್ಯಪರಂತಾಗುತ್ತಿದ್ದಾರೆ. ಮೋಸದ ಮಾತುಗಳಿಂದ ಮರುಳು ಮಾಡಿ ಮತಪಡೆದು ಮುಖಂಡರಾಗಿ ಮತ್ತೇರಿ ಮದಿಸುವವರನ್ನು ಮರ್ದಿಸಲಾರದೆ ಸಮಾಜ ತೊಳಲಾಡುವ ಉದಾಹರಣೆಗಳೂ ಉಂಟು. ಆದ್ದರಿಂದ ಭಾಷಣಕಾರರಿಗೆ ಸಮಾಜದಲ್ಲಿ ಹೇಗೆ ಒಂದು ಗೌರವಸ್ಥಾನವಿದೆಯೋ, ಒಂದು ಶಕ್ತಿಯಿದೆಯೋ ಅದನ್ನು ಕಾಪಾಡಿಕೊಳ್ಳುವ ಮತ್ತು ಸಮಾಜಕ್ಕೆ ಹಾನಿತಟ್ಟಿದಾಗ ಜನರನ್ನು ಎಚ್ಚರಿಸುವ ಹೊಣೆ ಗಾರಿಕೆಯೂ ಉಂಟು.

ನಮ್ಮ ಸಮಾಜದಲ್ಲಿ ಕೆಲವರನ್ನ " ಹರಕುಬಾಯಿ "ಯವರೆಂದು ಜನ ಗುರುತಿಸು ವುದನ್ನು ನೋಡಬಹುದು ಕಂಡಕಂಡವರೊಡನೆ ಎಲ್ಲಾ ವಿಚಾರಗಳನ್ನು ಕುರಿತು ಮಾತ ನಾಡುವವರು ಈ ಬಿರುದಾಂಕಿತರಾಗುತ್ತಾರೆ.

ಅನೇಕಬಾರಿ ಮಾತಿಗೊಂದು ವಸ್ತು ಬೇಕಾಗುತ್ತದೆ. ಆಗ ಸಾಮಾಜಿಕ ವಿಚಾರ ಗಳನ್ನು ಮಾತನಾಡಿದರೆ ತಪ್ಪಲ್ಲ. ಆದರೆ ಅನೇಕರು ಪರರ ವೈಯಕ್ತಿಕ ವಿಚಾರಗಳನ್ನು ಸೂಕ್ತವಲ್ಲದ ರೀತಿಯಲ್ಲಿ ಮಾತನಾಡುವುದೂ ಉಂಟು. ಇದರಿಂದ ಹಾನಿ ಸಂಭವಿಸು ತ್ತದೆ. ಇದನ್ನು ನೋಡಿಯೇ ಹರಿದಾಸರು—'ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ' ಎಂದು ಹೇಳಿದರು.

ಮಾತನಾಡುವಾಗ ದ್ವಂದ್ವಾರ್ಥ ಬರುವಂತೆ, ಅಡ್ಡಗೋಡೆಯ ಮೇಲಿನ ದೀಪ ದಂತೆ, ಮಾತಾಡುವುದು ಉಂಟು. ಅದು ಕಲೆ, ಜಾಣ್ಮೆ, ಅದರಿಂದ ಲಾಭವೂ ಆಗ ಬಹುದು. ಆದರೆ ನಮ್ಮಲ್ಲಿ 'ನಾಲಗೆ ಎರಡಲ್ಲ ಒಂದು.' "ಎಲುಬಿಲ್ಲದ ನಾಲಗೆ ಹೇಗೆ

ಬೇಕೋ ಹಾಗೆ ಹೊರಳುತ್ತದೆ' ಎಂಬ ಮಾತೂ ಇದೆ. ಇದರ ಅರ್ಥ ಎಲ್ಲರಿಗೂ ಗೊತ್ತು. ಇದು ಮಾತಾಡುವವರ ನೈತಿಕ ಸ್ಥಿತಿಯನ್ನು ಕುರಿತು ಹೇಳುವಂತಹುದು. ಆದ್ದರಿಂದಲೇ ಉಪನಿಷತ್ತು–"ಸತ್ಯಂ ವದ" 'ಸತ್ಯವನ್ನೇ ಹೇಳು' ಎಂದು ವಿಧಿಸುತ್ತದೆ.

ಮಾತೆಂಬುದೇ ಮಂತ್ರ. ಅದೊಂದು ಅಸ್ತ್ರ, ಅದನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದು ಮನುಷ್ಯನ ಹೊಣೆಯಾಗಿದೆ.

ಎಂ. ಎಸ್. ವಿಜಯಕುಮಾರ್
ಕೆ. ವಾಸುದೇವಮೂರ್ತಿ

ಕರ್ನಾಟಕದಲ್ಲಿ ರೇಷ್ಮೆ ಕೃಷಿ—ಒಂದು ವಿಶ್ಲೇಷಣೆ

ಮುನ್ನುಡಿ

ಭಾರತದ ರೇಷ್ಮೆ ವ್ಯವಸಾಯದ ಭೂಪಟದಲ್ಲಿ ಕರ್ನಾಟಕವು ಪ್ರಥಮ ಸ್ಥಾನವನ್ನೇ ಪಡೆದಿದೆ. ಹಿಪ್ಪುನೇರಳೆ ಮೂಲದ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕಕ್ಕೇ ಅಗ್ರಸ್ಥಾನ. ಒಂದು ಕಾಲದಲ್ಲಿ ಕೆಲವು ಕುಟುಂಬಗಳಿಗೆ ಮಾತ್ರ ಸೀಮಿತವಾಗಿದ್ದ ಈ ಉದ್ಯಮ ಇಂದು ರಾಜ್ಯಾದ್ಯಂತ ವ್ಯಾಪಿಸಿದೆ.

ಹಿಪ್ಪುನೇರಳೆ ಮೂಲದ ರೇಷ್ಮೆ ಬೆಳೆಯ ಮೂಲ ಬಹಳ ಪ್ರಾಚೀನವಾದುದು. ಹಲವು ಗಣ್ಯರ ಪ್ರಕಾರ ''ಮೈಸೂರು ಹುಲಿ'' ಎಂದು ಪ್ರಖ್ಯಾತನಾದ ಟೀಪುಸುಲ್ತಾನ್ ದೊರೆಯು ಚೀನಾ ದೇಶದಿಂದ ಹಿಪ್ಪುನೇರಳೆ ಕಡ್ಡಿ ಹಾಗೂ ಮೊಟ್ಟೆಗಳನ್ನು ಸುಮಾರು 200 ವರ್ಷಗಳ ಹಿಂದೆ ಆಮದು ಮಾಡಿಕೊಂಡು ಅತನ ರಾಜ್ಯದಲ್ಲಿ ಈ ಉದ್ಯಮವನ್ನು ಪ್ರಾರಂಭಿಸಿದನು. ಸೂಕ್ತವಾದಂತಹ ಹವಾಗುಣ, ಮಣ್ಣು, ಮಳೆ ಇತ್ಯಾದಿಗಳು ಈ ಬೆಳೆಯನ್ನು ಕೇವಲ ಐದು ಜಿಲ್ಲೆ[1]ಗಳಿಗೆ ಸೀಮಿತಗೊಳಿಸಿತು. ರೇಷ್ಮೆಯ ವೈವಿಧ್ಯತೆ ಹಾಗೂ ಭಾರತೀಯ ಸಂಸ್ಕೃತಿಯ ಹಿನ್ನೆಲೆ, ಈ ಉದ್ಯಮದ ಪ್ರಗತಿಗೆ ಅತಿಮಹತ್ವದ ಕಾರಣ.

ಉತ್ಪಾದನೆ

ಇಡೀ ಭಾರತದಲ್ಲೇ ಉತ್ಪಾದನೆ ಆಗುವ ರೇಷ್ಮೆಯ ಶೇಕಡಾ 57.12ರಷ್ಟು[2] ಕರ್ನಾಟಕದಲ್ಲೇ ಉತ್ಪಾದನೆಯಾಗುತ್ತಿದೆ. ಕೇವಲ ಐದು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದ ಈ ಉದ್ಯಮವು ವಿಶ್ವ ಬ್ಯಾಂಕಿನ ದ್ರವ್ಯ ಸಹಾಯದಿಂದಾಗಿ[3] ಇಂದು ರಾಜ್ಯದ ಇತರ 9 ಜಿಲ್ಲೆಗಳಿಗೆ ವ್ಯಾಪಿಸಿದೆ. ಈ 9 ಜಿಲ್ಲೆಗಳಲ್ಲಿ ಸುಮಾರು 1,000 ಹೆಕ್ಟೇರಿನಷ್ಟು ಜಮೀನನ್ನು ಹಿಪ್ಪುನೇರಳೆ ಬೆಳೆಗಾಗಿ ಪರಿವರ್ತಿಸಲಾಗಿದೆ. ಇದಲ್ಲದೆ ಉತ್ತಮ ತಳಿಗಳಿಂದಾಗಿ[4] ಇದು ಅತಿ ಲಾಭದಾಯಕ ಉದ್ಯಮವಾಗಿದ್ದು ಅನೇಕ ರೀತಿಯಲ್ಲಿ ರಾಜ್ಯದಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಟ್ಟಿದೆ. ರೇಷ್ಮೆ ಪದಾರ್ಥಗಳ ರಫ್ತು

ನಿಂದಾಗಿ ವಿದೇಶಿ ವಿನಿಮಯಗಳಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಬದುಕಿನ ಒಂದು ಆಧಾರ ಕಲ್ಪಿಸಿಕೊಟ್ಟಿದೆ. 14 ಜಿಲ್ಲೆಗಳ ಸುಮಾರು 6,328[5] ಹಳ್ಳಿಗಳಲ್ಲಿ 2 ಲಕ್ಷಕ್ಕೂ ಅಧಿಕ ಸ್ವಂತ ಕುಟುಂಬದವರು ತಯಾರಿಸುತ್ತಿರುವ ರೇಷ್ಮೆಗೂಡು ಹಾಗೂ ರೇಷ್ಮೆ ನೂಲಿನ ಉತ್ಪಾದನೆ ಸುಮಾರು 40,519 ಹಾಗೂ 2,699 ಮೆಟ್ರಿಕ್ ಟನ್ನು ದಾಟಿದೆ. ಜಿಲ್ಲಾವಾರು ಉತ್ಪಾದನೆಯ ಪ್ರಗತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.

ಕರ್ನಾಟಕದಲ್ಲಿ ಜಿಲ್ಲಾವಾರು ರೇಷ್ಮೆಗೂಡು ಹಾಗೂ ನೂಲಿನ ಉತ್ಪಾದನೆ 1979–80

	ಗೂಡಿನ ಉತ್ಪಾದನೆ (ಮೆಟ್ರಿಕ್ ಟನ್ನುಗಳು)	ಪಟ್ಟಿನ ಶೇಕಡಾ	ರೇಷ್ಮೆ ನೂಲಿನ ಉತ್ಪಾದನೆ (ಮೆಟ್ರಿಕ್ ಟನ್ನುಗಳು)	ಪಟ್ಟಿನ ಶೇಕಡಾ	ರೆಂಡಿಟಾ ದರದಲ್ಲಿ
1	2	3	4	5	6
ಸಾಂಪ್ರದಾಯಿಕ :					
ಮೈಸೂರು	17,361	42·85	846·00	31·34	20·52
ಕೋಲಾರ	7,124	17·58	594·20	22·02	12·00
ಬೆಂಗಳೂರು	6,009	14·83	404·10	14·97	14·87
ಮಂಡ್ಯ	3,549	8·76	207·10	7·67	17·15
ತುಮಕೂರು	692	1·71	69·20	2·56	10·10
ಒಟ್ಟು	34,735	85·73	2,120·60	78·56	
ಸಾಂಪ್ರದಾಯಿಕವಲ್ಲದ :					
ಬಿಜಾಪುರ	1,016	2·51	101·60	3·76	10·00
ಬಳ್ಳಾರಿ	502	1·24	50·20	1·86	10·00
ಬೀದರ್	160	0·39	16·00	0·59	10·00
ಚಿತ್ರದುರ್ಗ	1,028	2·54	102·80	3·82	10·00
ಧಾರವಾಡ	342	0·84	34·20	1·27	10·00
ಗುಲ್ಬರ್ಗ	180	0·44	18·00	0·67	10·00

1	2	3	4	5	6
ಹಾಸನ	753	1.86	75.30	2.79	10.00
ರಾಯಚೂರು	1,036	2.56	103.60	3.84	10.00
ಶಿವಮೊಗ್ಗ	767	1.89	76.70	2.84	10.00
ಒಟ್ಟು	5,784	14.27	578.40	21.44	
ಒಟ್ಟು	40,519	100.00	2,699.00	100.00	13.60

ಮೂಲ : ರೇಷ್ಮೆ ಇಲಾಖೆಯ ದಾಖಲೆಗಳಿಂದ.

ಮೇಲಿನ ಪಟ್ಟಿಯಲ್ಲಿ ತೋರಿಸಿರುವಂತೆ ಶೇಕಡಾ 85.73 ರಷ್ಟು ರೇಷ್ಮೆ ಗೂಡಿನ ಉತ್ಪಾದನೆ ಸಾಂಪ್ರದಾಯಿಕ ಜಿಲ್ಲೆಗಳಿಗೆ ಸೀಮಿತವಾಗಿದೆ. ಅದರಲ್ಲೂ ಮೈಸೂರು, ಕೋಲಾರ, ಹಾಗೂ ಬೆಂಗಳೂರು ಜಿಲ್ಲೆಗಳ ಕೊಡುಗೆ ಗಮನಾರ್ಹ. ಆದರೆ ಇಲ್ಲಿಯ ಶೇಕಡಾವಾರು ಉತ್ಪನ್ನ6 ಹೊಸ ಜಿಲ್ಲೆಗಳಲ್ಲಿ ಕಂಡು ಬರುವಷ್ಟು ಇಲ್ಲ. ಸಾಂಪ್ರದಾಯಿಕ ಜಿಲ್ಲೆಗಳಲ್ಲಿ ಉಪಯೋಗಿಸಲಿರುವ "ಸಿನೀಚಿ" ತಳಿಯೇ ಈ ಪರಿಸ್ಥಿತಿಗೆ ಕಾರಣ.

ಸ್ಪನ್ ನೂಲು ಮತ್ತು ವಾಯಲ್ ನೂಲಿನ ಪರಿಸ್ಥಿತಿ

ಇದಲ್ಲದೆ 1979ರಲ್ಲಿ ಸುಮಾರು 43.000 ಕಿಲೋ ಸ್ಪನ್ ನೂಲು ಮತ್ತು 33,000 ಕಿಲೋ ವಾಯಿಲ್ ನೂಲು ಸಂಘಟಿತ ಮಿಲ್ಲುಗಳಲ್ಲಿ ಉತ್ಪಾದಿಸಲಾಗುತ್ತಿತ್ತು. ಇತೀಚಿನ ವರ್ಷಗಳಲ್ಲಿ ರೇಷ್ಮೆ ಕೃಷಿ ಪ್ರದೇಶಗಳಲ್ಲಿ ಒಟ್ಟಾರೆ ಉತ್ಪಾದನೆಯಲ್ಲದೆ ಎಕರೆವಾರು ಉತ್ಪತ್ತಿ ಸತತವಾಗಿ ಹೆಚ್ಚುತ್ತಿದೆ. ಈ ಅಂಶವನ್ನು ಕೆಳಗಿನ ಪಟ್ಟಿಯಲ್ಲಿ ಕಾಣಬಹುದು.

ಪಟ್ಟಿ-ಬ

ಕರ್ನಾಟಕದಲ್ಲಿ ರೇಷ್ಮೆ ಗೂಡು ಹಾಗೂ ನೂಲಿನ ಉತ್ಪಾದನೆ 1961–62 ರಿಂದ 79–80

ವರ್ಷ	ಪ್ರತಿ ಹೆಕ್ಟೇರಿಗೆ ಗೂಡಿನ ಇಳುವರಿ (ಕಿ. ಗ್ರಾಂ. ಗಳಲ್ಲಿ)	ಪ್ರತಿ ಹೆಕ್ಟೇರಿಗೆ ನೂಲಿನ ಇಳುವರಿ (ಕಿ. ಗ್ರಾಂ. ಗಳಲ್ಲಿ)
1961–62	209	12
1971–72	313	19
1979–80	365	24

ಮೂಲ : — ರೇಷ್ಮೆ ಇಲಾಖೆಯ ವಾರ್ಷಿಕ ಆಡಳಿತ ವರದಿ, 1979–80

ಮೇಲಿನ ಪಟ್ಟಿಯನ್ನು ವಿಶ್ಲೇಷಿಸಿದಾಗ ಕಂಡು ಬರುವ ಪ್ರಮುಖ ಅಂಶವೆಂದರೆ, 1961–62ರಲ್ಲಿ ಒಂದು ಎಕರೆಗೆ ಇದ್ದ 12 ಕಿ.ಗ್ರಾಂ ಉತ್ಪಾದನೆ 1979–80ರಲ್ಲಿ 24 ಕಿ.ಗ್ರಾಂಗೆ ಅಧಿಕಗೊಂಡಿದೆ.

ಈ ಅಂಶದಿಂದ ನಮಗೆ ತಿಳಿದು ಬರುವ ಮತ್ತೊಂದು ಅಂಶವೆಂದರೆ ರೇಷ್ಮೆ ಉದ್ಯಮವು ಕೇವಲ ಕಾಲಹರಣಕ್ಕೆ ಮಾತ್ರ ಮಾಡುವುದಲ್ಲದೆ ಪೂರ್ಣ ಉದ್ಯಮವಾಗಿ ಮಾರ್ಪಟ್ಟಿದೆ ಎನ್ನುವುದು.

ಉದ್ಯೋಗಾವಕಾಶ

ನಿರುದ್ಯೋಗ ಸಮಸ್ಯೆಯು ಇತ್ತೀಚಿನ ಸಮಸ್ಯೆಯಲ್ಲ. ಇದು ಹಲವಾರು ವರ್ಷಗಳಿಂದ ಪ್ರಪಂಚಾದ್ಯಂತ ಪಸರಿಸುತ್ತಿರುವ ಹಾಗೂ ಬೆಳೆಯುತ್ತಿರುವ ವಿಷ ಜಂತು. ಇದರಲ್ಲಿ ಕರ್ನಾಟಕದ ಪಾಲು ಕಡಿಮೆ ಏನಿಲ್ಲ. ನಿರುದ್ಯೋಗ ಸಮಸ್ಯೆ ನಮ್ಮ ರಾಜ್ಯದ ಆರ್ಥಿಕ ಸಾಮಾಜಿಕ, ಹಾಗೂ ನೈತಿಕ ಮೌಲ್ಯಗಳ ಮೇಲೆ ಸ್ವಲ್ಪ ಮಟ್ಟಿನ ದುಷ್ಪರಿಣಾಮವನ್ನು ಬೀರಿದೆ. ಇದನ್ನು ತಡೆಗಟ್ಟಲು ಅಥವಾ ನಿವಾರಿಸಲು ಇರುವ ಏಕೈಕ ಮಾರ್ಗವೆಂದರೆ ಗೃಹ ಹಾಗೂ ಸಣ್ಣ ಕೈಗಾರಿಕೆಗಳ ಸ್ಥಾಪನೆ. ಇತ್ತೀಚಿನ ವರ್ಷಗಳಲ್ಲಿ ರೇಷ್ಮೆ ಉದ್ಯಮವು ಒಂದು ಜನಪ್ರಿಯ ಗೃಹ ಕೈಗಾರಿಕೆಯಾಗಿ ಬೆಳೆದಿದೆ. ಈ ರೀತಿಯಲ್ಲಿ ಕರ್ನಾಟಕ ಸರ್ಕಾರವು ರೇಷ್ಮೆ ಕೃಷಿಯನ್ನು ಸುಮಾರು 6,328 ಹಳ್ಳಿಗಳಲ್ಲಿ ಜನಪ್ರಿಯವನ್ನಾಗಿ ಮಾಡಿದೆ. ಇದರಿಂದಾಗಿ ಸುಮಾರು 24·06 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರಕಿದೆ. ಇದರಲ್ಲಿ ಶೇಕಡಾ 35 ಹಿಂದುಳಿದ ವರ್ಗಗಳಿಗೆ ಸೇರಿದ ಜನರಿದ್ದಾರೆ.

ರೇಷ್ಮೆ ಕೃಷಿಯು ಗೃಹ ಕೈಗಾರಿಕೆಯ ವ್ಯಾಪ್ತಿಗೆ ಒಳಪಡುತ್ತದೆ. ಇದು ನಿರುದ್ಯೋಗ ಸಮಸ್ಯೆ ನಿವಾರಣೆಯ ಸಾಧನವೂ ಅಲ್ಲದೆ ನಮ್ಮ ರಾಜ್ಯದ ರೈತ ಕುಟುಂಬಗಳಿಗೆ ಅಧಿಕ ಹಣಗಳಿಕೆಯ ಒಂದು ಮಾರ್ಗವೂ ಆಗಿದೆ.

ಸುಮಾರು 1981ರ ಜನಗಣತಿಯ ಪ್ರಕಾರ ನಮ್ಮ ರಾಜ್ಯದಲ್ಲೆಲ್ಲಾ ಐದು ಜನರಿರುವ ಒಂದು ರೈತ ಕುಟುಂಬವು ಒಂದು ವರ್ಷದಲ್ಲಿ ಸರಾಸರಿ 130 ರಿಂದ 190 ದಿವಸ ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸದಲ್ಲಿ ನಿರತರಾಗಿರುತ್ತಾರೆ. ಉಳಿದ ಸಮಯದಲ್ಲಿ ಪ್ರತಿಫಲವಿಲ್ಲದೆ ಕಾಲಹರಣ ಮಾಡುವ ಬದಲು ಹೆಚ್ಚುವರಿ ಹಣಗಳಿಕೆಗಾಗಿ ಗೃಹ ಕೈಗಾರಿಕೆಯನ್ನು ಕೈಗೊಳ್ಳುವುದು ಸಮಂಜಸ. ಈ ದಿಸೆಯಲ್ಲಿ ರೇಷ್ಮೆ ಕೃಷಿಯು ಒಂದು ಸುಲಭೋಪಾಯ.

ರೇಷ್ಮೆ ಉದ್ಯಮ ಮತ್ತು ಉದ್ಯೋಗಾವಕಾಶಗಳು

ಉದ್ಯೋಗಾವಕಾಶದ ದೃಷ್ಟಿಯಿಂದ ರೇಷ್ಮೆ ಉದ್ಯಮವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು.

ಅ) ರೇಷ್ಮೆ ಹುಳುಗಳ ಮೊಟ್ಟೆಯ ಉತ್ಪಾದನೆ ಹಾಗೂ ಜೀವಣಿಗೆ, ಮತ್ತು ಮೊಟ್ಟೆ ಕೇಂದ್ರಗಳ ಮೂಲಕ ಮೊಟ್ಟೆಯ ಉತ್ಪಾದನೆಯನ್ನು ಕೈಗೊಳ್ಳುವುದು.

ಆ) ಹಿಪ್ಪುನೇರಳೆ ಬೆಳೆ ಹಾಗೂ ಹುಳು ಸಾಕಾಣಿಕೆ.

ಇ) ನೂಲು ತೆಗೆಯುವುದು– ಈ ಕಾರ್ಯಚಟುವಟಿಕೆ ಕೊಳ್ಳೇಗಾಲ, ಕೋಲಾರ, ಶಿಡ್ಲಘಟ್ಟ, ಚಾಮರಾಜನಗರ, ರಾಮನಗರ, ಚನ್ನಪಟ್ಟಣ, ಕನಕಪುರ ತಾಲ್ಲೂಕುಗಳಿಗೆ ಮಾತ್ರ ಸೀಮಿತವಾಗಿದೆ. ಖಾಸಗಿ ಹಾಗೂ ಸರ್ಕಾರಿ ಒಡೆತನಗಳಲ್ಲಿ ಈ ಕಾರ್ಯಚಟುವಟಿಕೆ ನಡೆಯುತ್ತಿದೆ.

ಈ) ಉಪೋತ್ಪನ್ನಗಳ ಉಪಯೋಗ — ಉದಾಹರಣೆಗೆ ತಿರಸ್ಕೃತ ರೇಷ್ಮೆ[7] ಹಾಗೂ ಸತ್ತ ಹುಳು.[8]

ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುವ ಎಲ್ಲಾ ಉಪೋತ್ಪನ್ನಗಳನ್ನು ಶುದ್ಧೀಕರಿಸಲು ಸಾಧ್ಯವಿಲ್ಲದಿರುವುದರಿಂದ ಉಪೋತ್ಪನ್ನಗಳನ್ನು ರಫ್ತು ಮಾಡಿ ವಿದೇಶೀ ವಿನಿಮಯವನ್ನು ಗಳಿಸಲಾಗುತ್ತಿದೆ.

ಪಂಚವಾರ್ಷಿಕ ಯೋಜನೆಗಳಡಿಯ ಪ್ರಗತಿ

5ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 5 ಲಕ್ಷ ನೂತನ ಹುದ್ದೆಗಳನ್ನು ಕಲ್ಪಿಸಲು ಯೋಜಿಸಲಾಗಿತ್ತು. ಆದರೆ ವಾಸ್ತವವಾಗಿ 6.23 ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಲಾಯಿತು.

ರೇಷ್ಮೆಯ ಉಪಯೋಗ ಶ್ರೀಮಂತಿಕೆಯ ಚಿನ್ಹೆ ಹಾಗೂ ಜೀವನ ಮಟ್ಟದ ಉನ್ನತ ಶ್ರೇಣಿಯನ್ನು ತೋರುವುದರಿಂದ ಇದರ ಬೇಡಿಕೆ ಹೆಚ್ಚುತ್ತಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ಕೆಲವು ವರ್ಷಗಳ ಹಿಂದೆ ಕೃತಕ ರೇಷ್ಮೆಯನ್ನು ಕಂಡುಹಿಡಿದು ಕಡಮೆ ಬೆಲೆಗೆ ಮಾರಾಟ ಮಾಡಲಾಯಿತು. ತಾತ್ಕಾಲಿಕವಾಗಿ ನಿಜವಾದ ರೇಷ್ಮೆಗೆ ಬೇಡಿಕೆ ಕುಸಿದರೂ ಮತ್ತೆ ನೈಜ ಸಿರಿವಂತಿಕೆಯಿಂದಾಗಿ ತನ್ನ ಸ್ಥಾನವನ್ನು ಗಳಿಸಿದುದಲ್ಲದೆ ವರ್ಷವರ್ಷ ಬೇಡಿಕೆಯನ್ನು ಹೆಚ್ಚಿಸಿಕೊಂಡಿತು.

ಮೈಸೂರು ಪ್ರವಾಸಿಗರ ಬೀಡಾಗಿರುವುದರಿಂದ ಬಹುಮಂದಿ ಪ್ರವಾಸಿಗರು ಮೈಸೂರು ರೇಷ್ಮೆ ಸೀರೆ ಹಾಗೂ ಉಡುಪುಗಳನ್ನು ಕೊಂಡೊಯ್ಯುತ್ತಾರೆ. ಜನರ ಸಾಮಾನ್ಯ ಜೀವನ ಮಟ್ಟ ಹೆಚ್ಚಿದಂತೆಲ್ಲಾ ರೇಷ್ಮೆಯ ಬೇಡಿಕೆಯೂ ಹೆಚ್ಚುವುದು ಸಹಜ. ರೇಷ್ಮೆ ಉಡುಪುಗಳನ್ನು ಧರಿಸುವುದರಿಂದಲೇ ಜೀವನ ಮಟ್ಟ ಸುಧಾರಿಸಿದೆಯೆಂದು ಅರ್ಥ.

ಹಿಪ್ಪುನೇರಳೆ ಕೃಷಿಗೆ ಬೇಕಾದಂತಹ ಹೆಚ್ಚಿನ ಹಿಪ್ಪುನೇರಳೆ ಬೀಜ ಉತ್ಪಾದನೆ ಪರೋಕ್ಷವಾಗಿ ಉದ್ಯೋಗಾವಕಾಶವನ್ನು ಹೆಚ್ಚಿಸುವ ಸಾಧ್ಯತೆಯಿದೆ. ಜೊತೆಗೆ ಉಪವಸ್ತುಗಳ ತಯಾರಿಕೆ, ರೇಷ್ಮೆ ನೇಯ್ಗೆ, ಬಣ್ಣ ವಿನ್ಯಾಸ ಹಾಗೂ ರೇಷ್ಮೆಯ ಮಾರುಕಟ್ಟೆ ಮುಂತಾದವುಗಳೂ ಸಹ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಸಾಧ್ಯತೆ ವಿಶೇಷವಾಗಿದೆ. ಇದಲ್ಲದೆ ಸೀರಾವರಿ ಭಾವಿಗಳನ್ನು ತೋಡುವುದು, ರೇಷ್ಮೆ ಹುಳು ಸಾಕಾಣಿಕೆ ಗೃಹ

ನಿರ್ಮಾಣ ಹಾಗೂ ರೇಷ್ಮೆ ಹುಳು ಸಾಕಾಣಿಕೆಯ ಸಲಕರಣೆಗಳ ದುರಸ್ತಿ ಹಾಗೂ ರಿಪೇರಿ, ರೇಷ್ಮೆ ನೂಲು ತೆಗೆಯುವುದು, ಮಾರಾಟ ಮಾಡುವದು, ರೇಷ್ಮೆ ಸಂಶೋಧನೆ ಇತ್ಯಾದಿಗಳಿಂದ ಉದ್ಯೋಗಾವಕಾಶಗಳು ವೃದ್ಧಿಸುತ್ತವೆ.

ಸಾಂಪ್ರದಾಯಿಕವಾಗಿ ರೇಷ್ಮೆ ಕೃಷಿಯನ್ನು ಬೇಸಾಯಕ್ಕೆ ಸಹಾಯಕರ ಉದ್ಯೋಗವಾಗಿ ನಡೆಸುತ್ತಿದ್ದಾರೆ. ಇದರಿಂದ ರೈತರಿಗೆ ಸಾಕಷ್ಟು ಹೆಚ್ಚಿನ ಆದಾಯ ಸಿಗುತ್ತದೆ. ರೇಷ್ಮೆ ಕೃಷಿಯು ರೈತರಿಗೆ ನೀಡುವಷ್ಟು ಅನುಕೂಲಗಳನ್ನು ಬೇರಾವ ಗೃಹಕೈಗಾರಿಕೆಯೂ ನೀಡಲಾರದು ಎಂಬ ಅಂಶ ಖಚಿತವಾಗಿ ತಿಳಿದುಬಂದಿದೆ. ಹಿಪ್ಪನೇರಳೆ ಕೃಷಿ ಹಾಗೂ ರೇಷ್ಮೆ ಹುಳು ಸಾಕಾಣಿಕೆ ಒಟ್ಟಿಗೆ ನಡೆಯುತ್ತವೆ. ಈ ಗೃಹ ಕೈಗಾರಿಕೆಯಿಂದ ಗ್ರಾಮೀಣ ಮಹಿಳೆಯರಿಗೆ ತಮ್ಮ ವಿಶ್ರಾಂತಿ ವೇಳೆಯಲ್ಲಿ ದುಡಿಯಲು ಒಂದು ಅವಕಾಶವಾಗುತ್ತದೆ. ಇದಲ್ಲದೆ ರೇಷ್ಮೆ ಕೃಷಿಯಿಂದ ಇನ್ನೂ ಹಲವಾರು ಉಪಯುಕ್ತ ವಿಭಾಗಗಳಲ್ಲಿ ಉದ್ಯೋಗಾವಕಾಶಗಳು ಲಭಿಸುತ್ತವೆ. ಉದಾ : — 1,000 ಎಕರೆ ಜಮೀನನ್ನು ಮೊದಲನೆಯ ಬಾರಿಗೆ ರೇಷ್ಮೆ ಕೃಷಿಗೆ ಒಳಪಡಿಸುವುದಾದರೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗಾವಕಾಶಗಳು ಉತ್ಪತ್ತಿಯಾಗುತ್ತವೆ.

ಪ್ರತ್ಯಕ್ಷವಾಗಿ ಈ ಕೆಳಗಿನ ಚಟುವಟಿಕೆಗಳು ಉದ್ಯೋಗಾವಕಾಶಗಳನ್ನು ವೃದ್ಧಿಗೊಳಿಸುತ್ತವೆ.

ಅ) ಹಿಪ್ಪನೇರಳೆ ಸಾಗುವಳಿ, ಆ) ರೇಷ್ಮೆ ಮೊಟ್ಟೆಯ ಉತ್ಪಾದನೆ, ಇ) ರೇಷ್ಮೆ ಹುಳು ಸಾಕಾಣಿಕೆ, ಈ) ನೂಲು ತೆಗೆಯುವಿಕೆ, ಉ) ನೂಲು ಹೊಂದಾವಣಿ, ಊ) ಒಣ್ಣ ಕಟ್ಟುವಿಕೆ ಎ) ನೇಯ್ಗೆ ಏ) ಹಾಗೂ ಹಲವು ಹಂತಗಳಲ್ಲಿ ಮಾರಾಟ ಇದಲ್ಲದೆ ಉಪೋತ್ಪನ್ನಗಳ ಪರಿಷ್ಕರಣ ಹಾಗೂ ಮಾರಾಟ. ಪರೋಕ್ಷವಾದ ಅವಕಾಶಗಳು ಯಾವುವೆಂದರೆ : ಈ ಎಲ್ಲಾ ಹಂತಗಳಿಗೂ ಬೇಕಾಗುವ ಸಲಕರಣೆಗಳ ತಯಾರಿಕೆ, ವಿಮೆ, ಹಣ ಸಂಸ್ಥೆಗಳ ಹೆಚ್ಚಿನ ವಹಿವಾಟು, ತೆಂಗಿನ ನಾರಿನ ಉತ್ಪಾದನೆಗಳಿಗೆ ಹೆಚ್ಚಿನ ಬೇಡಿಕೆ, ಹೆಚ್ಚಿನ ಚಂದ್ರಿಕೆ, ಬುಟ್ಟಿ ಇತ್ಯಾದಿಗಳ ಬೇಡಿಕೆ, ಇತ್ಯಾದಿ.

ನಿರ್ಯಾತ

ಕೇಂದ್ರ ಸರ್ಕಾರವು ಯಾವುದೇ ರೀತಿಯ ಕಟ್ಟಳೆಗಳನ್ನು ರೇಷ್ಮೆ ಉತ್ಪಾದನೆಗಳ ರಫ್ತಿಗೆ ನಿಗದಿಪಡಿಸಿಲ್ಲ. ಕೇಂದ್ರ ರೇಷ್ಮೆ ಮಂಡಳಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟು 8 ಸರ್ಟಿಫಿಕೇಟ್ ಸೆಂಟರುಗಳು ಆಯಾ ರಾಜ್ಯದ ಪ್ರಾದೇಶಿಕ ಸಂಸ್ಥೆಗಳಿಗೆ ನೋಂದಾಯಿಸಲ್ಪಟ್ಟಿವೆ. ಇಂತಹ ಒಂದು ಸಂಸ್ಥೆ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದಲ್ಲಿದೆ. ಇಲ್ಲಿಂದ ಯಾವ ರಾಜ್ಯದ ನೇಕಾರರಾದರೂ ಸರಿಯೇ, ತಮ್ಮ ರಫ್ತಿಗೆ ಅರ್ಹ ಪಟ್ಟಿ ಪಡೆದು ಯಾವ ದೇಶಕ್ಕಾದರೂ ರೇಷ್ಮೆ ಪದಾರ್ಥವನ್ನು ರಫ್ತು ಮಾಡಬಹುದು.

ಬೆಂಗಳೂರಿನ ಕಛೇರಿಯಿಂದ ಹಿಪ್ಪ ನೇರಳೆ ಮೂಲ ಹಾಗೂ ಇತರ ರೇಷ್ಮೆ ಪದಾರ್ಥಗಳ ರಫ್ತಿನ ವಿವರಣೆಯನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.

ಪಟ್ಟಿ–ಕ

ರೇಷ್ಮೆ ಪದಾರ್ಥಗಳ ರಫ್ತಿನ ಆಶಯು (ಬೆಂಗಳೂರು ಸರ್ಟಿಫಿಕೇಶನ್ ಸೆಂಟರ್ ಮಾತ್ರ)

(ಪ್ರಮಾಣ ಲಕ್ಷ ಚ.ಮೀ. ನಲ್ಲಿ ಹಾಗೂ ಬೆಲೆ ರೂ. ಗಳಲ್ಲಿ)

	ಹಿಪ್ಪನೇರಳೆ			ಹಿಪ್ಪನೇರಳೆಯಲ್ಲದ್ದು (ಟಸ್ಸಾರ್)			ಒಟ್ಟು		
ವರ್ಷ	ಪ್ರಮಾಣ	ಬೆಲೆ	ಶೇಕಡಾವಾರು ಸಾಪೇಕ್ಷ	ಪ್ರಮಾಣ	ಬೆಲೆ	ಶೇಕಡಾವಾರು ಸಾಪೇಕ್ಷ	ಪ್ರಮಾಣ	ಬೆಲೆ	ಶೇಕಡಾವಾರು ಸಾಪೇಕ್ಷ
1978–79	11·234	312·34 (96·91)	100·00	0·261	10·07 (3·09)	100·00	11·495	325·41 (100·00)	100·00
1978–80	12·104	397·45 (99·18)	26·4	0·073	3·27 (0·82)	67·50	12·177	400·72 (100·00)	23·15
1980–81	13·314	475·45 (97·76)	119·63	0·248	10·91 (2·24)	233·09	13·562	486·36 (100·00)	21·38

ಮೂಲ : ಕೇಂದ್ರ ರೇಷ್ಮೆ ಮಂಡಲಿಯ ದಾಖಲೆಗಳಿಂದ.

ಈ ಪಟ್ಟಿಯನ್ನು ವಿಶ್ಲೇಷಿಸಿದಾಗ ಈ ಅಂಶಗಳು ಕಂಡು ಬರುತ್ತವೆ: (ಅ) 1980-81ರಲ್ಲಿ ಸುಮಾರು486.36 ಲಕ್ಷಗಳಷ್ಟು ರೇಷ್ಮೆ ಪದಾರ್ಥಗಳನ್ನು ರಫ್ತು ಮಾಡಲಾಯಿತು. ಈ ಸಂಖ್ಯೆ 1978-79ಕ್ಕಿಂತ ಶೇಕಡಾ 50ರಷ್ಟು ಅಧಿಕವಾಗಿದೆ. (ಆ) ಹಿಪ್ಪನೇರಳೆ ಮೂಲದ ರೇಷ್ಮೆ ಪದಾರ್ಥಗಳು ವ್ಯಾಪಕವಾಗಿ ರಫ್ತು ಮಾಡಲ್ಪಟ್ಟಿವೆ. ಆದರೆ ಶೇಕಡಾ ಮೂರರಷ್ಟು ತಸ್ಸಾರ್ ಮೂಲದ ರೇಷ್ಮೆ ಪದಾರ್ಥಗಳನ್ನು ಮಾತ್ರ 1980-81ರಲ್ಲಿ ರಫ್ತು ಮಾಡಲಾಯಿತು.

ಪರಿಸಮಾಪ್ತಿ

ಈ ಅಂಶಗಳಿಂದ ನಮಗೆ ತಿಳಿಯುವುದೇನೆಂದರೆ ಭಾರತ ದೇಶದ ರೇಷ್ಮೆ ಪದಾರ್ಥಗಳಿಗೆ 1978-79ರಿಂದ ಸತತವಾಗಿ ಬೇಡಿಕೆ ಹೆಚ್ಚುತ್ತಿದೆ. ರೇಷ್ಮೆಯ ವೈವಿಧ್ಯತೆ ಹಾಗೂ ಅದರ ಸಾಂಪ್ರದಾಯಿಕತೆ ಇದಕ್ಕೆ ಮುಖ್ಯ ಕಾರಣವೆಂದು ಹೇಳಬಹುದು.

ಈ ಮೇಲಿನ ಎಲ್ಲಾ ಅಂಶಗಳಿಂದ ರೇಷ್ಮೆ ಕೃಷಿಯು ಕೃಷಿತ ಕುಟುಂಬಗಳಿಗೆ ಸಮುದ್ಯೋಗವನ್ನು ಕಲ್ಪಿಸುವುದರ ಜೊತೆಗೆ ವಿರಾಮ ವೇಳೆಯನ್ನು ಆದಾಯದ ವೇಳೆಯನ್ನಾಗಿ ಮಾರ್ಪಡಿಸಲು ಸಹಕರಿಸಿದೆ. ಅಲ್ಲದೆ, ನಮ್ಮ ದೇಶದ ಬೊಕ್ಕಸಕ್ಕೆ ವಿದೇಶಿ ವಿನಿಮಯ ವನ್ನು ಗಳಿಸಿಕೊಡುವ ಕಾಮಧೇನು ಮತ್ತು ಕಲ್ಪವೃಕ್ಷವಾಗಿದೆ.

ಅಡಿ ಟಿಪ್ಪಣಿಗಳು

1. ಮೈಸೂರು, ಬೆಂಗಳೂರು, ತುಮಕೂರು, ಕೋಲಾರ ಮತ್ತು ಮಂಡ್ಯ.
2. ಸಿಲ್ಕ್ ಮನ್ ಕಂಪಾನಿಯನ್-1983, ಕೇಂದ್ರ ರೇಷ್ಮೆ ಮಂಡಳಿ, ಪುಟ 34.
3. 79.63 ಕೋಟಿ ಸಹಾಯ ವಿಶ್ವಬ್ಯಾಂಕಿನಿಂದ ರಾಜ್ಯದ ರೇಷ್ಮೆ ಅಭಿವೃದ್ಧಿಗೆ ದೊರೆತಿದೆ.
4. ಎಂ-5 ಅಥವಾ ಕಣ್ವ-2.
5. ಸ್ಟಾಟಿಸ್ಟಿಕಲ್ ಬಯನಿಯಲ್-1982. ಕೇಂದ್ರ ರೇಷ್ಮೆ ಮಂಡಳಿ, ಪುಟ-21.
6. ಶೇಕಡಾವಾರು ಎಂದರೆ 1 ಕಿಲೋ ರೇಷ್ಮೆ ನೂಲು ತೆಗೆಯಲು ಬೇಕಾಗುವ ಗೂಡಿನ ತೂಕ.
7. ಪ್ರಸ್ತುತ ಚನ್ನಪಟ್ಟಣದಲ್ಲಿ ಒಂದು ಸರ್ಕಾರಿ ಸ್ಪನ್ ಸಿಲ್ಕ್ ಮಿಲ್ಲು ಇವೆ.
8. ಮೈಸೂರಿನಲ್ಲಿ ಸತ್ತ ಹುಳುವಿನಿಂದ ಎಣ್ಣೆ ತೆಗೆಯುವ ಖಾಸಗಿ ಗಿರಣಿ ಒಂದಿದೆ.

ವಿ. ಎನ್. ಶೇಷಗಿರಿರಾವ್

ಪ್ರಾಚೀನ ಪಾಶ್ಚಾತ್ಯ ತಾತ್ವಿಕ ಚಿಂತನೆ—ಪ್ಲೇಟೋ ಮತ್ತು ಅರಿಸ್ಟಾಟಲ್

೧

ಪ್ಲೇಟೋ (ಸುಮಾರು ಕ್ರಿ.ಪೂ. 427–ಕ್ರಿ.ಪೂ. 347) ಜಗತ್ಪ್ರಸಿದ್ಧ ತತ್ವಜ್ಞನಾಗಿದ್ದಾನೆ. ಅವನು ಅಥೆನ್ಸಿನಲ್ಲಿ ಆಧ್ಯಾತ್ಮಿಕ ಕ್ರಾಂತಿಯನ್ನುಂಟುಮಾಡಿದ ಸಾಕ್ರಟೀಸನ ಪಟ್ಟ ಶಿಷ್ಯೋತ್ತಮನು. ಅವನು ಮೇಧಾವಿ ತಾರ್ಕಿಕನೂ ಅಸಾಧಾರಣ ರಾಜನೀತಿ ಕುಶಲನೂ ಆಗಿದ್ದನು. ಸಂಗೀತ, ಸಾಹಿತ್ಯ, ಚಿತ್ರಕಲೆ ಮುಂತಾದ ಶಾಸ್ತ್ರಗಳಲ್ಲಿ ಅವನಿಗೆ ಆಳವಾದ ಪಾಂಡಿತ್ಯವಿತ್ತು. ವಿದ್ಯಾಪಕ್ಷಪಾತಿಯಾಗಿದ್ದ ಆವನು 'ದಿ ಅಕೆಡಮಿ' ಎಂಬ ಶಾಲೆಯನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳಿಗೆ ಗಣಿತಶಾಸ್ತ್ರ, ತತ್ವಶಾಸ್ತ್ರ, ಖಗೋಳ ಶಾಸ್ತ್ರ ಮುಂತಾದವುಗಳನ್ನು ಬೋಧಿಸುತ್ತಿದ್ದ. ಅದು ತನ್ನೆಡೆಗೆ ಬಹಳ ಜನರನ್ನು ಆಕರ್ಷಿಸಿತು. ಯೂರೋಪಿನ 'ಮೊಟ್ಟ ಮೊದಲನೆಯ ವಿಶ್ವವಿದ್ಯಾನಿಲಯ'ವೆಂದೂ ಖ್ಯಾತಿಹೊಂದಿತು.

ಜಗತ್ತಿನ ತಾತ್ವಿಕ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ವ್ಯವಸ್ಥಾಬದ್ಧವಾದ ತಾತ್ವಿಕ ಚಿಂತನೆಯನ್ನು ರೂಪಿಸಿದವನು ಪ್ಲೇಟೋ. ಹೀಗೆಂದರೆ. ಅವನಿಗಿಂತ ಮೊದಲು ಇದ್ದ ಚಿಂತಕರು ತತ್ವಶಾಸ್ತ್ರಕ್ಕೆ ಏನನ್ನೂ ಕೊಟ್ಟಿಲ್ಲವೆಂದು ಅರ್ಥವಲ್ಲ. ಆವರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆದರೆ ಅವರ ಚಿಂತನೆ ವ್ಯವಸ್ಥಾಬದ್ಧವಾಗಿರದೆ, ಬಿಡಿಬಿಡಿಯಾದ ಚಿಂತನ ಸಮೂಹವಾಗಿತ್ತು. ಅದು ಸುವ್ಯವಸ್ಥೆಗೊಂಡುದು ಪ್ಲೇಟೋವಿನ ಕೈಯಲ್ಲಿಯೇ.

ಪ್ಲೇಟೋವಿನ ತಾತ್ವಿಕ ಚಿಂತನೆ ತನಗಿಂತ ಮೊದಲು ಇದ್ದ ಎಲ್ಲಾ ತಾತ್ವಿಕರ ಗುಣಾಂಶಗಳನ್ನು ಹೀರಿಕೊಂಡು ಬೆಳೆದಿರುವಂಥದು. ಅವನ ಮೇಲೆ ಪೈಥಾಗೊರಾಸ್, ಪಾರ್ಮೆನೈಡಿಸ್, ಹೆರಾಕ್ಲೈಟಸ್, ಸಾಕ್ರಟೀಸ್ ಮುಂತಾದ ತತ್ವಜ್ಞರ ಅಚ್ಚಳಿಯದ ಪ್ರಭಾವವಿದೆ. ಆದರೆ ಈ ಪ್ರಭಾವಗಳನ್ನು ಸುಮಧುರವಾಗಿ ಸಮನ್ವಯ ಮಾಡಿರುವುದು ಅವನ ಬುದ್ಧಿ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ. ಅವನು ಅಸಲು ಚಿಂತಕನಾಗಿದ್ದನು. ಹಳೆಯದೆಲ್ಲ ಅವನ ಕೈಯಲ್ಲಿ ಪರಿಪಕ್ವ ನವೀನ ಚಿಂತನೆ ಎನಿಸಿಕೊಳ್ಳುತ್ತದೆ.

ಪ್ಲೇಟೋ ಹುಟ್ಟಿನಿಂದಲೂ ಶ್ರೀಮಂತ, ಮತಿಯಲ್ಲಿಯೂ ಶ್ರೀಮಂತನಾಗಿದ್ದನು. ಅವನು ಜನ್ಮವೆತ್ತಿದಾಗ ಗ್ರೀಸ್ ದೇಶ ಅಪಾಯಕಾರಿಯಾದ ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿತ್ತು. ಸಾಕ್ರಟೀಸನು ಜೀವಿಸಿದ ಕಡೆಯ ಎಂಟು ವರುಷಗಳ ಅವಧಿಯುವರೆಗೂ ಅವನ ನಿಕಟ ಸಂಬಂಧವಿತ್ತು. ಅವನು ಎಲ್ಲ ಕ್ಷೇತ್ರಗಳಲ್ಲಿಯೂ ಸಾಕ್ರಟೀಸನನ್ನು ಮಾದರಿಯಾಗಿ ಹೊಂದಿದ್ದನು. ಗುಲಾಮನೆಂದು ಮಾರಲು ಅನುವುಮಾಡಿಕೊಂಡಿದ್ದವನಿಂದ ಅದೃಷ್ಟ ವಶಾತ್ ಪಾರಾದನು.

೨

ಪ್ಲೇಟೋ ಬಹುದೊಡ್ಡ ಸಾಹಿತಿಯಾಗಿದ್ದನು. ತತ್ವಕ್ಕೆ ಸಾಹಿತ್ಯದ, ಕಾವ್ಯದ ರಂಗು ಕೊಟ್ಟು ಹೇಳುವ ಕಲೆ ಅವನಿಗೂ ಕರಗತವಾಗಿತ್ತು. ಅವನ ಬರಹಗಳೆಲ್ಲವೂ 'ಸಂವಾದ' (Dialogue) ರೂಪದಲ್ಲಿವೆ. ಈ 'ಸಂವಾದ'ಗಳು ಹೆಸರೇ ಸೂಚಿಸು ವಂತೆ ಪ್ರಶ್ನೋತ್ತರ ರೂಪದಲ್ಲಿವೆ. ಜೀವನದ ಎಲ್ಲ ರಂಗಗಳ ಬಗ್ಗೆಯೂ ಅಲ್ಲಿ ಚರ್ಚೆ ಯಿದೆ. ಅವು ಚರ್ಚಿಸದ ವಿಷಯಗಳಿಲ್ಲ ಎನ್ನಬಹುದು. ಅವುಗಳ ಶೈಲಿ ಸುಲಭವೂ ನೇರವೂ ಮನೋಹರವೂ ಆಗಿವೆ. ಅವು ಕಥಾರೂಪದಲ್ಲೂ ಇವೆ. ಅವುಗಳಲ್ಲಿ ಕಾರುಣ್ಯ, ಹಾಸ್ಯ, ಮಾರ್ದವ, ಗಾಂಭೀರ್ಯ ರಸಗಳು ಉಕ್ಕಿ ಹರಿಯುತ್ತವೆ. ವ್ಯಂಗ್ಯ, ವಿಡಂಬನೆ, ಪ್ರಹಸನ, ಕುತೂಹಲ, ಲಾವಣ್ಯ, ಉಲ್ಲಾಸ, ಚಿರಸ್ಮರಣೀಯ ಅನುಭವಗಳ ಉಲ್ಲೇಖ ವಿದೆ ಸಂವಾದಗಳಲ್ಲಿ. ನಾಟಕರೂಪದಲ್ಲಿರುವ ಅವು ಉಪಮಾನ, ಸಂಜ್ಞೆ, ಸಂಕೇತ, ಪುರಾಣಕಥೆ, ರೂಪಕ ಕಥನ, ಪರಂಪರೆಯಾಗಿ ಬಂದ ಐತಿಹ್ಯಗಳ ಮೂಲಕ ತತ್ವವನ್ನು ವಿವರಿಸುತ್ತವೆ. ಸಂವಾದಗಳನ್ನು "ಪಾಶ್ಚಾತ್ಯರ ಉಪನಿಷತ್ತುಗಳು" ಎಂದು ಕರೆಯು ವುದು ಅತಿಶಯೋಕ್ತಿಯಲ್ಲ. ಬಹುತೇಕ ಸಂವಾದಗಳಲ್ಲಿ ಸಾಕ್ರಟೀಸ್ ಮುಖ್ಯಪಾತ್ರ ವಾಗಿ ಕಾಣಿಸಿಕೊಳ್ಳುತ್ತಾನೆ. ಪ್ಲೇಟೋ ತನ್ನ ನಿಲುವನ್ನು ಸಾಕ್ರಟೀಸನ ಮುಖೇನ ಅಭಿವ್ಯಕ್ತಿಗೊಳಿಸುತ್ತಾನೆ. ಒಟ್ಟಿನಲ್ಲಿ ಸಾಕ್ರಟೀಸ್ ಪ್ಲೇಟೋವಿನ ಮುಖವಾಣಿಯಾಗಿ ದ್ದಾನೆ. ಈ ಸಂವಾದಗಳೇ ಪ್ಲೇಟೋವಿನ ತತ್ವಚಿಂತನೆಯ ಮೂಲಗ್ರಂಥಗಳಾಗಿವೆ.

ಪ್ಲೇಟೋ ಬರೆದಿರುವ ಸಂವಾದಗಳನ್ನು ವ್ಯಾಸಂಗದ ಅನುಕೂಲ ದೃಷ್ಟಿಯಿಂದಲೂ ಕಾಲದ ದೃಷ್ಟಿಯಿಂದಲೂ ಮೂರು ಭಾಗಗಳನ್ನಾಗಿ ಮಾಡಬಹುದು. (i) ಸಾಕ್ರಟೀಸನ ಮರಣ ಕಾಲವಲ್ಲಿ, ಅಂದರೆ ಪ್ಲೇಟೋವಿನ ತಾರುಣ್ಯದಲ್ಲಿ ಬರೆದ ಸಂವಾದಗಳು. ಇವು ಪ್ಲೇಟೋವಿನ ಪ್ರಥಮ ಬರವಣಿಗೆಯಾಗಿವೆ. ಇವುಗಳನ್ನು 'ಸೊಕ್ರಾಟಿಕ್ ಸಂವಾದ ಗಳು' ಎನ್ನಬಹುದು. ಅವುಗಳು ಯಾವುವೆಂದರೆ: ಚಾರ್ಮಿಡೀಸ್, ಲೈಸಿಸ್, ಲ್ಯಾಚೆಸ್, ಹಿಪ್ಪಿಯಾಸ್ ಮೈನರ್, ಪ್ರೊಟಾಗೊರಾಸ್, ಗಾರ್ಜಿಯಾಸ್, ಫೀಡೋ, ಸಿಂಪೋಸಿಯಂ, ಕ್ರೈಟೋ ಇತ್ಯಾದಿ. 'ಚಾರ್ಮಿಡೀಸ್' ಸಂವಾದದ ಚರ್ಚಾವಸ್ತು ಮಿತ ವ್ಯವಹಾರ. 'ಲೈಸಿಸ್' ಸ್ನೇಹಭಾವವನ್ನು ಕುರಿತದ್ದು. 'ಲ್ಯಾಚೆಸ್' ಸ್ಥೈರ್ಯ ವನ್ನು ಕುರಿತು ಚರ್ಚಿಸುತ್ತದೆ. 'ಹಿಪ್ಪಿಯಾಸ್ ಮೈನರ್' ಉದ್ದೇಶಪೂರ್ವಕವಾದ

ಕೆಡುಕುತನವನ್ನು, 'ಗಾರ್ಜಿಯಾಸ್' ಪ್ಲೇಟೋವಿನ 'ಸಾರ್ವತ್ರಿಕ ಅಥವಾ ಸಾಮಾನ್ಯ ವಾದ'ವನ್ನು ಕುರಿತು ವಿಶ್ಲೇಷಿಸುತ್ತವೆ. 'ಫೀಡೊ' ಸಂವಾದದಲ್ಲಿ ಆತ್ಮದ ಅಮರತ್ವವನ್ನು ಸ್ಥಾಪಿಸುವ ವಾದಗಳಿವೆ. ಅದು ಸಾಕ್ರಟೀಸನ ಕೊನೆಯ ದಿನಗಳ ರಮಣೀಯ ನೋಟವನ್ನು ಓದುಗರಿಗೆ ನೀಡುತ್ತವೆ. 'ಪ್ರೊಟಾಗೊರಾಸ್' ವಿಶಾಲವೂ ಅತ್ಯಂತ ಸಂಕೀರ್ಣವಾದುದೂ ಆಗಿದೆ.

(ii) ಪ್ಲೇಟೋ ದೇಶಪರ್ಯಟನೆ ಮಾಡುತ್ತಿದ್ದಾಗ ಬರೆದು ಮುಗಿಸಿದ ಸಂವಾದಗಳು. ಇವುಗಳನ್ನು "ಮೆಗಾರಿಕ್" ಸಂವಾದಗಳೆನ್ನಬಹುದು. ಇವುಗಳಲ್ಲಿ ಪ್ಲೇಟೋ ತನ್ನ ಸ್ವಂತ ಚಿಂತನೆಯನ್ನು ರೂಪಿಸಿದ್ದಾನೆ. ಇವುಗಳಲ್ಲಿ ಉಳಿದ ಸಂವಾದಗಳಿಗಿಂತ ಹೆಚ್ಚಾಗಿ ಅವನ ಅಸಲು ಬೇರೆ ಎದ್ದು ಕಾಣುತ್ತದೆ. ಈ ಸಂವಾದಗಳು ಯಾವುವೆಂದರೆ: 'ದಿ ಥಿಯಟಿಟೀಸ್', 'ದಿ ಸೋಫಿಸ್ಟ್' 'ಪಾರ್ಮಿನೈಡಿಸ್' ಇತ್ಯಾದಿ. ಇವು ಅಂತಿಮ ಸತ್ಯವಾದ 'ಸಾರ್ವತ್ರಿಕಗಳು' ಅಥವಾ 'ಸಾಮಾನ್ಯಗಳ' ಸ್ವರೂಪ, ಜ್ಞಾನದ ಮೂಲಗಳನ್ನು ಕುರಿತು ಚರ್ಚಿಸುತ್ತವೆ. 'ಸಾಮಾನ್ಯಗಳು' ತಮ್ಮದೇ ಆದ ಅಸ್ತಿತ್ವವನ್ನು ಹೊಂದಿ, ತಮ್ಮದೇ ಆದ ಲೋಕದಲ್ಲಿ ವಿಹರಿಸುತ್ತಿರುತ್ತವೆ. ಅವು ಇಂದ್ರಿಯಗಳಿಗೆ ಎಟುಕುವುದಿಲ್ಲ ಎಂದು 'ದಿ ಥಿಯಾಟಿಟೀಸ್' ಸಂವಾದ ಸಾರುತ್ತದೆ. 'ಸಾಮಾನ್ಯ'ಗಳ ಪರಸ್ಪರ ಸಂಬಂಧವನ್ನು 'ದಿ ಸೋಫಿಸ್ಟ್' ಸಂವಾದ ಚರ್ಚಿಸುತ್ತದೆ. 'ಪಾರ್ಮಿನೈಡಿಸ್' ಸಂವಾದದಲ್ಲಿ ತಾತ್ವಿಕವಾಗಿ ಗಹನವಾದ 'ಸಾಮಾನ್ಯ'ಗಳಿಗೂ 'ಮೂರ್ತ ಪ್ರಪಂಚ'ಕ್ಕೂ ಇರುವ ಸಂಬಂಧವನ್ನು ವಿಶ್ಲೇಷಿಸಲಾಗಿದೆ.

(iii) ಪ್ಲೇಟೋ ತನ್ನ ದೇಶ ಪರ್ಯಟನೆ ಆದಮೇಲೆ ಬರೆದು ಮುಗಿಸಿದ ಸಂವಾದಗಳು. ಇವುಗಳನ್ನು "ಪೈಥಾಗೊರಿಯನ್" ಸಂವಾದಗಳೆನ್ನುವರು. ಪ್ಲೇಟೋವಿನ ಪರಿಪಕ್ವ ಚಿಂತನೆಯನ್ನು ಇವು ಪ್ರತಿನಿಧಿಸುತ್ತವೆ. ಇವುಗಳ ಮೇಲೆ ಪೈಥಾಗೊರಿಯನ್ ತಾತ್ವಿಕ ಚಿಂತನೆಯ ಪ್ರಭಾವ ಮುದ್ರೆಯಿದೆ. ಇವು ಸ್ಪಷ್ಟವಿರದೆ ಗೂಢಾರ್ಥಗಳನ್ನು ಒಳಗೊಂಡಿವೆ. ಇವುಗಳಲ್ಲಿ ಪ್ಲೇಟೋವಿನ 'ಸಾಮಾನ್ಯ' ಅಥವಾ 'ಸಾರ್ವತ್ರಿಕ' ಸಿದ್ಧಾಂತ ಆಗಲೇ ಸಿದ್ಧವಾಗಿದೆಯೆಂದು ಭಾವಿಸಲಾಗಿದೆ. ಈ ಸಂವಾದಗಳು ಯಾವುವೆಂದರೆ : 'ಫೇಡ್ರಸ್' 'ಬ್ಯಾಂಕ್ವೆಟ್' 'ಫೈಲಿಬಸ್' 'ಟಿಮೇಯಿಸ್' 'ರಿಪಬ್ಲಿಕ್' ಇತ್ಯಾದಿ. 'ಫೇಡ್ರಸ್' ಮತ್ತು 'ಬ್ಯಾಂಕ್ವೆಟ್' ಸಂವಾದಗಳು 'ಪ್ರೇಮ' ಮತ್ತು 'ಸತ್ಯ'ಗಳ ಸ್ವರೂಪವನ್ನು ಕುರಿತು ಚರ್ಚಿಸುತ್ತವೆ. 'ಫಿಲೀಬಸ್' ಶ್ರೇಯಸ್ಸನ್ನು ಪ್ರೇಯಸ್ಸಿನಿಂದ ವಿಂಗಡಿಸುತ್ತದೆ. 'ಟಿಮೇಯಸ್' ಭೌತಿಕ ಪ್ರಪಂಚದ ರಚನೆ ಹಾಗೂ ಉತ್ಪತ್ತಿಯನ್ನು ವಿಶ್ಲೇಷಿಸುತ್ತದೆ. 'ಆದರ್ಶರಾಜ್ಯ' ಪ್ಲೇಟೋವಿನ ನೀತಿಶಾಸ್ತ್ರ ಮತ್ತು ರಾಜನೀತಿ ಶಾಸ್ತ್ರಗಳ ಕೈಗನ್ನಡಿಯಾಗಿದೆ. ಅವನ ಕೊನೆಯ ಸಂವಾದಗಳಾದ 'ರಾಜನೀತಿ ಕುಶಲ' (The Statesman) ಮತ್ತು 'ಶಾಸನಗಳು' (The Laws) ಸಾಮಾಜಿಕ ಹಾಗೂ ರಾಜಕೀಯ ವಿಷಯಗಳ ಹೊಳಹನ್ನು ಹೊಂದಿವೆ.

೩

ಪ್ಲೇಟೋವಿನ ಪ್ರಕಾರ ತತ್ವಶಾಸ್ತ್ರದ ಗುರಿ ವಸ್ತುಗಳ ಸಂಪೂರ್ಣ ಹಾಗೂ ಯಥಾರ್ಥ ಜ್ಞಾನವನ್ನು ತರ್ಕಬುದ್ಧಿಯು, ಒಪ್ಪುವ ರೀತಿಯಲ್ಲಿ ವಿಚಾರಪೂರ್ಣವಾಗಿ ನೀಡುವುದಾಗಿದೆ. ಆಗಲೇ ಅದು ತಾತ್ವಿಕವೆನಿಸುವುದು. ತತ್ವಜ್ಞನ ಕರ್ತವ್ಯ ಪೂರ್ಣವಾದ ಯಥಾರ್ಥ ಜ್ಞಾನವನ್ನು ಮುಂದಿಡುವುದು; ತನ್ನ ಆಸೆ ಅನಿಸಿಕೆಗಳಿಗೆ ಅನುಸಾರವಾಗಿರುವುದನ್ನಲ್ಲ. ಬುದ್ಧಿಯ ಕಸರತ್ತು ಅವನ ಬಂಡವಾಳ; ಭಾವನೆಯಾಗಲೀ ಅನಿಸಿಕೆಯಾಗಲೀ ಅಲ್ಲ. ಕಾಲ್ಪನಿಕ ಊಹಾಪೋಹಗಳಿಂದ ಅವನು ಬಹಳ ದೂರವಿರಬೇಕು. ಕಲ್ಪನೆ, ಅತಿಶಯೋಕ್ತಿಯನ್ನು ಹೊಂದಿರುವುದು ಕವಿಯ ಮನೋಧರ್ಮ; ತತ್ವಜ್ಞಾನದಲ್ಲಿ. ತತ್ವಜ್ಞನ ಪ್ರಧಾನ ಉಪಕರಣ ಹರಿತವಾದ ಬುದ್ಧಿ (Reason), ಕಲ್ಪನೆಯಲ್ಲ. ನಿಜವಾದ ಅರ್ಥದಲ್ಲಿ ತತ್ವಜ್ಞನು, ಕವಿಯೂ ಆಗಿರಲು ಸಾಧ್ಯವಿಲ್ಲ. ಹಾಗೆಯೇ ಕವಿ ಎಂದಿಗೂ ತತ್ವಜ್ಞನಾಗಿರಲು ಸಾಧ್ಯವಿಲ್ಲ ಎಂದು ಪ್ಲೇಟೋ ಬುದ್ಧಿಯ ಹೆಚ್ಚುಗಾರಿಕೆಯನ್ನು ಪ್ರತಿಪಾದಿಸುತ್ತಾನೆ. ಈ ಅರ್ಥದಲ್ಲಿಯೇ ಪ್ಲೇಟೋವನ್ನು 'ಬೌದ್ಧಿಕ ಚಕ್ರವರ್ತಿ' ಎಂದು ಕರೆಯುವುದು.

೪

ಪ್ಲೇಟೋವಿನ ಜ್ಞಾನಮೀಮಾಂಸೆ (Theory of Knowledge)

ಪ್ಲೇಟೋವಿನ ತಾತ್ವಿಕ ಚಿಂತನೆಗೆ ಆಧಾರಭೂತವಾಗಿ ಅವನ 'ಸಾರ್ವತ್ರಿಕ ಸಿದ್ಧಾಂತ'ವಿದೆ. ಒಂದು ರೀತಿಯಲ್ಲಿ ಅವನ ಚಿಂತನೆ ಈ ಸಿದ್ಧಾಂತದಿಂದ ಹಿಂಜಿ ಎಳೆದುದು ಎಂದು ಹೇಳಬಹುದು. 'ಸಾರ್ವತ್ರಿಕ ಸಿದ್ಧಾಂತ' ಅವನ 'ಜ್ಞಾನಮೀಮಾಂಸೆ'ಯ ಮೇಲೆ ನಿಂತಿದೆ. ಜ್ಞಾನಮೀಮಾಂಸೆಯನ್ನು ವಿವರಿಸಿದ ಅನಂತರ ಅವನ 'ಸಾರ್ವತ್ರಿಕ ಸಿದ್ಧಾಂತ'ವನ್ನು ಪರಿಶೀಲಿಸಬಹುದು.

ಜ್ಞಾನ ಎಂದರೇನು? ಅದರ ಉಗಮಸ್ಥಾನ ಯಾವುದು? ಅದನ್ನು ಪಡೆಯುವ ಮಾರ್ಗ ಯಾವುದು? ಅದು ಹೇಗೆ ಸತ್ಯ? ಅಸತ್ಯವಾದ ಭ್ರಮೆಯಿಂದ ಅದು ಹೇಗೆ ಭಿನ್ನವಾಗಿದೆ ಮುಂತಾದ ಜ್ಞಾನಮೀಮಾಂಸೆಯ ಸಮಸ್ಯೆಗಳನ್ನು ಅವನು ಚರ್ಚಿಸುತ್ತಾನೆ.

ಪ್ಲೇಟೋವಿನ ಪ್ರಕಾರ ಇಂದ್ರಿಯ ಸಂವೇದನೆ ಜ್ಞಾನವಲ್ಲ. ವಸ್ತುಗಳಿಗೂ ಇಂದ್ರಿಯಗಳಿಗೂ ಸಂಪರ್ಕವೇರ್ಪಡುವುದನ್ನೇ ಇಂದ್ರಿಯ ಸಂವೇದನೆ ಎನ್ನಬಹುದು. ಇದು ಕೇವಲ ಅನಿಸಿಕೆಯೇ (feeling) ಹೊರತು ನಿಷ್ಕೃಷ್ಟ ಜ್ಞಾನವಲ್ಲ. ಇಂದ್ರಿಯ ಜನ್ಯವಾದುದೆಲ್ಲ ಕೇವಲ ತೋರಿಕೆ, ಸತ್ಯವಲ್ಲ. ಉದಾಹರಣೆಗೆ ಒಬ್ಬ ವ್ಯಕ್ತಿ ನಮ್ಮ ಕಣ್ಣಿಗೆ (ಇಂದ್ರಿಯಗಳಿಗೆ) ಭೂತಾಕಾರದಂತೆ ಕಾಣಬಹುದು. ಆದರೆ ಸ್ವಲ್ಪ ಅವಧಿಯ ವಿವೇಚನೆಯಿಂದಲೇ ಆ ವ್ಯಕ್ತಿ ಭೂತವಲ್ಲ ಎಂದು ತಿಳಿದುಬಿಡುವುದು. ಹಾಗೆಯೇ ಇಂದ್ರಿಯಗಳಲ್ಲಿ ದೋಷವಿರಬಹುದಾದ ಸಾಧ್ಯತೆಯಿರುವುದರಿಂದ ಇಂದ್ರಿಯ ಜನ್ಯ

ವಾದುದು ಶುದ್ಧ ಜ್ಞಾನವೆಂದು ಹೇಳಲಾಗುವುದಿಲ್ಲ. ಉದಾಹರಣೆಗೆ ಕಾಮಾಲೆ ರೋಗದಿಂದ ಬಳಲುತ್ತಿರುವವನ ಕಣ್ಣುಗಳಿಗೆ ಎಲ್ಲಾ ವಸ್ತುಗಳು ಹಳದಿಯಾಗಿ ತೋರುವುವು. ಇದು ಮಿಥ್ಯಾಜ್ಞಾನ, ತೋರಿಕೆ. ಅದಕ್ಕೆ ಬದಲಾಗಿ ವಸ್ತು 'ಏಕೆ' ಮತ್ತು 'ಹೇಗೆ' ಹಳದಿಯಾಗಿ ತೋರುತ್ತದೆ ಎಂಬುದನ್ನು ಬುದ್ಧಿಯಿಂದ (Reason) ತಿಳಿಯುವುದೇ ಜ್ಞಾನವೆನಿಸುವುದು. ಪ್ರತಿಯೊಬ್ಬ ವ್ಯಕ್ತಿಗೂ ವಸ್ತು ಹೇಗೆ ಹೇಗೆ ತೋರುತ್ತದೋ ಅದು ಹಾಗೆ ಹಾಗೆ ಸತ್ಯ ; ಎಲ್ಲರಿಗೂ ಸಮಾನವಾದ ಸಾರ್ವತ್ರಿಕ ಜ್ಞಾನ ಎಂಬುದಿಲ್ಲ ಎಂಬ ಸೋಫಿಸ್ಟರ ಜ್ಞಾನ ವಿವರಣೆಯನ್ನು ಪ್ಲೇಟೋ ಖಂಡಿಸುತ್ತಾನೆ. ಅವನ ಪ್ರಕಾರ ಇಂದ್ರಿಯಗಳಿಗೆ ಕಂಡಿದ್ದು ಕೇವಲ ತೋರಿಕೆ ; ಬುದ್ಧಿಗೆ ಸ್ಥಿರವಾದದ್ದು, ಬುದ್ಧಿಬದ್ಧವಾದದ್ದು ಮಾತ್ರ ಸತ್ಯ ; ಅದೇ ಯಥಾರ್ಥಜ್ಞಾನ. "ಎಲ್ಲ ಜ್ಞಾನವೂ ಪರಿಕಲ್ಪನೆಗಳ (concepts) ಮೂಲಕ ಬಂದ ಜ್ಞಾನ" ಎಂಬ ಸಾಕ್ರಟೀಸನ ಹೇಳಿಕೆಯನ್ನು ಪುಷ್ಟೀಕರಿಸುತ್ತಾನೆ. ಒಂದು ವರ್ಗಕ್ಕೆ ಸೇರಿದ ವಸ್ತುಗಳ ಸಮಾನಗುಣ ಯಾವುದೆಂದು ಬುದ್ಧಿ (Reason) ಅರಿಯುವುದನ್ನೇ ವಸ್ತುಸ್ವರೂಪ ಅಥವಾ ಸರ್ವಸಮ್ಮತವಾದ ಸಾರ್ವತ್ರಿಕ ಜ್ಞಾನ ಎಂದು ಪ್ಲೇಟೋ ಸಾರುತ್ತಾನೆ. ಇಂದ್ರಿಯ ಸಂವೇದನೆಯಿಂದ ವಸ್ತುಸ್ವರೂಪ ಜ್ಞಾನ ಹುಟ್ಟುವುದಿಲ್ಲ. ಈ ಅರ್ಥದಲ್ಲಿ ಇಂದ್ರಿಯ ಸಂವೇದನೆ ಜ್ಞಾನವಲ್ಲವೆಂದು ಪ್ಲೇಟೋ ಸೋಫಿಸ್ಟರನ್ನು ವಿಮರ್ಶೆಗೊಳಪಡಿಸುತ್ತಾನೆ.

ಜ್ಞಾನ ಎಂಬುದು ವ್ಯಕ್ತಿನಿಷ್ಠವಾದುದು, ವಸ್ತುನಿಷ್ಠವಾದುದಲ್ಲ. ವ್ಯಕ್ತಿಯೇ ಎಲ್ಲ ವಿಷಯಗಳ ಮಾನದಂಡ, ವಸ್ತುವಲ್ಲ ; ಪ್ರತಿಯೊಬ್ಬ ವ್ಯಕ್ತಿಗೆ ವಸ್ತು ಹೇಗೆ ಹೇಗೆ ಕಾಣುತ್ತದೋ ಅದೇ ಜ್ಞಾನ ಎನ್ನುವ ಸೋಫಿಸ್ಟರ ನಿಲುವಿನಿಂದಲೇ ಅವರ ವಾದವನ್ನು ಖಂಡಿಸಿ ಅಲ್ಲಗಳೆಯುತ್ತಾನೆ. 'ಸೋಫಿಸ್ಟರ ಜ್ಞಾನ ಸಿದ್ಧಾಂತ ನನಗೆ ಸರಿಯೆಂದು ತೋರುವುದಿಲ್ಲ' ಎಂದು ಒಬ್ಬ ವ್ಯಕ್ತಿ ಹೇಳಿದರೆ ಆಗ ಸೋಫಿಸ್ಟರ ವಾದ (ಅದು ಜ್ಞಾನಕ್ಕೆ ಸಂಬಂಧಿಸಿದ್ದಾಗಿರಲಿ ಇಲ್ಲವೇ ವಸ್ತುಗಳ ಅಸ್ತಿತ್ವಕ್ಕೆ ಸಂಬಂಧಿಸಿದ್ದಾಗಿರಲಿ) ಹುರುಳಿಲ್ಲದ ಬಡಾಯಿಯಾಗಿ ಬಿದ್ದುಹೋಗುತ್ತದೆ. ಇದನ್ನು ಸೋಫಿಸ್ಟರು ತಮಗಿಷ್ಟವಿಲ್ಲದಿದ್ದರೂ ಒಪ್ಪಿಕೊಳ್ಳಲೇ ಬೇಕಾದ ಅನಿವಾರ್ಯ ಪ್ರಸಂಗ ಉಂಟಾಗುತ್ತದೆ. ಸರ್ವವೂ ವ್ಯಕ್ತಿನಿಷ್ಠ (subjective) ವಸ್ತುನಿಷ್ಠ (objective)ವಲ್ಲ ಎಂಬ ಅವರ ಪ್ರಬಲ ಪ್ರತಿಪಾದನೆಯೇ ಇದಕ್ಕೆ ಕಾರಣ. ಹೀಗೆ ಅವರ ವಾದ ಅವರಿಗೇ ತಿರುಗುಬಾಣವಾಗಿ ಪರಿಣಮಿಸುತ್ತದೆ. ಹೀಗಾಗಿ ಸೋಫಿಸ್ಟರು, ಅಷ್ಟೇಕೆ, ಜ್ಞಾನಕ್ಕೆ ಬಾಹ್ಯ ಪ್ರಮಾಣ ಯಾವುದೂ ಇಲ್ಲ ಎಂದು ಪ್ರತಿಪಾದಿಸುವ ಎಲ್ಲ ವಿಷಯವಾದಿ (Subjectivist)ಗಳೂ ತಮ್ಮ ವಾದವನ್ನು ತಾವೇ ಕೈಯಾರೆ ಕೊಂದುಬಿಡುತ್ತಾರೆ.

'ಜ್ಞಾನ' ಇಂದ್ರಿಯ ಸಂವೇದನೆಯಲ್ಲ ಎಂದು ತೋರಿಸಿದ್ದಾಯಿತು. ಹಾಗಾದರೆ ಅದು 'ಅಭಿಮತ' (ಅಭಿಪ್ರಾಯ ಅಥವಾ ನಂಬಿಕೆ–opinion or belief) ವೇ ? ಪ್ಲೇಟೋ ಈ ಪ್ರಶ್ನೆಗೆ ನಕಾರಾತ್ಮಕವಾದ ಉತ್ತರವನ್ನು ನೀಡಿದ್ದಾನೆ. ಜ್ಞಾನವು 'ಅಭಿಮತ'ವಲ್ಲ. ಜ್ಞಾನಕ್ಕೂ ಅಭಿಮತಕ್ಕೂ ಅತ್ಯಂತ ಭೇದವಿದೆ ಎಂದು ಪ್ಲೇಟೋ

ತನ್ನ ಜ್ಞಾನವಿಶಾವಾಂಸೆಯನ್ನು ಪ್ರಾರಂಭಿಸುತ್ತಾನೆ. ಈ ಭೇದ ಅವನ ತಾತ್ವಿಕ ಚಿಂತನೆಯ ಕೇಂದ್ರ ಬಿಂದುವಾಗಿದೆ. ಜ್ಞಾನ ಮತ್ತು ಅಭಿಮತಗಳ ನಡುವೆ ಈ ಕೆಳಗೆ ಕಂಡ ವ್ಯತ್ಯಾಸಗಳಿವೆ :

(i) 'ಯುಕ್ತವಾದ ಅಭಿಪ್ರಾಯ'ವೂ (right opinion) ಜ್ಞಾನವಲ್ಲ; 'ತಪ್ಪಾದ ಅಭಿಪ್ರಾಯ' (wrong opinion) ವೂ ಜ್ಞಾನವಲ್ಲ. 'ಯುಕ್ತವಾದ ಅಭಿಪ್ರಾಯ' ಕೇವಲ ಊಹಾಪೋಹ. ಕಾಕತಾಳೀಯವಾಗಿ ಅದು ಸರಿಯಿರಬಹುದು. ಉದಾಹರಣೆಗೆ 'ಮೈಸೂರಿನ ಹೊರವಲಯದಲ್ಲಿ ನಾಳೆ ವಿಪರೀತ ಮಂಜು ಬೀಳಬಹುದು' ಎಂದು ಒಬ್ಬ ವ್ಯಕ್ತಿ ಕೇವಲ ಊಹೆಯಿಂದ, ಮಾತಿನ ಚಪಲದಿಂದ ಹೇಳಬಹುದು, ಹಾಗೆಯೇ ಮಂಜೂ ಬೀಳಬಹುದು. ಆದರೂ ಅದು ಜ್ಞಾನ ಪೂರ್ವಕವಾದ ಹೇಳಿಕೆಯಲ್ಲ; ಜ್ಞಾನವಲ್ಲ; ಅದು ಕೇವಲ ಆಕಸ್ಮಿಕ, ಕಾಕತಾಳೀಯ. ಅದು ಜ್ಞಾನ ಪೂರ್ವಕವಾದ ಹೇಳಿಕೆಯಾಗಿದ್ದರೆ ನಾಳೆ 'ಹೇಗೆ' ಮತ್ತು 'ಏಕೆ' ಮಂಜು ಆ ಆವರಣದಲ್ಲಿ ಬೀಳುತ್ತದೆಂದು ಸಕಾರಣವಾಗಿ ತೋರಿಸಬೇಕಾಗಿತ್ತು. ಈ ಅರ್ಥದಲ್ಲಿ, ಜ್ಞಾನ ವಸ್ತುಗಳ 'ಏಕೆ' ಮತ್ತು 'ಹೇಗೆ' ಎಂಬುವನ್ನು ವಿವರಿಸಬೇಕು. ಜ್ಞಾನ ಪರಿಪೂರ್ಣವೂ ವಸ್ತುನಿಷ್ಠವೂ ಸಕಾರಣಯುತವೂ ಆಗಿರಬೇಕು.

ಅಭಿಮತ ಕೇವಲ ಅನಿಸಿಕೆ. ಅದರ ಹಿಂದೆ ಆಧಾರವಾಗಿ ಸಕಾರಣಗಳಿರಬೇಕೆಂಬ ನಿರ್ಬಂಧವೇನೂ ಇಲ್ಲ, ಅದು ವ್ಯಕ್ತಿನಿಷ್ಠ. ಅದು ಅಸಂಬದ್ಧ ಪ್ರಚಾರ ಮಾತ್ರವಾಗಿರಬಹುದು. ಅದು ತಪ್ಪಾಗಿರುವ ಸಾಧ್ಯತೆಗಳೂ ಉಂಟು.

(ii) ಹೀಗೆ 'ಅಭಿಮತ' ಸರಿ ಇರಬಹುದು ಅಥವಾ ತಪ್ಪು ಇರಬಹುದು. ಆದರೆ 'ಜ್ಞಾನ' ಮಾತ್ರ ಯಾವತ್ತೂ ಸರಿ.

(iii) 'ಅಭಿಮತಗಳು' ಬೇರೆಬೇರೆ ಇರಬಹುದು. ಆದರೆ 'ಜ್ಞಾನ' ಒಂದೇ.

(iv) ಪ್ಲೇಟೋವಿನ ಪ್ರಕಾರ 'ಅಭಿಮತ' ಇಂದ್ರಿಯ ಪ್ರಪಂಚಕ್ಕೆ ಮಾತ್ರ ಸೀಮಿತವಾದುದು. ಅಂತಿಮಸತ್ಯವಾದ 'ಸಾರ್ವತ್ರಿಕ'ಗಳು ಅಥವಾ 'ಸಾಮಾನ್ಯ'ಗಳನ್ನು ಅದು ಮುಟ್ಟಲಾರದು. ಆದರೆ ಜ್ಞಾನ 'ಸಾರ್ವತ್ರಿಕ'ಗಳಿಗೆ ಮಾತ್ರ ಸಂಬಂಧಿಸಿದುದಾಗಿದೆ. ಇಂದ್ರಿಯ ಪ್ರಪಂಚ ಕ್ಷಣಕ್ಷಣಕ್ಕೂ ಬದಲಾಯಿಸುವ ಸ್ವಭಾವವುಳ್ಳದ್ದಾಗಿರುವುದರಿಂದ ಅದರ ಬಗ್ಗೆ 'ಜ್ಞಾನ'ವನ್ನು ಪಡೆಯಲು ಸಾಧ್ಯವಿಲ್ಲ; ಕೇವಲ 'ಅಭಿಮತ' ಮಾತ್ರ ಸಾಧ್ಯ ಎಂದು ಪ್ಲೇಟೋ ಸಾರುತ್ತಾನೆ.

(v) ಅಭಿಮತವನ್ನು ಬದಲಾಯಿಸಲು ಸಾಧ್ಯವಿದೆ. ಅಭಿಮತವನ್ನು ಅದು ಸರಿ ಇರಲಿ ಅಥವಾ ತಪ್ಪು ಇರಲಿ—ವಾದಗಳಿಂದ ಯುಕ್ತಿ ಕುಯುಕ್ತಿಗಳಿಂದ ಮನ ಒಲಿಸುವುದರ ಮೂಲಕ ಉಂಟುಮಾಡಬಹುದು ಹಾಗೂ ಸುಲಭವಾಗಿ ಬದಲಾಯಿಸಲೂ ಬಹುದು.

ಆದರೆ ಜ್ಞಾನ ಕೇವಲ ಬುದ್ಧಿಯಿಂದ (Reason) ಮಾತ್ರ ಸಾಧ್ಯ. ಅದನ್ನು ಬದಲಾಯಿಸಲು ಸಾಧ್ಯವಿಲ್ಲ.

(vi) ಅಭಿಮತ ಅನಿಶ್ಚಿತ ಹಾಗೂ ಅಸ್ಥಿರ. ಏಕೆಂದರೆ ಅದನ್ನು ವಾಕ್ಚಾತುರ್ಯ ದಿಂದ ತೆಗೆದುಬಿಡಬಹುದು.

ಆದರೆ ಜ್ಞಾನವನ್ನು ಅಲುಗಾಡಿಸಲಾಗುವುದಿಲ್ಲ. ಜ್ಞಾನಿಯನ್ನು (ಬುದ್ಧಿ–Reason–ಗೆ) ಅನುಸಾರವಾಗಿ ಸಕಾರಣಗಳ ಮೂಲಕ ಸತ್ಯಜ್ಞಾನವನ್ನು ಹೊಂದಿದವನು), ಅವನ ಆಸ್ತಿಯಾದ 'ಜ್ಞಾನ'ವನ್ನು ಯಾವನೂ ಯಾವ ಕಾಲದಲ್ಲೂ ದೋಚಲು ಸಾಧ್ಯವಿಲ್ಲನೆಂದು ಪ್ಲೇಟೋ ಸಾರುತ್ತಾನೆ. ಹೀಗೆ ಜ್ಞಾನ ನಿಶ್ಚಯವೂ ಸ್ಥಿರವೂ ಆದುದಾಗಿವೆ.

ಹೀಗೆ ಪ್ಲೇಟೋವಿನ ಪ್ರಕಾರ ಜ್ಞಾನ 'ಇಂದ್ರಿಯ ಸಂವೇದನೆ'ಯೂ ಅಲ್ಲ; 'ಅಭಿಮತ'ವೂ ಅಲ್ಲ. ವ್ಯಕ್ತಿಯ ಆಸೆ ಆನಿಸಿಕೆಗಳಿಗನುಸಾರವಾಗಿರುವುದೂ ಅಲ್ಲ. ಈಗಾಗಲೇ ವಿವರಿಸಿದಂತೆ ಅದು ವಸ್ತು ಪ್ರಧಾನವಾದುದು, ವಸ್ತುನಿಷ್ಠವಾದುದು, ವಸ್ತುಸ್ವರೂಪವಾದುದು. ವಸ್ತುನಿಷ್ಠವಾದ, ಸ್ಪಷ್ಟವಾದ ಪರಿಕಲ್ಪನೆ ಅಥವಾ ಲಕ್ಷಣ ವ್ಯಾಖ್ಯೆಗಳಿಂದ ಕೂಡಿದುದಾಗಿದೆ.

ಜ್ಞಾನ ಬೇರೆ, ಅಭಿಮತ ಬೇರೆ ಎಂಬ ಅಂಶವನ್ನು ಸ್ಪಷ್ಟಪಡಿಸಲು ಪ್ಲೇಟೋ ತನ್ನ 'ಆದರ್ಶರಾಜ್ಯ' ಎಂಬ ಸಂವಾದದಲ್ಲಿ 'ವಿಭಜಿತ ರೇಖೆಯುದೃಷ್ಟಾಂತ' (Analogy of the Divided Line) ವನ್ನೂ ಕೊಟ್ಟಿದಾನೆ. ಅದನ್ನು ಪುನಃ ಮುಂದೆ ಚರ್ಚಿಸಲಾಗುವುದು.

೫

ಸಾರ್ವತ್ರಿಕ ಅಥವಾ ಸಾಮಾನ್ಯ ಸಿದ್ಧಾಂತ

ಈಗ ಪ್ಲೇಟೋ ದಾರ್ಶನಿಕನ 'ಸಾರ್ವತ್ರಿಕ' ಅಥವಾ ಸಾಮಾನ್ಯ ಸಿದ್ಧಾಂತವನ್ನು (Doctrine of Ideas) ವಿಶದೀಕರಿಸಬಹುದು. ಅವನ ಪ್ರಕಾರ 'ಸಾರ್ವತ್ರಿಕ'ಗಳು ಅಥವಾ 'ಸಾಮಾನ್ಯ'ಗಳು ಅಥವಾ 'ರೂಪ'ಗಳು (Universals or Ideas or Forms) ಅಂತಿಮ ಸತ್ಯವಾಗಿವೆ. ಅವು ತನ್ನದೇ ಆದ ಅಸ್ತಿತ್ವವನ್ನು ಹೊಂದಿವೆ. ಅವು ಸ್ವತಂತ್ರವಾದವು ಅವು ತಮ್ಮವೇ ಆದ ಲೋಕದಲ್ಲಿ ವಿಹರಿಸುತ್ತವೆ. ಅವುಗಳ 'ಪ್ರತಿಬಿಂಬ' ಗಳೇ ನಾವು ವಾಸ್ತವ ಪ್ರಪಂಚದಲ್ಲಿ ಕಾಣುವ ಮೂರ್ತ ವಸ್ತುಗಳು ಉದಾಹರಣೆಗೆ, 'ಕುರ್ಚಿ–ಸಾಮಾನ್ಯ' ಅಂದರೆ 'ಕುರ್ಚಿತ್ವ' (Universal Idea of Chair or Chairness) 'ಮಾನವತ್ವ' (Universal Idea of Man) 'ಸೌಂದರ್ಯ' (Universal Idea of Beauty) 'ನ್ಯಾಯ' (Universal Idea of Justice)'ಶ್ರೇಯ' (Universal Idea of Good) ಇತ್ಯಾದಿಗಳು ಸಾರ್ವತ್ರಿಕಗಳು. ನಮ್ಮ ಮನಸ್ಸಿನಲ್ಲಿ ಕುರ್ಚಿಯ ಕಲ್ಪನೆಯಿದೆ ಇದು ಸಾಧ್ಯವಾಗಿರುವುದು 'ಕುರ್ಚಿತ್ವ' ಎಂಬ ಸ್ವತಂತ್ರ ಸಾರ್ವತ್ರಿಕ ಇರುವುದರಿಂದ. ಹಾಗೆಯೇ ನಮ್ಮ ಮನಸ್ಸಿನಲ್ಲಿರುವ ಮಾನವತ್ವ, ಸೌಂದರ್ಯ, ನ್ಯಾಯ, ಶ್ರೇಯ ಕಲ್ಪನೆಗಳಿಗೆಲ್ಲ ಸ್ವತಂತ್ರ

ವಾಗಿ ತಮ್ಮದೇ ಆದ ಅಸ್ತಿತ್ವವನ್ನು ಹೊಂದಿ ತಮ್ಮದೇ ಆದ ಲೋಕದಲ್ಲಿ ವಿಹರಿಸುತ್ತಿರುವ 'ಸಾರ್ವತ್ರಿಕ ಮಾನವತ್ವ', 'ಸಾರ್ವತ್ರಿಕ ಸೌಂದರ್ಯ', 'ಸಾರ್ವತಿಕ ನ್ಯಾಯ', 'ಸಾರ್ವತ್ರಿಕ ಶ್ರೇಯಸ್ಸು'ಗಳೇ ಕಾರಣ. ನಾವು ವ್ಯವಹಾರ ಜಗತ್ತಿನಲ್ಲಿ ಕಾಣುವ ಕುರ್ಚಿ, ಮಾನವರು, ಸುಂದರವಾದ ವಸ್ತುಗಳು ಮುಂತಾದುವುಗಳು ಮೇಲೆ ಹೇಳಿದ ಸಾರ್ವತ್ರಿಕಗಳ 'ನಕಲು' ಅಥವಾ 'ಪ್ರತಿಬಿಂಬ' ಅಥವಾ 'ಪ್ರತಿ'ಗಳು. ಅಂತಿಮ ಸತ್ಯ (Ultimate Truth) 'ಕುರ್ಚಿತ್ವ'ವೇ ಹೊರತು, ವ್ಯವಹಾರದ ಕುರ್ಚಿಯಲ್ಲ; ಸೌಂದರ್ಯವೇ ಹೊರತು ಸುಂದರವಾದ ವಸ್ತುಗಳಲ್ಲ; ಮಾನವತ್ವವೇ ಹೊರತು ಇಂದು ಬಂದು ನಾಳೆ ಇಲ್ಲವಾಗುವ ಮಾನವರಲ್ಲ ಎಂದು ಪ್ಲೇಟೋ ಸಾರುತ್ತಾನೆ. ವ್ಯವಹಾರಜಗತ್ತಿನ ಈ ಮೂರ್ತ ವಸ್ತುಗಳು ಮೇಲೆ ಹೇಳಿದ ಸಾರ್ವತ್ರಿಕಗಳನ್ನು ಅನುಕರಿಸುತ್ತವೆ ಎಂದು ಅವನು ಪ್ರತಿಪಾದಿಸುತ್ತಾನೆ. ಅವನ ಈ ವಾದವನ್ನು 'ಸಾರ್ವತ್ರಿಕ ಸಿದ್ಧಾಂತ' ಎಂದು ಕರೆಯಲಾಗಿದೆ.

'ಸಾರ್ವತ್ರಿಕ'ಗಳ ಸ್ವತಂತ್ರ ಅಸ್ತಿತ್ವವನ್ನು ಬುದ್ಧಿ ಪ್ರಧಾನ ತರ್ಕದಿಂದಲೂ ಸಮರ್ಥಿಸಬಹುದೆಂದು ಪ್ಲೇಟೋ ಅಭಿಪ್ರಾಯಪಡುತ್ತಾನೆ. ಪ್ರಪಂಚದ ವಸ್ತುಗಳನ್ನು ನಾವು ವೀಕ್ಷಿಸಿದಾಗ ಅವು ತಮ್ಮದೇ ಆದ ಒಂದು ವರ್ಗ (class) ಕ್ಕೆ ಸಂಬಂಧಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ, ಕುರ್ಚಿಗಳು, ಮೇಜುಗಳು, ಮಾನವರು, ಕುದುರೆಗಳು, ಸುಂದರವಾದ ವಸ್ತುಗಳು ಇತ್ಯಾದಿ. ಕುರ್ಚಿ ಕಬ್ಬಿಣದ್ದಾಗಿರಬಹುದು, ಹಿತ್ತಾಳೆಯದ್ದಾಗಿರಬಹುದು ಇಲ್ಲವೆ ಚಿನ್ನದ್ದಾಗಿರಬಹುದು. ಎಲ್ಲಾ ಕುರ್ಚಿಗಳಿಗೂ ಸಮಾನವಾದ ಒಂದು ಅಂಶವಿದೆ. ಅದೇ 'ಕುರ್ಚಿತ್ವ'. ಹಾಗೆಯೇ ಪ್ರಪಂಚದಲ್ಲಿ ಅಸಂಖ್ಯಾತ ಸುಂದರ ವಸ್ತುಗಳಿವೆ. ಚಂದಿರನ ಬೆಳದಿಂಗಳು ಎಷ್ಟೊಂದು ಸುಂದರವಾಗಿದೆ ಎಂದು ನಾವು ಹರ್ಷಿಸುತ್ತೇವೆ. ಸುಂದರಿಯರನ್ನು ಚಂದಿರ ವದನೆಯರು, ಇಂದುಮುಖಿಯರೆಂದು ವರ್ಣಿಸುತ್ತೇವೆ. ಸೂರ್ಯೋದಯ ಒಂದು ರೀತಿಯ ಸುಂದರ ಸನ್ನಿವೇಶವಾದರೆ, ಸೂರ್ಯಾಸ್ತಮ ಮತ್ತೊಂದು ಬಗೆಯ ಸುಂದರ ಅವಕಾಶವಾಗಿದೆ. ಎಲ್ಲ ಸುಂದರ ವಸ್ತುಗಳಿಗೆ ಸಮಾನವಾದ 'ಸೌಂದರ್ಯ' ಎಂಬ ಅಂಶವಿದೆಯೆಂದು ನಮ್ಮ ಬುದ್ಧಿಗೆ ಗೋಚರವಾಗುತ್ತದೆ. ಪ್ಲೇಟೋ ದಾರ್ಶನಿಕನ ಪ್ರಕಾರ 'ಸೌಂದರ್ಯ ಸಾರ್ವತ್ರಿಕ' (Universal Idea of Beauty) ಎಲ್ಲ ಸುಂದರ ವಸ್ತುಗಳ ಆಧಾರ. ಸಾರ್ವತ್ರಿಕಗಳೇ ಅಂತಿಮ ಸತ್ಯ. ಅವುಗಳ ಸಾಕ್ಷಾತ್ಕಾರವೇ ಜೀವನದ ಧ್ಯೇಯ ಎಂದು ಅವನು ಉದ್ಘೋಷಿಸುತ್ತಾನೆ. ವ್ಯವಹಾರ ಪ್ರಪಂಚದ ಮೂರ್ತ ವಸ್ತುಗಳ ಅಸ್ತಿತ್ವ ಸಾರ್ವತ್ರಿಕಗಳ ಮೇಲೆ ಆಧಾರಿತವಾಗಿದೆ ಎಂದು ಸಾರುತ್ತಾನೆ.

ಪ್ಲೇಟೋವಿನ ಪ್ರಕಾರ ಅಂತಿಮಸತ್ಯವಾದ 'ಸಾರ್ವತ್ರಿಕ'ಗಳು ಈ ಕೆಳಗೆ ಕಂಡ ಗುಣಲಕ್ಷಣಗಳನ್ನು ಹೊಂದಿವೆ :

(i) **ಸಾರ್ವತ್ರಿಕಗಳು ಸ್ವತಃ ಸಿದ್ಧ ತತ್ವಗಳು** (Ideas are Substances). ಅಂದರೆ ಅವು ತಮ್ಮಿಂದಲೇ ಅಸ್ತಿತ್ವದಲ್ಲಿವೆ. ತಮ್ಮ ಅಸ್ತಿತ್ವಕ್ಕೋಸ್ಕರ

ಅವು ಬೇರೆ ಯಾವುದರ ಮೇಲೂ ನಿಂತಿಲ್ಲ. ಅಂದರೆ ಅವುಗಳ ಅಸ್ತಿತ್ವ ಎರವಲು ಪಡೆದ ಅಸ್ತಿತ್ವವಲ್ಲ. ಅದು ಅಸಲು ಅಸ್ತಿತ್ವ. ಎಲ್ಲಕ್ಕೂ ಅವು ಆಧಾರವಾಗಿವೆ. ಅವು ಯಾವುವರಿಂದಲೂ ಬಂದಿಲ್ಲ ; ಅಂದರೆ ಅವುಗಳಿಗೆ ಮೂಲವೆಂಬುದಿಲ್ಲ ; ಅವುಗಳೇ ಎಲ್ಲವುದರ ಮೂಲ. ಅವುಗಳಿಗೆ ತಮ್ಮನ್ನು ಬಿಟ್ಟು ಬೇರೆ ಮೂಲವೆಂಬುದಿಲ್ಲ. ಈ ಪಾರಿಭಾಷಿಕ ಅರ್ಥದಲ್ಲಿ ಅವುಗಳನ್ನು 'Substance' ಎಂದು ಕರೆಯಬಹುದು.

(ii) ಸಾಮಾನ್ಯಗಳು ಸಾರ್ವತ್ರಿಕ ; (Universal) ಅಂದರೆ ಅವು ಪ್ರತ್ಯೇಕಗಳಲ್ಲ (Particulars). ಅವು ಮೂರ್ತ ಪ್ರತ್ಯೇಕಗಳಲ್ಲ ; ಅಮೂರ್ತ ತತ್ವಗಳು, ಉದಾಹರಣೆಗೆ 'ಸಾರ್ವತ್ರಿಕ ಕುದುರೆ' (Universal Idea of Horse). ಕುದುರೆತನ (Horsness) ಸಾರ್ವತ್ರಿಕವಾದುದು ; ಬಿಳಿಯ ಕುದುರೆ, ಕೆಂಪು ಕುದುರೆ, ಕಪ್ಪು ಕುದುರೆ, ಕಂದು ಕುದುರೆ ಮುಂತಾದ ಪ್ರತ್ಯೇಕ ಕುದುರೆಗಳಂತಲ್ಲ ಈ ಎಲ್ಲ ಪ್ರತ್ಯೇಕ ಮೂರ್ತ ಕುದುರೆಗಳಿಗೆ ಆಧಾರಭೂತವಾಗಿ ಒಂದೇ ಒಂದು ಸಾಮಾನ್ಯವಿದೆ.

(iii) ಸಾರ್ವತ್ರಿಕಗಳು ವಸ್ತುಗಳಲ್ಲ ; ಭಾವಗಳು (The Ideas are not things but thoughts). ಆಗಲೇ ಹೇಳಿದಂತೆ ಸಾರ್ವತ್ರಿಕಗಳು ಕೇವಲ ಭಾವಗಳು ; ವಸ್ತು ವಿಶೇಷಗಳಲ್ಲ. ಉದಾಹರಣೆಗೆ 'ಸಾರ್ವತ್ರಿಕ ಕುದುರೆ' ಎಂಬ ವಸ್ತುವಿಲ್ಲ ; ಅದೊಂದು ಭಾವವಷ್ಟೆ. ಹಾಗೆಂದ ಮಾತ್ರಕ್ಕೆ ಅವು ಯಾವನೋ ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿರುವ ಭಾವನೆಗಳಲ್ಲ. ಹಾಗಿದ್ದಲ್ಲಿ ಅವು ಸಾರ್ವತ್ರಿಕವಾಗದೆ ಯಾವುದೇ ವ್ಯಕ್ತಿಯ ಮನಸ್ಸಿನ ಮೇಲೆ ಆಧರಿತವಾದವುಗಳಾಗುತ್ತವೆ. ಆದರೆ ಅವು ಸ್ವತಃಸಿದ್ಧ ತತ್ವಗಳು. ಆದುದರಿಂದ ಅವು ಯಾವುದೇ ವ್ಯಕ್ತಿಯ ಮನಸ್ಸಿನ ಮೇಲೆ ನಿಂತಿವೆ ಎಂದು ಹೇಳಲಾಗುವುದಿಲ್ಲ. ಅಂದರೆ ಅವು ವ್ಯಕ್ತಿಗತ ಭಾವನೆಗಳಲ್ಲ. ಹಾಗಾದರೆ ಮಾನವ ಮನಸ್ಸಿನಲ್ಲಿರುವ ಭಾವನೆಗಳು ಏನು ? ಅವು ತಮ್ಮದೇ ಆದ ಅಸ್ತಿತ್ವವನ್ನು ಹೊಂದಿರುವುವು ಅಲ್ಲವೆ ? ಇದಕ್ಕೆ ಪ್ಲೇಟೋ ಇಲ್ಲವೆಂದು ಉತ್ತರಿಸುತ್ತಾನೆ. ಮಾನವ ಮನಸ್ಸಿನಲ್ಲಿರುವ ವ್ಯಕ್ತಿಗತ ಭಾವನೆಗಳು (Ideas) ಸಾರ್ವತ್ರಿಕಗಳ (Universal Ideas) ಪ್ರತಿಬಿಂಬಗಳು, ನಕಲುಗಳು ಎಂದು ವಿವರಿಸುತ್ತಾನೆ.

(iv) ಪ್ರತಿಯೊಂದು ಸಾರ್ವತ್ರಿಕವೂ ಒಂದೊಂದು ಏಕ. (Every Universal is a Unity). ಅಂದರೆ ಒಂದು ವರ್ಗಕ್ಕೆ ಸೇರಿದ ವಸ್ತುಗಳಿಗೆಲ್ಲ ಕೇವಲ ಒಂದೇ ಸಾರ್ವತ್ರಿಕವಿರುತ್ತದೆ. ಉದಾಹರಣೆಗೆ ಇಡೀ ಮಾನವ ಕುಲಕ್ಕೇ 'ಮಾನವತ್ವ' ಎಂಬ ಒಂದು ಸಾರ್ವತ್ರಿಕವಿದೆ. ಕೆಂಪು, ಬಿಳಿ, ಹಸಿರು, ನೀಲಿ, ಹಳದಿ, ನೇರಳೆ ಮುಂತಾದವುಗಳಿಗೆಲ್ಲಾ 'ಬಣ್ಣ' ಎಂಬ ಸಾರ್ವತ್ರಿಕವಿದೆ. ಹಾಗೆಯೇ ಹುಳಿ, ಸಿಹಿ, ಸಪ್ಪೆ, ಖಾರ, ಉಪ್ಪು ಮುಂತಾದ ಗುಣಗಳಿಗೆಲ್ಲಾ 'ರುಚಿ' ಎಂಬ ಸಾರ್ವತ್ರಿಕವಿದೆ.

(v) ಸಾರ್ವತ್ರಿಕ ಅಚಲ (Ideas are Unchangeable]. ಎಲ್ಲ ರೀತಿಯ ಬದಲಾವಣೆ, ವಿಕಾರ, ಪರಿಣಾಮರಹಿತವಾದುವು. ಅವು ನಿತ್ಯವೂ ಶಾಶ್ವತವೂ

ಆಗಿವೆ. ಮೂರ್ತ ಪ್ರತ್ಯೇಕ ವಸ್ತುಗಳು ಅಸ್ತಿತ್ವಕ್ಕೆ ಬರುತ್ತವೆ, ಇಲ್ಲವಾಗುತ್ತವೆ. ಮಾನವರು ಬರುತ್ತಾರೆ, ಹೋಗುತ್ತಾರೆ. ಸುಂದರವಾದ ವಸ್ತುಗಳು ಹುಟ್ಟುತ್ತವೆ ; ಅರೆಕ್ಷಣದಲ್ಲಿ ನಾಶವಾಗುತ್ತವೆ. ಆದರೆ ಸಾರ್ವತ್ರಿಕಗಳಾದ 'ಮಾನವತ್ವ' 'ಸೌಂದರ್ಯ'ಗಳು ಹುಟ್ಟುವುದೂ ಇಲ್ಲ ನಾಶ ಹೊಂದುವುದೂ ಇಲ್ಲ. ಅವು ನಿರಂತರವೂ ನಿತ್ಯವಾದ ತತ್ವಗಳು. ಅವು 'ಸತ್' ತತ್ವಗಳು ; ಆದಿ ಅಂತ್ಯ ರಹಿತವಾದವು ; ನಿರ್ವಿಕಾರ ಸ್ವಯಂಪ್ರಭೆಯುಳ್ಳ ತತ್ವಗಳು. ಅವು ಅಖಂಡವಾಗಿವೆ.

(vi) ಸಾರ್ವತ್ರಿಕಗಳು ಎಲ್ಲ ವಸ್ತುಗಳ ಸಾರವಾಗಿವೆ (Ideas are essence of things). ಉದಾಹರಣೆಗೆ 'ಮಾನವತ್ವ' ಎಲ್ಲ ಮಾನವರ ಸಾರ. ಎಲ್ಲ ಸುಂದರ ವಸ್ತುಗಳ ಸಾರ ಸೌಂದರ್ಯ.

(vii) ಪ್ರತಿಯೊಂದು ಸಾರ್ವತ್ರಿಕವೂ ಪರಿಪೂರ್ಣವಾದುದು (Each Idea is a perfection (ಅಂದರೆ ಅದಕ್ಕೆ ಯಾವುದರ ಅಭಾವವೂ ಇಲ್ಲ. ಅದು ಸ್ವಯಂ ಪೂರ್ಣವಾದ ಸ್ವಾವಲಂಬನೆಯ ನಿರುಪಮ ತತ್ವ. ಅದು ನಿರ್ಮಲವಾದುದು, ಅತಿಶಯವಾದುದು. ಉತ್ಪತ್ತಿ ಮತ್ತು ಜೀವಣಿಗೆ ರಹಿತವಾದುದು. ಅದು ಅಕಾಮ ಹಾಗೂ ಆಪ್ತಕಾಮ ತತ್ವ. ಅದರಿಂದ ಏನೂ ಹೊರಬರುವುದಿಲ್ಲ ; ಅದಕ್ಕೆ ಬೇರೆ ಏನನ್ನೂ ಸೇರಿಸಲಾಗುವುದಿಲ್ಲ. ಅದು ಪರಿಪೂರ್ಣವಾದುದರಿಂದಲೇ 'ಸತ್' ತತ್ವವಾಗಿದೆ.

(viii) ಸಾರ್ವತ್ರಿಕಗಳು ದೇಶ ಕಾಲಾತೀತವಾದವುಗಳು (Ideas are spaceless and timeless). ಅವುಗಳನ್ನು ಹೋಲುವ ವಸ್ತುವಿಶೇಷಗಳು ನಮ್ಮ ಅನುಭವ ಪ್ರಪಂಚದಲ್ಲಿ ಯಾವುವೂ ಇಲ್ಲ. ಸಾರ್ವತ್ರಿಕಗಳು ದೇಶ ಹಾಗೂ ಕಾಲಗಳಲ್ಲಿವೆ ಎಂದು ಒಪ್ಪಿದ ಪಕ್ಷದಲ್ಲಿ, ಅವು ಯಾವುದೋ ಒಂದು ಗೊತ್ತಾದ ಪ್ರದೇಶವನ್ನು ಆಕ್ರಮಿಸುತ್ತವೆ ಹಾಗೂ ಯಾವುದೋ ಒಂದು ಗೊತ್ತಾದ ಕಾಲದಲ್ಲಿರುತ್ತವೆ ಎಂದು ಅರ್ಥವಾಗುತ್ತದೆ. ಇದು ಸಾರ್ವತ್ರಿಕಗಳು ಅಚಲ, ನಿತ್ಯ, ಅನಂತ ಎಂಬ ಗುಣ ಲಕ್ಷಣಗಳಿಗೆ ವಿರುದ್ಧವಾಗುತ್ತದೆ. ಅವು ನಿತ್ಯವೂ ತಮ್ಮದೇ ಆದ ಲೋಕವನ್ನು ಹೊಂದಿರುವುದರಿಂದಲೂ ದೇಶ ಕಾಲಾತೀತವಾಗಿರಬೇಕೆಂಬುದು ಅನಿವಾರ್ಯವಾಗುತ್ತದೆ. ಅಲ್ಲದೆ ದೇಶ ಕಾಲಗಳಲ್ಲಿ ಏನೇನು ಇವೆಯೋ ಅವೆಲ್ಲವು ಪ್ರತ್ಯೇಕಗಳು. ಆದುದರಿಂದ ಸಾಮಾನ್ಯಗಳು ದೇಶ ಕಾಲಾತೀತವಾದುವುಗಳು.

(ix) ಸಾರ್ವತ್ರಿಕಗಳು ಬುದ್ಧಿಬದ್ಧವಾದವು (Ideas are rational). ಅವುಗಳನ್ನು ಬುದ್ಧಿ (Reason) ಯಿಂದ ಮಾತ್ರ ಗ್ರಹಿಸಲು ಸಾಧ್ಯ. ಅವು ಅಭಿಮತಕ್ಕಾಗಲೀ ಇಂದ್ರಿಯ ಸಂವೇದನೆಗಾಗಲೀ ನಿಲುಕುವುದಿಲ್ಲ. ವಿಚಾರಶಕ್ತಿಗೆ, ವಿವೇಚನೆಗೆ ಮಾತ್ರ ನಿಲುಕುವಂಥವು.

(x) ಸಾರ್ವತಿಕ ಅಂಕೆಗಳು (Ideas are Numbers). ಅಂತ್ಯದಲ್ಲಿ ಪ್ಲೇಟೋ ಸಾರ್ವತ್ರಿಕಗಳನ್ನು ಅಂಕೆಗಳೊಡನೆ ಐಕ್ಯಗೊಳಿಸಿದನೆಂದು ಅರಿಸ್ಟಾಟಲ್ ಹೇಳುತ್ತಾನೆ. ಅಂಕೆಗಳು ಪ್ರಪಂಚದ ಮೂಲತತ್ವಗಳು ಎಂಬ ಪೈಥಾಗೊರಿಯನ್ನರ

ಪ್ರತಿಪಾದನೆಯ ಪ್ರಭಾವದಿಂದ ಪ್ಲೇಟೋ ಹೀಗೆ ಐಕ್ಯಗೊಳಿಸಿರಬಹುದು. ಇದರಿಂದ ದುಷ್ಪರಿಣಾಮ ಇಲ್ಲದಿಲ್ಲ. ಪ್ಲೇಟೋವಿನ ಭವ್ಯ ತಾತ್ವಿಕ ಚಿಂತನೆ ನೀರಸವಾದ ಗಣಿತವಾಗಿ ಬಿಡುತ್ತದೆ.

೬

ಸಾರ್ವತ್ರಿಕಗಳಲ್ಲಿ ಅನೇಕ ವಿಧಗಳುಂಟು, ನ್ಯಾಯ, ಸೌಂದರ್ಯ ಇತ್ಯಾದಿ. ಈ ಸಾರ್ವತ್ರಿಕಗಳು ಅವ್ಯವಸ್ಥೆಯಲ್ಲಿಲ್ಲ. ಅವು ಒಂದು ಕ್ರಮವನ್ನೂ ವ್ಯವಸ್ಥೆಯನ್ನೂ ಹೊಂದಿವೆ. ಒಂದು ಸಾರ್ವತ್ರಿಕಕ್ಕೂ ಮತ್ತೊಂದಕ್ಕೂ ಸಂಬಂಧ ಇಲ್ಲದೇ ಇಲ್ಲ. ಅವು ಒಂದೇ ಕುಟುಂಬದ ವಿವಿಧ ಸದಸ್ಯರಿದ್ದಂತೆ. ಅವು ಉಚ್ಚ ನೀಚ ಕ್ರಮದಲ್ಲಿ ಜೋಡಿಸಲ್ಪಟ್ಟಿವೆ. ಜಾತಿ ಸಾಮಾನ್ಯಗಳ ಮೇಲೆ ವರ್ಗ ಸಾಮಾನ್ಯಗಳು, ವರ್ಗ ಸಾಮಾನ್ಯಗಳ ಮೇಲೆ ಸಂಘ ಸಾಮಾನ್ಯಗಳು ಅವುಗಳ ಮೇಲೆ ಸತ್ಯ ಸಾಮಾನ್ಯ, ಅದರ ಮೇಲೆ ಸೌಂದರ್ಯ ಸಾಮಾನ್ಯ, ಅದರ ಮೇಲೆ ಶ್ರೇಯ ಅಥವಾ ಶುಭ ಸಾಮಾನ್ಯಗಳು ಹೀಗೆ ಪಿರಮಿಡ್ಡಿನಾಕಾರದಲ್ಲಿ ಕ್ರಮವಾಗಿ ಜೋಡಿಸಲ್ಪಟ್ಟಿವೆ. ಈ ಪಿರಮಿಡ್ಡಿನ ತುತ್ತ ತುದಿಯೇ ಪರಮ ಶ್ರೇಯ (The Idea of Good).

ಹೀಗೆ ಪ್ಲೇಟೋವಿನ ಪ್ರಕಾರ ಸಾಮಾನ್ಯ ಅಥವಾ ಸಾರ್ವತ್ರಿಕಗಳಲ್ಲೆಲ್ಲಾ ಉತ್ಕೃಷ್ಟತರವಾದದ್ದು ಪರಮಶ್ರೇಯ. ಇದಕ್ಕಿಂತಲೂ ಉತ್ಕೃಷ್ಟತರವಾದ ಮತ್ತೊಂದು ಸಾಮಾನ್ಯವಿಲ್ಲ. ಪರಮ ಶ್ರೇಯದಿಂದ ಉಳಿದೆಲ್ಲ ಸಾರ್ವತ್ರಿಕಗಳು ತಮ್ಮ ಅಸ್ತಿತ್ವವನ್ನು ಪಡೆಯುತ್ತವೆ. ಕೊನೆಯಲ್ಲಿ ಎಲ್ಲ ಸಾರ್ವತ್ರಿಕಗಳು ಪರಮ ಶ್ರೇಯಕ್ಕೇ ಹಿಂತಿರುಗುತ್ತವೆ. ಹೀಗೆ ಪ್ರಾರಂಭದಲ್ಲಿ ಪ್ಲೇಟೋ ಅನೇಕ ಸಾರ್ವತ್ರಿಕಗಳನ್ನು ಒಪ್ಪಿದರೂ, ಕೊನೆಯಲ್ಲಿ ಒಂದೇ ಒಂದು ಸಾರ್ವತ್ರಿಕಕ್ಕೆ ಬಂದು ನೆಲೆ ನಿಲ್ಲುತ್ತಾನೆ. ಅವನ ಪ್ರಕಾರ ಬಹುತ್ವವೇ ಮುಖ್ಯವಲ್ಲ ; ಬಹುತ್ವದ ತಳಪಾಯದಿಂದ ಏಕತ್ವವೂ ಅಷ್ಟೇ ಮುಖ್ಯ. ಪ್ಲೇಟೋವಿನ ದರ್ಶನ ಕೇವಲ 'ಏಕವಾದ'ವಲ್ಲ. ಅದು ಕೇವಲ 'ಅನೇಕವಾದ'ವೂ ಅಲ್ಲ. ಅವನ ಪ್ರಕಾರ ಸತ್ಯ ಏಕದಲ್ಲಿ ಅನೇಕ ; ಅನೇಕದಲ್ಲಿ ಏಕ ; ಭೇದದಲ್ಲಿ ಅಭೇದ ; ಅಭೇದದಲ್ಲಿ ಭೇದ ; ವೈವಿಧ್ಯತೆಯಲ್ಲಿ ಏಕತೆ ; ಏಕತೆಯಲ್ಲಿ ವೈವಿಧ್ಯ.

ಪರಮಶ್ರೇಯ (The Good) ಸರ್ವಕ್ಕೂ ಮೂಲಕಾರಣ ಎಂದು ಪ್ರತಿಪಾದಿಸುವ ಪ್ಲೇಟೋವಿನ ದರ್ಶನವನ್ನು ಉದ್ದೇಶವಾದ (Teleology) ಎಂದು ಕರೆಯಬಹುದು. ಈ ವಾದದ ಪ್ರಕಾರ ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವಿಗೂ—ಅದು ಶ್ರೇಷ್ಠವಿರಲಿ ಇಲ್ಲವೆ ನಿಕೃಷ್ಟವಿರಲಿ—ತನ್ನದೇ ಆದ ಒಂದು ಉದ್ದೇಶ ಅಥವಾ ಪ್ರಯೋಜನವಿದೆ. ಆ ಉದ್ದೇಶವನ್ನು ಸಫಲಗೊಳಿಸಿಕೊಳ್ಳುವುದೇ ಅದು ಅಸ್ತಿತ್ವಕ್ಕೆ ಬರಲು ಮುಖ್ಯಕಾರಣ. ಪರಮಶ್ರೇಯ, ಸರ್ವಕ್ಕೂ ಮೂಲ ಹಾಗೂ ಸರ್ವವೂ ಕ್ರಮಕ್ರಮವಾಗಿ ಪರಿಪೂರ್ಣತೆಗೆ ಧಾವಿಸುತ್ತಿದೆ ಎಂಬ ಉದ್ದೇಶವಾದವನ್ನು ಪ್ಲೇಟೋ ಎತ್ತಿ ಹಿಡಿಯುತ್ತಾನೆ ಎನ್ನಬಹುದು. ಅವನ ದೃಷ್ಟಿಯಲ್ಲಿ ಅನಿಷ್ಟ (Evil)

ಎಂಬುದು ಸ್ವತಂತ್ರ ಅಸ್ತಿತ್ವವನ್ನು ಹೊಂದಿಲ್ಲ. ಪರಿಪೂರ್ಣತೆಯ ಅಭಾವವೇ ಅನಿಷ್ಟವೆನ್ನಬಹುದು.

ಹೀಗೆ ಸಾಕ್ರೆಟೀಸನಂತೆ ಪ್ಲೇಟೋ ದಾರ್ಶನಿಕನೂ ಕೂಡ ಎಲ್ಲವುದಕ್ಕಿಂತ ಹೆಚ್ಚಾಗಿ ನೀತಿಗೆ, ಸದ್ಗುಣಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದಾನೆ. ಪರಮಶ್ರೇಯ ಜ್ಞಾನಪ್ರಭೆಯುಳ್ಳ ಸಾರ್ವತ್ರಿಕ ಎಂದು ಪರಿಭಾವಿಸಿ ಸದ್ಗುಣವೂ ಜ್ಞಾನವೂ ಒಂದೇ ಎಂದು ಸಾರಿದ್ದಾನೆ. ನೀತಿಯನ್ನು, ನೈತಿಕ ಜ್ಞಾನವನ್ನು ಮೀರಿದ ಮತ್ತೊಂದು ವಿದ್ಯೆಯಿಲ್ಲ. ಎಲ್ಲವನ್ನೂ ತಿಳಿದು ಇದೊಂದನ್ನು ತಿಳಿಯದಿದ್ದರೆ ಏನನ್ನೂ ತಿಳಿದಂತಾಗಲಿಲ್ಲ ಎಂದು ಉದ್ಘೋಷಿಸುತ್ತಾನೆ. ವಿಶೇಷವಾಗಿ ಪರಮಶ್ರೇಯವನ್ನು ತಿಳಿದರೆ ಉಳಿದಿದ್ದನ್ನೆಲ್ಲಾ ತಿಳಿದಂತಾಗುತ್ತದೆ. ಪ್ರತಿಯೊಂದು ಪ್ರಾಣಿಯೂ ಶ್ರೇಯವನ್ನೇ ಬಯಸುತ್ತದೆ; ಅದರ ಸಂಸ್ಕಾರದಿಂದ ಅದರ ಪ್ರತಿಯೊಂದು ಕಾರ್ಯವೂ ಪ್ರೇರೇಪಿಸಲ್ಪಡುತ್ತದೆ. ಪರಮಶ್ರೇಯವನ್ನು ಮತ್ತೊಬ್ಬರಿಗೆ ನಿಶ್ಚಯವಾಗಿಯೂ ಬೋಧಿಸಬಹುದು, ತನ್ಮೂಲಕ ಅವರನ್ನು ನೀತಿವಂತರನ್ನಾಗಿ ಮಾಡಬಹುದು ಎಂದು ಸಾಕ್ರೆಟೀಸನ ಮುಖವಾಣಿಯಾಗುತ್ತಾನೆ ಪ್ಲೇಟೋ.

೭

ಪ್ಲೇಟೋವಿನ ತತ್ವಚಿಂತನೆಯಲ್ಲಿ ಜಗತ್ತಿನ ಸ್ಥಾನ

ಪ್ಲೇಟೋವಿನ ಪ್ರಕಾರ ಜಗತ್ತು, ಅಥವಾ ಪ್ರಪಂಚ ಸಾರ್ವತ್ರಿಕಗಳಿಗೆ ವಿರುದ್ಧವಾದ ತತ್ವ. ಎಲ್ಲ ರೀತಿಯಿಂದಲೂ ಅದು ಸಾರ್ವತ್ರಿಕಗಳಿಗೆ ವಿರುದ್ಧವಾಗಿದೆ:

(i) ಸಾರ್ವತ್ರಿಕಗಳು ಅಚಲವೂ ಬದಲಾವಣೆ ರಹಿತವೂ ವಿಕಾರರಹಿತವೂ ಆಗಿದ್ದರೆ ಪ್ರತ್ಯೇಕ ವಸ್ತುಗಳಿಂದ ಕೂಡಿರುವ ಪ್ರಪಂಚ ಕ್ಷಣಕ್ಷಣಕ್ಕೂ ಬದಲಾವಣೆ ಹೊಂದುತ್ತಲೂ ಚಲಿಸುತ್ತಲೂ ಇರುತ್ತದೆ.

(ii) ಸಾರ್ವತ್ರಿಕಗಳು ಸರ್ವಕ್ಕೂ ಆಧಾರವಾದ ತತ್ವಗಳು. ಬೇರೆಬೇರೆಯಾಗಿ ವ್ಯಕ್ತವಾದ ಹಾಗೂ ವಿವಿಧವಾಗಿ ಹರಡಿಕೊಂಡಿರುವ ವಸ್ತುಗಳೇ ಪ್ರತ್ಯೇಕಗಳು. ಸಾರ್ವತ್ರಿಕಗಳೇ ಅಂತಿಮಸತ್ಯ; ಪ್ರತ್ಯೇಕಗಳು ಸಾರ್ವತ್ರಿಕಗಳ ಕೇವಲ 'ನಕಲು'ಗಳಾಗಿವೆ ಎಂದು ಪ್ಲೇಟೋ ಹೇಳುತ್ತಾನೆ. ಪ್ರತ್ಯೇಕಗಳು ಸತ್ಯವಲ್ಲವಿದ್ದರೂ ಸಾರ್ವತ್ರಿಕಗಳನ್ನು ಅನುಕರಿಸುವುದರಿಂದ (imitate) ಸತ್ಯವೇನೋ ಎಂಬಂತೆ ತೋರುತ್ತವೆ. ಅವು ಸಾರ್ವತ್ರಿಕಗಳಲ್ಲಿ ಭಾಗವಹಿಸುವುದರಿಂದ ಅವುಗಳನ್ನು 'ಸತ್ಯ'ವೆಂದು ಇಂದ್ರಿಯಗಳು ತಪ್ಪಾಗಿ ತಿಳಿಯುತ್ತವೆ ಎಂದು ಪ್ಲೇಟೋ ಉದ್ಘೋಷಿಸುತ್ತಾನೆ. ಉದಾಹರಣೆಗೆ ಪ್ರಪಂಚದಲ್ಲಿರುವ ಎಲ್ಲ ಬಿಳುಪಾದ ವಸ್ತುಗಳು ಶ್ವೇತವರ್ಣ (Universal Idea of Whiteness) ಎಂಬ ಸಾರ್ವತ್ರಿಕದಲ್ಲಿ ಭಾಗವಹಿಸುತ್ತವೆ. ಆದುದರಿಂದ ಅವು ಶುಭ್ರವಾಗಿಯೂ ಸತ್ಯವಾಗಿಯೂ ಇದ್ದಂತೆ ತೋರುತ್ತವೆ. ಹೀಗೆ ಶ್ವೇತವರ್ಣವೇ ಶ್ವೇತವಸ್ತುಗಳ ಮೂಲಕಾರಣವಾಗಿದೆ.

(iii) ಸಾರ್ವತ್ರಿಕಗಳು ಅಮೂರ್ತ ಸಾಮಾನ್ಯ ತತ್ವಗಳಾದರೆ, ವಸ್ತುಗಳು ಪ್ರತ್ಯೇಕ, ಪ್ರತ್ಯೇಕ ಹಾಗೂ ಮೂರ್ತ (individual).

(iv) ಸಾರ್ವತ್ರಿಕಗಳು ಅಮರ ನಿತ್ಯ. ಹಾಗೂ ಶಾಶ್ವತ. ಆದರೆ ಪ್ರತ್ಯೇಕಗಳು ಇಂದು ಜನಿಸಿ ನಾಳೆ ಇಲ್ಲವಾಗುತ್ತವೆ. ಅಂದರೆ ಅವು ಅನಿತ್ಯ, ಅಶಾಶ್ವತ.

(v) ಸಾರ್ವತ್ರಿಕಗಳು ಸಂಪೂರ್ಣ 'ಸತ್' ತತ್ವಗಳು. ಆದರೆ ಪ್ರಪಂಚದ ಪ್ರತ್ಯೇಕ ಪ್ರತ್ಯೇಕ ವಸ್ತುಗಳು ಪೂರ್ಣವಾಗಿ ಸತ್ ಅಲ್ಲ, ಅಸತ್ ಕೂಡ ಅಲ್ಲ. ಅವು ಅತಿಸತ್ಯ, ಅತಿಮಿಥ್ಯ. ಏಕೆಂದರೆ ಅವು ಸತ್ ತತ್ವವಾದ ಸಾರ್ವತ್ರಿಕಗಳಲ್ಲೂ ಭಾಗ ವಹಿಸುತ್ತವೆ ; ಅಸತ್ ತತ್ವವಾದ 'Matter'ನಲ್ಲೂ ಭಾಗವಹಿಸುತ್ತವೆ. ಅವು ಅರ್ಧ ಸತ್ಯ, ಅರ್ಧಮಿಥ್ಯ ಎಂದು ಹೇಳಿವರೆ ಅವು ತೋರಿಕೆಗಳೆಂದೇ ಅರ್ಥ.

(vi) ಸಾರ್ವತ್ರಿಕ ಪ್ರತಿಯೊಂದು ಏಕ ಮತ್ತು ಪರಿಪೂರ್ಣ. ಆದರೆ ಪ್ರತ್ಯೇಕ ಗಳು ಅಸಂಖ್ಯಾತ ಕ್ಷಣಿಕ ಹಾಗೂ ಅಪರಿಪೂರ್ಣ.

(vii) ಸಾರ್ವತ್ರಿಕಗಳು ದೇಶಕಾಲಾತೀತವಾದರೆ ಪ್ರತ್ಯೇಕ ವಸ್ತುಗಳೆಲ್ಲ ದೇಶ ಕಾಲದಲ್ಲಿವೆ. ಅಂದರೆ ಅವು ಒಂದು ನಿರ್ದಿಷ್ಟಕಾಲದಲ್ಲಿ ಒಂದು ಗೊತ್ತಾದ ಪ್ರದೇಶ ವನ್ನು ಆಕ್ರಮಿಸುತ್ತವೆ. ಹೀಗೆ ಪ್ಲೇಟೋವಿನ ಪ್ರಕಾರ 'ಸಾಮಾನ್ಯಲೋಕ'— ಸಾಮಾನ್ಯಗಳ ಲೋಕ ಮತ್ತು 'ಪ್ರತ್ಯೇಕಲೋಕ'—ಪ್ರತ್ಯೇಕಗಳ ಲೋಕ ಎಂಬ ಎರಡು ಲೋಕಗಳುಂಟು.

(viii) ಸಾರ್ವತ್ರಿಕಗಳು ಬುದ್ಧಿ (Reason)ಗೆ ವಿಚಾರಕ್ಕೆ ಮಾತ್ರ ಎಟುಕು ವಂಥವು, ಇಂದ್ರಿಯ ಸಂವೇದನೆಗಲ್ಲ. ಆದರೆ ಪ್ರತ್ಯೇಕಗಳನ್ನು ಇಂದ್ರಿಯಗಳಿಂದ ತಿಳಿಯಬಹುದು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಪ್ರತ್ಯೇಕಗಳು ಕಣ್ಣಿಗೆ ಕಾಣಿಸ ತಕ್ಕವುಗಳು, ಮಾನಸಗೋಚರಗಳಲ್ಲ. ಆದರೆ ಸಾವ್ರರ್ತಿಕಗಳು ಜ್ಞಾನ ಚಕ್ಷುಸ್ಸಿಗೆ ಗೋಚರವಾಗತಕ್ಕವುಗಳು, ಚರ್ಮ ಚಕ್ಷುಸ್ಸಿಗಲ್ಲ.

೮

ಪ್ಲೇಟೋವಿನ ತತ್ವಚಿಂತನೆಯ ಮೇಲೆ ಆಗಿರುವ ನಾಲ್ಕು ಮುಖ್ಯ ಪ್ರಭಾವಗಳನ್ನು ಇಲ್ಲಿ ಸೂಚಿಸಬಹುದು : (i) ಸಾರ್ವತ್ರಿಕಗಳೇ ಅಂತಿಮ ಸತ್ಯ. ಅವು ಅಚಲ, ಅವಿಕಾರಿ, ಅಪರಿಗಾಮಿ, ನಿತ್ಯ, ಶುದ್ಧ, ಅಖಂಡ, ಪರಿಪೂರ್ಣ, ನಿರುತ್ಪನ್ನ, ಅನಾದಿ, ಸ್ವಯಂಸಿದ್ಧ ಎಂದು ಹೇಳುವ ಪ್ಲೇಟೋವಿನ ಪ್ರತಿಪಾದನೆ ಪಾರ್ಮಿನೈಡಿಸ್‌ನ 'ಸತ್' ತತ್ವ (Being)ವನ್ನು ನೆನಪಿಗೆ ತರುತ್ತದೆ. ಹಾಗೆಯೇ ಮೊಟ್ಟಮೊದಲನೆ ಬಾರಿಗೆ ಬುದ್ಧಿ (Reason) ಮತ್ತು ಇಂದ್ರಿಯ (Sense)ಗಳ ನಡುವೆ ಭೇದವನ್ನು ಮಾಡಿ, 'ಸತ್' ತತ್ವ ಬುದ್ಧಿಗೆ ಮಾತ್ರ ನಿಲುಕುವಂಥದು ಇಂದ್ರಿಯಗಳಿಗಲ್ಲ ; ಇಂದ್ರಿಯಗಳಿಂದ ಸೂಚಿಸಲ್ಪಟ್ಟದೆಲ್ಲಾ ಮಿಥ್ಯೆ, ತೋರಿಕೆ ಎಂದು ಸಾರಿದ ಪಾರ್ಮಿನೈಡಿಸ್‌ನ ಪ್ರಭಾವ ಪ್ಲೇಟೋವಿನ ಮೇಲೆ ಅಚ್ಚಳಿಯದೆ ನಿಂತಿದೆ. ಅವನಂತೆ ಪ್ಲೇಟೊ ಕೂಡ ಅಂತಿಮಸತ್ಯ

ವಾದ ಸಾರ್ವತ್ರಿಕಗಳನ್ನು ಬುದ್ಧಿ (Reason) ಯಿಂದ ಮಾತ್ರ ಗ್ರಹಿಸಲು ಸಾಧ್ಯ, ಇಂದ್ರಿಯಗಳಿಂದಲ್ಲ; ಚರ್ಮಚಕ್ಷುಸ್ಸಿಗೆ ಕಾಣುವ ಪ್ರತ್ಯೇಕಗಳ ಪ್ರಪಂಚ ಕೇವಲ ತೋರಿಕೆ, 'ಸಾರ್ವತ್ರಿಕಗಳ ನಕಲು' ಎಂದು ಉದ್ಘೋಷಿಸುತ್ತಾನೆ.

(ii) ಹಾಗೆಯೇ ಈ ಪ್ರಪಂಚವೆಂಬುದು ನಶ್ವರ, ಅನಿತ್ಯ ಕ್ಷಣಕ್ಷಣಕ್ಕೂ ಬದಲಾಯಿಸುತ್ತಿರುವಂಥದು ಎಂದು ಅಭಿಪ್ರಾಯ ಪಡುವ ಪ್ಲೇಟೋವಿನ ಮೇಲೆ ಹೆರಾಕ್ಲೈಟಸ್‌ನ ನಿಚ್ಚಳ ಪ್ರಭಾವವನ್ನು ಕಾಣಬಹುದು.

(iii) ಅಂಕಗಳೇ ಪ್ರಪಂಚದ ಮೂಲ ತತ್ತ್ವಗಳೆಂದೂ, ಅಂಕವಿಲ್ಲದ ಪ್ರಪಂಚವನ್ನು ಊಹಿಸಲು ಸಾಧ್ಯವಿಲ್ಲವೆಂದೂ, ರಾಗದ್ವೇಷಗಳಿಂದ ವಿಮುಕ್ತವಾದ ಗಣಿತದ ನಿಸ್ಪೃಷ್ಟ ಜ್ಞಾನವೇ ನೀತಿಯ, ಅಂತಿಮ ಸತ್ಯ ಸಾಕ್ಷಾತ್ಕಾರದ ಮಾರ್ಗವೆಂದು ಸಾರಿದ ಪೈಥಾಗೊರಸ್ ಮತ್ತು ಅವನ ಶಿಷ್ಯರ ಪ್ರಭಾವೀ ಉಪದೇಶಕ್ಕೆ ಪ್ಲೇಟೋ ಮನಸೋತಿದ್ದಾನೆಂಬುದು ಸುಸ್ಪಷ್ಟ. ಗಣಿತಜ್ಞಾನ 'ಅಭಿಮತ ಪ್ರಪಂಚ'ಕ್ಕೂ 'ಸಾರ್ವತ್ರಿಕ ಲೋಕ'ಕ್ಕೂ ಮಧ್ಯೆ ಇರುವ 'ಸೇತುವೆ'; ಅದೇ ಸಾರ್ವತ್ರಿಕಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಇರುವ ಏಕೈಕ ಮಾರ್ಗ ಎಂದು ಪ್ಲೇಟೋ ಸಾರುತ್ತಾನೆ.

(iv) ಜ್ಞಾನ ವಸ್ತುನಿಷ್ಠವಾದುದು, ವ್ಯಕ್ತಿನಿಷ್ಠವಲ್ಲ; ವಸ್ತುಸ್ವರೂಪವಾದುದು ವ್ಯಕ್ತಿಯ ಆಸೆ ಅಸಿಸಿಕೆಗಳಿಗೆ ವಿಧೇಯವಾದುದಲ್ಲ; ಸಾರ್ವತ್ರಿಕವಾದ ಸರ್ವಜನಗ್ರಾಹ್ಯವಾದ, ಸರ್ವಸಮ್ಮತವಾದ, ಬುದ್ಧಿಬದ್ಧವಾದ ಜ್ಞಾನವಿದೆ, ನ್ಯಾಯವಿದೆ, ಸತ್ಯವಿದೆ, ನೀತಿ ಸದ್ಗುಣಗಳಿವೆ; ನೈತಿಕ ಜ್ಞಾನವೇ ಉಳಿದೆಲ್ಲ ಜ್ಞಾನಕ್ಕಿಂತ ಪರಮೋತ್ಕೃಷ್ಟವಾದುದು; ಜ್ಞಾನವೇ ಸದ್ಗುಣ, ಸದ್ಗುಣವೇ ಜ್ಞಾನ ಎಂದು ಬೋಧಿಸಿದ ಸಾಕ್ರಟೀಸ್ ಪ್ಲೇಟೋವಿನ ತತ್ತ್ವಚಿಂತನೆಯ ಬೆನ್ನೆಲುಬು ಆಗಿದ್ದಾನೆ. ಅವನಂತೆಯೇ ಪ್ಲೇಟೋ ಸಹ ಅಂತಿಮ ಸತ್ಯ ಪರಮಶ್ರೇಯಸ್ಸು; ಅದು ಸ್ವಯಂಜ್ಯೋತಿ ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುವೂ ಅದರೆಡೆಗೆ ಪಯಣಿಸುತ್ತಿದೆ; ಅದನ್ನು ಸೇರುವುದರಲ್ಲಿಯೇ ತನ್ನ ಸಾರ್ಥಕ್ಯವನ್ನು ಹೊಂದುತ್ತದೆ, ಎಂದು ಬೋಧಿಸುತ್ತಾನೆ.

೬

ಪ್ಲೇಟೋವಿನ ತತ್ತ್ವಚಿಂತನೆಯಲ್ಲಿ 'ದೇವರ' ಸ್ಥಾನ

ಪ್ಲೇಟೋ ತನ್ನ ಸಂವಾದಗಳಲ್ಲಿ 'ದೇವರು' ಎಂಬ ಪದವನ್ನು ಅದು ಏಕ ಮತ್ತು ಅನೇಕ ಎಂಬ ಎರಡು ಅರ್ಥಗಳಲ್ಲಿಯೂ ಯಥೇಚ್ಛವಾಗಿ ಉಪಯೋಗಿಸುತ್ತಾನೆ. ಸಾರ್ವತ್ರಿಕಗಳನ್ನಲ್ಲದೆ 'ದೇವರು ಎಂಬ ತತ್ತ್ವವನ್ನು ಅವನು ಉಪಯೋಗಿಸಿರುವುದರಿಂದ ಇಲ್ಲಿ ಒಂದು ಬಹು ಮುಖ್ಯ ಪ್ರಶ್ನೆ ತಲೆ ಎತ್ತುತ್ತದೆ. 'ಸಾರ್ವತ್ರಿಕ (ಪರಮಶ್ರೇಯಸ್ಸು)ಕ್ಕೂ 'ದೇವರಿಗೂ' ಇರುವ ತಾತ್ತ್ವಿಕ ಸಂಬಂಧವೇನು? ಈ ಪ್ರಶ್ನೆಗೆ ಪ್ಲೇಟೋ ಮೂರು ರೀತಿಯ ಉತ್ತರಗಳು ಸಾಧ್ಯವೆಂದು ಹೇಳಬೇಕಾಗುತ್ತದೆ. ಈಗ ಆ ಮೂರು ರೀತಿಯ ಉತ್ತರಗಳನ್ನು ಪರಿಶೀಲಿಸಬಹುದು.

(i) 'ದೇವರು' ತತ್ವವೇ ಪರಮಶ್ರೇಯದ ಮೂಲಕಾರಣ

(ii) ಪರಮಶ್ರೇಯವೇ 'ದೇವರು' ತತ್ವದ ಮೂಲಕಾರಣ

ಮತ್ತು

(iii) 'ದೇವರು' ಪರಮಶ್ರೇಯದ ಮೂಲಕಾರಣವಲ್ಲ ; ಹಾಗೆಯೇ ಪರಮಶ್ರೇಯವೂ 'ದೇವರು' ತತ್ವದ ಮೂಲಕಾರಣವಲ್ಲ. ಎರಡೂ ಸ್ವತಂತ್ರ ಮತ್ತು ಅನಂತ ಎಂದು.

ಮೊದಲನೆಯ ಉತ್ತರವನ್ನು ಒಪ್ಪಿಕೊಂಡ ಪಕ್ಷದಲ್ಲಿ ಅವನ ತಾತ್ವಿಕ ಚಿಂತನೆಯೆಂಬ ಭವ್ಯ ಭವನ ತತ್‌ಕ್ಷಣವೇ ಕುಸಿದುಬೀಳುತ್ತದೆ. ಏಕೆಂದರೆ ಅವನ ಚಿಂತನೆಯ ಪ್ರಕಾರ ಪರಮ ಶ್ರೇಯ (The Good) ಸರ್ವಕ್ಕೂ ಮೂಲ ; ಅದಕ್ಕೆ ತನ್ನನ್ನು ಬಿಟ್ಟು ಬೇರೆ ಮೂಲವೆಂಬುದಿಲ್ಲ. ಅದಕ್ಕಿಂತ ಹೆಚ್ಚಿನದಾದ ಮತ್ತೊಂದು ತತ್ವವಿಲ್ಲ. ಆದರೆ 'ದೇವರು' ಪರಮಶ್ರೇಯದ ಮೂಲಕಾರಣವೆಂದು ಒಪ್ಪಿದಾಗ, ಪರಮಶ್ರೇಯಕ್ಕಿಂತ ಹೆಚ್ಚಿನ ಮಟ್ಟದ ತತ್ವವಿದೆ ಎಂದಂತಾಗುತ್ತದೆ. ಈ ಉತ್ತರ 'ದೇವರು' ತತ್ವಕ್ಕೆ ತಕ್ಕುದಾದ ಸ್ಥಾನವನ್ನು ಕಲ್ಪಿಸಿದರೂ ಅವನ ಮೂಲಚಿಂತನೆಯ ತಳಹದಿಯನ್ನೇ ಒಲಿ ತೆಗೆದುಕೊಳ್ಳುತ್ತದೆ.

ಎರಡನೆಯ ಉತ್ತರವನ್ನು ಪ್ಲೇಟೋ ಒಪ್ಪಿದ ಪಕ್ಷದಲ್ಲಿ ಆಗ 'ದೇವರು' ಅಸ್ವತಂತ್ರ ತತ್ವವಾಗುತ್ತದೆ. ದೇವರು ಅಸಹಾಯಕ ಮಾನವರಲ್ಲಿ ಒಬ್ಬನಾಗಿಬಿಡುತ್ತಾನೆ ಈ ಉತ್ತರ ಪ್ಲೇಟೋವಿನ ಮೂಲಚಿಂತನೆಯನ್ನು ಪುಷ್ಟಿಕರಿಸಿದರೂ ದೇವರನ್ನು ಮಹತ್ವವಿಲ್ಲದ ತತ್ವವನ್ನಾಗಿ ಪರಿವರ್ತಿಸುತ್ತದೆ. ದೇವರು ಸರ್ವಶಕ್ತನೂ, ಸರ್ವಕಾರಣನೂ ಅನಂತನೂ ಸರ್ವಜ್ಞನೂ ಸರ್ವಾಂತರ್ಯಾಮಿಯೂ ಆಗದೆ ಮಿತನೂ, ಕಾರ್ಯನೂ (effect), ಅಜ್ಞಾನಿಯೂ ಆಗಿ ಧಾರ್ಮಿಕ ಪ್ರವೃತ್ತಿಯುಳ್ಳವರಿಗೆ ಶಾಂತಿ ಸಮಾಧಾನಗಳನ್ನು ನೀಡಲು ಅಸಮರ್ಥನಾಗಿ ನಂಬಿಕೆಗೆ ಅನರ್ಹನಾಗುತ್ತಾನೆ. ಧಾರ್ಮಿಕ ಪ್ರವೃತ್ತಿಯುಳ್ಳವರ ಪ್ರಕಾರ ದೇವರಿಗಿಂತ ಮಿಗಿಲಾದ ಮತ್ತೊಂದು ತತ್ವವಿಲ್ಲ. ಹೀಗೆ ದೇವರು ಅಸಹಾಯಕನೂ, ನಿಷ್ಪ್ರಯೋಜಕನೂ ಆಗಿ ಮಾನವನ ಸಹಾನುಭೂತಿಗೆ ಪಾತ್ರನಾಗುವವನಾಗುತ್ತಾನೆ.

ಸಾರ್ವತ್ರಿಕ ಮತ್ತು ದೇವರು ಎರಡೂ ಸ್ವತಂತ್ರ ತತ್ವಗಳು ಎಂಬ ಉತ್ತರ ಆಕರ್ಷಕವಾಗಿ ಕಂಡುಬಂದರೂ ಅದರಲ್ಲಿ ದೋಷ ಇಲ್ಲದಿಲ್ಲ. ಎರಡೂ ಅನಂತ, ಸ್ವತಂತ್ರ, ಪರಿಪೂರ್ಣ ಎಂದು ಒಪ್ಪಿದ ಪಕ್ಷದಲ್ಲಿ, ಎರಡೂ ಸಂಬಂಧರಹಿತ ಉದಾಸೀನ ತತ್ವಗಳೆಂದು ಹೇಳಬೇಕಾಗುತ್ತದೆ. ಅಂದರೆ ಈ ಎರಡು ತತ್ವಗಳ ನಡುವೆ ಯಾವ ಸಂಬಂಧವನ್ನೂ ಕಲ್ಪಿಸಲಾಗದೆ, ಎರಡರ ನಡುವೆ ಕೂಡಿಸಲಾಗದ ಕಂದಕವೇರ್ಪಡುತ್ತದೆ. ಹೀಗೆಂದರೆ ಅದು ಕಡುದ್ವೈತದಲ್ಲಿ ಪರ್ಯಾವಸಾನವಾಗತ್ತದೆ. ಕಡುದ್ವೈತವಾದ ಹಾಗೆ ನೋಡಿದರೆ ಏನನ್ನೂ ವಿವರಿಸುವುದಿಲ್ಲ. ಸಾರ್ವತ್ರಿಕ (ಪರಮಶ್ರೇಯ) ಸಾರ್ವತ್ರಿಕವಾಗಿರುತ್ತದೆ, 'ದೇವರು' ದೇವರಾಗುತ್ತಾನೆ ಅಷ್ಟೆ.

ಪ್ಲೇಟೋವಿನ ಸಂವಾದಗಳನ್ನು, ಅವರಲ್ಲೂ 'ಫೈಲೀಬಸ್' ಸಂವಾದವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಪರಮಶ್ರೇಯ ಮತ್ತು 'ದೇವರು' ಎರಡೂ ಅಭಿನ್ನ ತತ್ತ್ವಗಳು ಎಂದು ಅವನು ಅಭಿಪ್ರಾಯಪಟ್ಟಂತೆ ಕಂಡುಬರುತ್ತದೆ. ಇದರಿಂದ ಪ್ಲೇಟೋವಿನ ದೃಷ್ಟಿಯಲ್ಲಿ ದೇವರು ನಿರಾಕಾರ, ಸಾಕಾರನಲ್ಲ ಎಂಬ ಅಂಶ ಸ್ಪಷ್ಟಪಡುತ್ತದೆ.

೧೦

ಪ್ಲೇಟೋವಿನ ತಾತ್ತ್ವಿಕಚಿಂತನೆಯಲ್ಲಿ ಪ್ರಪಂಚ ತತ್ತ್ವವನ್ನು ಕುರಿತು ಇಲ್ಲಿ ಇನ್ನೂ ವಿವರವಾಗಿ ಚರ್ಚಿಸಬೇಕು. ವಿಮರ್ಶಾತ್ಮಕವಾಗಿ ಪರಿಶೀಲಿಸಿದಾಗ ಅವನು ಪ್ರಪಂಚ ತತ್ತ್ವದ ಬಗ್ಗೆ ಪೂರ್ಣವೂ ಸಮರ್ಪಕವೂ ಆದ ವಿವರಣೆಯನ್ನು ನೀಡಿಲ್ಲವೆಂದೇ ಹೇಳಬೇಕು. ಪ್ರಪಂಚವನ್ನು ಸಾರ್ವತ್ರಿಕಗಳ 'ತೋರಿಕೆ ಎಂದು ಹೇಳಿದ ಮಾತ್ರಕ್ಕೆ, ಪ್ರಪಂಚದ ಸಮರ್ಪಕ ವಿವರಣೆಯನ್ನು ನೀಡಿದಂತಾಗಲಿಲ್ಲ. ಏಕೆಂದರೆ ಅದು ಸಾರ್ವತ್ರಿಕಗಳ ತೋರಿಕೆಯಾದರೆ, 'ಏಕೆ' ತೋರುತ್ತದೆ 'ಹೇಗೆ' ತೋರುತ್ತದೆ ? ತೋರಿಕೆ ಏಕಿರಬೇಕು? ಎಂಬ ಪ್ರಶ್ನೆಗಳು ಸಹಜವಾಗಿಯೇ ಮೇಲಕ್ಕೇಳುತ್ತವೆ. ಈ ಪ್ರಶ್ನೆಗಳಿಗೆ ಬುದ್ಧಿಬದ್ಧವಾದ, ವೈಚಾರಿಕವಾದ ಉತ್ತರಗಳನ್ನು ಪ್ಲೇಟೋ ನೀಡಿಲ್ಲ, ಅವನದು ಒಂದು ರೀತಿಯ ಕಾವ್ಯಮಯ ಪೌರಾಣಿಕ ಹಾಗೂ ಕಾಲ್ಪನಿಕ ಉತ್ತರವಾಗಿದೆ. ತನ್ನ ಸಂವಾದವಾದ ಟಿಮೇಯಿಸ್ 'ನಲ್ಲಿ ಪ್ರಪಂಚೋತ್ಪತ್ತಿಯ ಬಗ್ಗೆ ಈ ರೀತಿಯ ವಿವರಣೆಯಿದೆ, ಪ್ರಪಂಚದ ವಸ್ತು ಪ್ರತ್ಯೇಕಗಳು ಪೂರ್ಣ ಸತ್ಯವಲ್ಲ; ಅವು 'ಅರೆಸತ್ಯ' 'ಅರೆಮಿಥ್ಯ'. ವಸ್ತುಗಳು 'ಅರ್ಧಸತ್ಯ' ಏಕೆಂದರೆ ಅವು ಸಂಪೂರ್ಣ 'ಸತ್' ತತ್ತ್ವಗಳಾದ ಸಾರ್ವತ್ರಿಕಗಳಲ್ಲಿ ಭಾಗವಹಿಸುತ್ತವೆ. ಅವು ಅರ್ಧ ಮಿಥ್ಯ ; ಏಕೆಂದರೆ ಸಂಪೂರ್ಣ 'ಅಸತ್' ತತ್ತ್ವದಲ್ಲಿ ಅವು ಪಾಲ್ಗೊಳ್ಳುತ್ತವೆ. ಆದುದರಿಂದ 'ಸಂಪೂರ್ಣ ಅಸತ್' ಎಂಬ ತತ್ತ್ವವೊಂದಿರಬೇಕು. ಅವನ್ನೇ ಪ್ಲೇಟೋ 'Matter' ಎಂದು ಕರೆಯುತ್ತಾನೆ. ಅದು ಯಾವ ಲಕ್ಷಣವನ್ನೂ ಹೊಂದಿರದ ನಿರ್ವಿಶೇಷ ನಿರೂಪ ದ್ರವ್ಯ.

'ಸತ್' ತತ್ತ್ವಗಳಾದ ಸಾರ್ವತ್ರಿಕಗಳು ಮತ್ತು 'ಅಸತ್' ತತ್ತ್ವವಾದ 'Matter' (ನಿರ್ವಿಶೇಷ ನಿರೂಪ ದ್ರವ್ಯ) ಗಳ ಸಮ್ಮಿಲನದಿಂದ ಪ್ರಪಂಚ, ಪ್ರಪಂಚದ ಪ್ರತ್ಯೇಕ ಪ್ರತ್ಯೇಕ ವಸ್ತುಗಳು ಉತ್ಪತ್ತಿಯಾಗುತ್ತವೆ. ಅಂದರೆ ಸಾರ್ವತ್ರಿಕಗಳನ್ನು, ನಿರ್ವಿಶೇಷ 'Matter'ನ ಮೇಲೆ ಅಚ್ಚೊತ್ತುವುದರ ಮೂಲಕ ಪ್ರತ್ಯೇಕ ಪ್ರತ್ಯೇಕ ಮೂರ್ತ ವಸ್ತುಗಳು ಹೊರಬರುತ್ತವೆ. ಆದರೆ ಈ ಸಮ್ಮಿಲನ, ಅಚ್ಚೊತ್ತಲ್ಪಡುವಿಕೆ ಹೇಗೆ ಸಾಧ್ಯವಾಗುತ್ತದೆ? ಸಾರ್ವತ್ರಿಕಗಳೇ ನಿರ್ವಿಶೇಷ 'Matter'ನಲ್ಲಿಗೆ ಸಂಚರಿಸಿ ತಮ್ಮ ಮುದ್ರೆಯನ್ನು ಅದರ ಮೇಲೆ ಒತ್ತುತ್ತವೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಪ್ಲೇಟೋವಿನ ಪ್ರಕಾರ ಸಾರ್ವತ್ರಿಕಗಳು ಚಲನರಹಿತವಾದವು, ಬದಲಾವಣೆರಹಿತವಾದವುಗಳಾಗಿವೆ. ನಿರ್ವಿಶೇಷ ನಿರಾಕಾರ 'Matter' ತಾನೇ ಸಾರ್ವತ್ರಿಕಗಳೆಡೆಗೆ ಧಾವಿಸಿ ಅವುಗಳ ಮುದ್ರೆಯನ್ನು ತನ್ನ ಮೇಲೆ ಹೊಂದುತ್ತದೆ ಎಂದೂ ಹೇಳಲಾಗುವುದಿಲ್ಲ. ಏಕೆಂದರೆ,

ಅವನ ಪ್ರಕಾರ, Matter ನಿರ್ಜೀವ ಜಡತತ್ವ. ಹಾಗಾದರೆ ಅವುಗಳ ಸಮ್ಮಿಲನ ಹೇಗೆ ಸಾಧ್ಯವಾಗುತ್ತದೆ? ಇಲ್ಲಿ ಇದ್ದಕ್ಕಿದ್ದಂತೆ ಪ್ಲೇಟೋ 'ದೇವರು' ಎಂಬ ತತ್ವವನ್ನು ಮುಂದಿಡುತ್ತಾನೆ. ದೇವರು, ನಿರ್ಜೀವ ನಿರೂಪ 'Matter'ನ ಮೇಲೆ ಸಾರ್ವತ್ರಿಕಗಳ ಮುದ್ರೆಯನ್ನು ಒತ್ತಿ ಮೊದಲು ವಿಶ್ವಾತ್ಮ ಅಥವಾ ಸೂತ್ರಾತ್ಮ (World-Soul) ವನ್ನು ಸೃಜಿಸುತ್ತಾನೆ. ಅದು ಅಭೌತಿಕವಾದರೂ ದೇಶಾತೀತವಲ್ಲ. ಶೂನ್ಯಾಕಾಶದಲ್ಲಿ ಅದು ಒಂದು ಒಲೆಯಂತೆ ಹರಡಿಕೊಳ್ಳುತ್ತದೆ. ದೇವರು ಅದನ್ನು ಎರಡಾಗಿ ವಿಭಜಿಸಿ, ಅಂತರ್ವೃತ್ತ, ಬಹಿರ್ವೃತ್ತಗಳನ್ನಾಗಿ ರೂಪಿಸುತ್ತಾನೆ. ಅಂತರ್ವೃತ್ತ ಮುಂದೆ ಗ್ರಹಗಳಾದರೆ, ಬಹಿರ್ವೃತ್ತ ನಕ್ಷತ್ರ ಲೋಕವಾಗಿ ಮಾರ್ಪಡುತ್ತದೆ. ನಿರೂಪ 'Matter'ನಿಂದ ದೇವರು ಚತುರ್ಭೂತಗಳನ್ನು ಪೂಜಿಸುತ್ತಾನೆ ಎಂದು ಪ್ಲೇಟೋ ಹೇಳುತ್ತಾನೆ.

ಈ ವಿವರಣೆ ಊಹಾತ್ಮಕವಾದ ಪೌರಾಣಿಕ, ಕಾವ್ಯಮಯ ದಂತಕತೆಯ ರೂಪಕವಲ್ಲದೆ ಬುದ್ಧಿಗೆ, ವಿಚಾರ ತರ್ಕಕ್ಕೆ ವಿಧೇಯವಾದ ವಾಸ್ತವ ವರ್ಣನೆಯಲ್ಲ. ಏನೇ ಆಗಲಿ, ಪ್ಲೇಟೋವಿನ ಚಿಂತನೆಯಲ್ಲಿ ಸೂತ್ರಾತ್ಮ (World-Soul) ಸಾರ್ವತ್ರಿಕಗಳಿಗೂ ಪ್ರಪಂಚಕ್ಕೂ ಸಂಬಂಧ ಏರ್ಪಡಿಸುವ ಸೇತುವೆಯಾಗಿದೆ. ಅದು ಅಮರವೂ ಚೇತನವೂ ಆದುದು. ಅದು ಪ್ರಪಂಚವನ್ನು ನಿಯಮಗಳಿಗನುಸಾರವಾಗಿ ಮುನ್ನಡೆಸುತ್ತದೆ. ಹಾಗೆಯೇ ಅದು ವಿಶ್ವದಲ್ಲಿ ಕಂಡುಬರುವ ಚಲನೆಯ ಮೂಲ ಕಾರಣವೂ ಆಗಿದೆ. ವಿಶ್ವಾತ್ಮನಿಂದ' ಎಲ್ಲೆಲ್ಲಿಯೂ ತುಂಬಿ ತುಳುಕುತ್ತಿರುವ ವಿಶ್ವ ಜೈವಿಕವಾದ ವಿಶ್ವವಾಗಿದೆ ಎಂದು ಪ್ಲೇಟೋ ಉದ್ಘೋಷಿಸುತ್ತಾನೆ.

೧೧

ಪ್ಲೇಟೋವಿನ ವಿಭಜಿತ ರೇಖೆಯ ದೃಷ್ಟಾಂತ
(Analogy of the Divided Line)

'ಅಭಿಮತ' (Opinion)ಕ್ಕೂ 'ಜ್ಞಾನ'ಕ್ಕೂ (Knowledge) ಭೇದವಿದೆಯೆಂದು ತೋರಿಸಲು ಹಾಗೂ ಜ್ಞಾನವನ್ನು ಹಂತಹಂತವಾಗಿ ಹೇಗೆ ಪಡೆಯಬಹುದೆಂಬುದನ್ನು ವಿವರಿಸಲು ಪ್ಲೇಟೋ 'ವಿಭಜಿತ ರೇಖೆಯ ದೃಷ್ಟಾಂತ'ವನ್ನು ಉಪಯೋಗಿಸಿಕೊಂಡಿದ್ದಾನೆ.[1] ವಸ್ತುಗಳೊಡನೆ ಇಂದ್ರಿಯ ಸಂಪರ್ಕವಾದಾಗ ಅಭಿಮತ ಮಾನವನಿಗೆ ಅನಾಯಾಸವಾಗಿ ಬರುವುದು. ಆದರೆ ಜ್ಞಾನವನ್ನು ಅರ್ಜಿಸಲು ತಕ್ಕಷ್ಟು ಶ್ರಮ ಅತ್ಯಾವಶ್ಯಕ.

ಪ್ಲೇಟೋವಿನ ಪ್ರಕಾರ ಅಜ್ಞಾನದಿಂದ ಜ್ಞಾನಕ್ಕೆ ಹೋಗಲು ಮುಖ್ಯವಾಗಿ ನಾಲ್ಕು ಸ್ತರಗಳುಂಟು :

(i) ಹುರುಳಿಲ್ಲದ ಕಲ್ಪನೆ ಮತ್ತು ಅನಿರ್ದಿಷ್ಟ ಊಹಾಪೋಹ (Vain imagination and wild guessing).

(ii) ದೃಢ ನಂಬಿಕೆ (assurance or confidence)

(iii) ವಿವೇಚನೆಯಿಂದ ಗ್ರಹಿಸುವುದು ಮತ್ತು ಅರ್ಥಮಾಡಿಕೊಳ್ಳುವುದು (Thinking through and understanding)

(iv) ತರ್ಕಪರಾಮರ್ಶೆ ಅಥವಾ ತತ್ವಮೀಮಾಂಸೆ (Dialectic).

ಮೊದಲನೆಯ ಹಂತ ಮಾನವನ ಮನಸ್ಸು, ಸತ್ಯ-ಭ್ರಮೆ, ಎಚ್ಚರ-ಕನಸು, ಸಾರ-ಅಸಾರ, ಬಿಂಬ-ಪ್ರತಿಬಿಂಬ ಮುಂತಾದವುಗಳ ನಡುವಿನ ಭೇದವನ್ನು ಗುರುತಿಸಲು ಅಸಮರ್ಥವಾಗಿರುವ ಸ್ಥಿತಿಯಾಗಿದೆ. ಮನಸ್ಸು ಯಾವ ಯಾವ ಸಂವೇದನೆಗಳು ಹೇಗೆ ಹೇಗೆ ಬರುತ್ತವೋ ಹಾಗೆ ಹಾಗೆಯೇ ಅವುಗಳನ್ನು ಸ್ವೀಕರಿಸುತ್ತದೆ. ಅವುಗಳನ್ನು ಮನಸ್ಸು ವಿಂಗಡಿಸಲಾಗದ ಹಾಗೂ ವ್ಯವಸ್ಥಾಬದ್ಧವಾಗಿ ಜೋಡಿಸಲಾಗದ ಸ್ಥಿತಿಯಾಗಿದೆ ಅದು.

ಅದರ ತರುವಾಯ ತಿಳಿಗೊಂಡ ಮನಸ್ಸು ಸತ್ಯ-ಮಿಥ್ಯ, ಸಾರ-ಅಸಾರ ಬಿಂಬ-ಪ್ರತಿಬಿಂಬ, ಎಚ್ಚರ-ಕನಸುಗಳ ನಡುವೆ ಹವ್ಯಾಸದಿಂದ, ಅಭ್ಯಾಸದಿಂದ ಭೇದವನ್ನುಂಟುಮಾಡಲು ಉಪಕ್ರಮಿಸುತ್ತದೆ. ಆದರೆ ಆ ಭೇದ 'ಹೇಗೆ' ಮತ್ತು 'ಏಕೆ' ಎಂಬುದರ ತಿಳುವಳಿಕೆ ಮನಸ್ಸಿಗಿನ್ನೂ ಬಂದಿರುವುದಿಲ್ಲ. ಅಭ್ಯಾಸ, ನಂಬಿಕೆಯ ಮೇಲೆ ಅದು ವಿಂಗಡನೆಯ ಕಾರ್ಯವನ್ನು ಮಾಡುತ್ತದೆ.


ಮೇಲೆ ಹೇಳಿದ ಎರಡು ಸ್ತರಗಳೂ 'ಅಭಿಮತ ಕ್ಷೇತ್ರಕ್ಕೆ' ಸಂಬಂಧಿಸಿದ್ದಾಗಿವೆ ಎಂದು ಪ್ಲೇಟೋ ಹೇಳುತ್ತಾನೆ. ಉಳಿದ ಮತ್ತೆರಡು ಸ್ತರಗಳು 'ಜ್ಞಾನ ಕ್ಷೇತ್ರಕ್ಕೆ' ಸಂಬಂಧಿಸಿದ್ದಾಗಿವೆ.

ಮೂರನೆಯ ಹಂತದಲ್ಲಿ ಎರಡನೆಯ ಸ್ತರದಲ್ಲಿ ರೂಪಗೊಂಡ ನಂಬಿಕೆಯನ್ನು 'ಏಕೆ' ಮತ್ತು 'ಹೇಗೆ' —ಇವುಗಳನ್ನು ಚಿಂತನ ಕ್ರಿಯೆಯಿಂದ ವಿವೇಚಿಸಿ ವಿವರಿಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಸತ್ಯ ಮಿಥ್ಯೆಯಿಂದ ಏಕೆ ಮತ್ತು ಹೇಗೆ ಭಿನ್ನವಾಗಿದೆ ಎಂಬುದನ್ನು ಬುದ್ಧಿಪೂರ್ವಕವಾಗಿ ವಿಚಾರ ವಿಮರ್ಶೆಯಿಂದ ತಿಳಿಯುವುದೇ ಮೂರನೆಯ ಹಂತ. ಮೂರನೆಯ ಹಂತಕ್ಕೆ ಕಾಲಿರಿಸಿದ ತಕ್ಷಣವೆ ಮನಸ್ಸು ಅಭಿಮತ ಕ್ಷೇತ್ರವನ್ನು ಬಿಟ್ಟು ಜ್ಞಾನಕ್ಷೇತ್ರವನ್ನು ಪ್ರವೇಶಿಸುತ್ತದೆ. ಈ ಹಂತದಲ್ಲಿ ಮನಸ್ಸು ಚಲನಾತ್ಮಕ ಅನೇಕವಾದದಿಂದ ಅಚಲನಾತ್ಮಕ ಏಕವಾದದ ಕಡೆಗೆ ಮುಂದುವರಿಯುವ ಪ್ರಯತ್ನವನ್ನು ಆರಂಭಿಸುತ್ತದೆ.

ಅಂತಿಮ ಹಂತದಲ್ಲಿ ಮನಸ್ಸು ಸಾಮಾನ್ಯಗಳು ಅಥವಾ ಸಾರ್ವತ್ರಿಕ (Universals or Ideas)ಗಳನ್ನು ಆವಿಷ್ಕರಿಸಿ ಅವುಗಳ ಅರಿವನ್ನು ಪಡೆಯುತ್ತದೆ. ಅವುಗಳೆಲ್ಲವುಗಳ ಮೂಲತತ್ವವಾದ ಪರಮಶ್ರೇಯ (The good) ವನ್ನು ಗ್ರಹಿಸುವುದರ ಮೂಲಕ ತತ್ವಜ್ಞಾನ (Philosophic wisdom)ವನ್ನು ಹೊಂದುತ್ತದೆ. ಇದು ಅತ್ಯಾವಶ್ಯಕವಾದುದು; ಏಕೆಂದರೆ ಸಾರ್ವತ್ರಿಕಗಳಲ್ಲಿ ಅತ್ಯುತ್ತಮವಾದುದನ್ನು ಗ್ರಹಿಸದೇ ಹೋದರೆ ಅವುಗಳ ಜ್ಞಾನವನ್ನು ಪಡೆಯಲಾಗುವುದಿಲ್ಲ. ಸಾರ್ವತ್ರಿಕಗಳ

ನಡುವೆ ಇರುವ ನಿರ್ದಿಷ್ಟ ಸಂಬಂಧವನು ಗುರುತಿಸಿ ಅವುಗಳನ್ನು ಸುವ್ಯವಸ್ಥಾಬದ್ಧವಾಗಿ ಜೋಡಿಸುವುದನ್ನೆ ತಥ್ಯಪರಾಮರ್ಶೆ ಅಥವಾ ತತ್ವಮೀಮಾಂಸೆ ಎಂದು ಪ್ಲೇಟೋ ಕರೆದಿದ್ದಾನೆ.

ಈ ಮೇಲೆ ಹೇಳಿದ ನಾಲ್ಕು ಹಂತಗಳನ್ನು ಈ ಕೆಳಗೆ ಕಂಡ ನಕ್ಷೆಯ ಮೂಲಕ ಸೂಕ್ಷ್ಮವಾಗಿ ನಿರ್ದೇಶಿಸಬಹುದು:



ಯಾವುದಾದರೂ ಒಂದು ಸರಳ ರೇಖೆ A B ಯನ್ನು ತೆಗೆದುಕೊಂಡು ಅದನ್ನು C ಬಿಂದುವಿನಲ್ಲಿ ಅಸಮವಾಗಿ ವಿಭಜಿಸಿ. CB ಮತ್ತು CA ಗಳನ್ನು ಸಮವಾಗಿ E ಮತ್ತು, D ಬಿಂದುಗಳಲ್ಲಿ ಪುನಃ ವಿಭಜಿಸಿ. ಈಗ ಈ ಕೆಳಗೆ ಕಂಡ ಅನುಪಾತಗಳು ಸಿದ್ಧಿಸುತ್ತವೆ.

CB : CA : : CE : EB : : CD : DA

CA— ಸಾರ್ವತ್ರಿಕಗಳು ಮತ್ತು ಅವುಗಳನ್ನು ಪಡೆಯುವ ಮಾರ್ಗವಾದ ಗಣಿತದ ನಿಷ್ಕೃಷ್ಟ ಜ್ಞಾನವನ್ನು ಸೂಚಿಸುತ್ತದೆ. (ಜ್ಞಾನ ಕ್ಷೇತ್ರ)

CB — ಇಂದ್ರಿಯ ಪ್ರಪಂಚ ಮತ್ತು ಅದನ್ನು ತಿಳಿಯುವ ಮಾರ್ಗವಾದ ಇಂದ್ರಿಯ ಸಂವೇದನೆಯನ್ನು ಸೂಚಿಸುತ್ತದೆ. (ಅಭಿಮತ ಕ್ಷೇತ್ರ)

CE — ಪ್ರಪಂಚದ ಮೂರ್ತ ಪ್ರತ್ಯೇಕ ಪ್ರತ್ಯೇಕ ವಸ್ತುಗಳನ್ನು ಸೂಚಿಸುತ್ತದೆ.

EB — ಪ್ರತ್ಯೇಕವಸ್ತುಗಳ ‘ ನಕಲುಗಳ ’ನ್ನು ಸೂಚಿಸುತ್ತದೆ.

CD — ಇಂದ್ರಿಯ ಪ್ರಪಂಚದ ಮತ್ತು ಸಾರ್ವತ್ರಿಕ ಪ್ರಪಂಚಗಳನ್ನು ಕೂಡಿಸುವ ಕೊಂಡಿಯಂತಿರುವ ‘ ನಿಷ್ಕೃಷ್ಟ ಗಣಿತ ಜ್ಞಾನ ’ ವನ್ನು ಸೂಚಿಸುತ್ತದೆ.

DA—ಸಾರ್ವತ್ರಿಕ ಲೋಕವನ್ನು ಪ್ರತಿನಿಧಿಸುತ್ತದೆ.

ಮೇಲೆ ಹೇಳಿದ ಅನುಪಾತಗಳು ಜ್ಞಾನವನ್ನು ಪಡೆಯುವ ಅನೇಕ ಕ್ರಿಯೆಗಳನ್ನು ಸೂಚಿಸುತ್ತವೆ.

ಎರಡು ಅಂಶಗಳನ್ನು ಸ್ಪಷ್ಟೀಕರಿಸಲು ಪ್ಲೇಟೋ ‘ ವಿಭಜಿತ ರೇಖೆಯ ದೃಷ್ಟಾಂತ ವನ್ನು ಉಪಯೋಗಿಸಿಕೊಂಡಿದಾನೆ:

(i) ನಕಲು (copies) ಗಳಾದ ವಸ್ತುಗಳು ಮೂಲವಾದ ಸಾರ್ವತ್ರಿಕ ಗಳೊಡನೆ ಯಾವ ಸಂಬಂಧವನ್ನು ಹೊಂದಿದೆ ಎಂಬುದನ್ನುತೋರಿಸಲು; ನಕಲುಗಳು ಹೇಗೆ ತಮ್ಮ ಅಸ್ತಿತ್ವಕ್ಕೋಸ್ಕರ ಮೂಲಗಳನ್ನು ಆಶ್ರಯಿಸಿಕೊಂಡಿವೆ ಎಂಬುದನ್ನು ಸ್ಪಷ್ಟೀ ಕರಿಸಲು; ಹಾಗೂ ನಕಲುಗಳು ಮೂಲಗಳಷ್ಟೋ ಸತ್ಯವಲ್ಲ ಎಂದು ತೋರಿಸಲು.

(ii) ನಕಲನ್ನು ಕುರಿತ ಒಬ್ಬನ ದೃಷ್ಟಿಯನ್ನು, ಮೂಲವನ್ನು ಕುರಿತ ಮತ್ತೊಬ್ಬನ ದೃಷ್ಟಿಯೊಡನೆ ಹೋಲಿಸಲು ನಕಲನ್ನು ವೀಕ್ಷಿಸುತ್ತಿರುವವನು ಅದರ ಸಲುವಾಗಿಯೇ ವೀಕ್ಷಿಸುತ್ತಿರಬಹುದು. ಇಲ್ಲವೆ ತನ್ಮೂಲಕ ಮೂಲದ ಸ್ವರೂಪವನ್ನು ತಿಳಿಯಲು ವೀಕ್ಷಿಸುತ್ತಿರಬಹುದು ಸಂಕ್ಷೇಪದಲ್ಲಿ ಹೇಳುವುದಾದರೆ, ನಕಲುಗಳಿಗೂ ಮೂಲಗಳಿಗೂ ಇರುವ ಸಂಬಂಧವನ್ನು ಇಂದ್ರಿಯ ಸಂವೇದನೆಯುಳ್ಳ ಪ್ರಪಂಚ ಮತ್ತು ಜ್ಞಾನ ಸ್ವರೂಪವಾದ ಸಾರ್ವತ್ರಿಕಗಳೊಡನೆ ಹೋಲಿಸಬಹುದೆಂಬುದನ್ನು ತೋರಿಸಲು.

ಪ್ರಪಂಚ ಕ್ಷಣ ಕ್ಷಣಕ್ಕೂ ಬದಲಾಯಿಸುವಂಥದೂ, ಸ್ವವಿರೋಧಗಳಿಂದ ತುಂಬಿ ತುಳುಕುವಂಥಮೂ ಆಗಿರುವುದರಿಂದ ಅದರ ಬಗ್ಗೆ ಜ್ಞಾನವನ್ನು ಪಡೆಯಲಾಗುವುದಿಲ್ಲ, ಕೇವಲ ಅಭಿಮತವನ್ನು ಮಾತ್ರ ಹೊಂದಬಹುದು ಎಂದು ಪ್ಲೇಟೋ ಪ್ರತಿಪಾದಿಸುತ್ತಾನೆ. ಈ ಅಂಶವನ್ನು ಗ್ರಹಿಸಿದ ಮೇಲೆ ಅವನ್ನು ತಿಳಿಯುವುದರಲ್ಲಿ ಹುರುಳಿಲ್ಲವೆಂದು ಅವನಿಗೆ ಮನದಟ್ಟಾಗುತ್ತದೆ. ಆಗ ಅವನು ಮೂಲವಾದ ಸಾರ್ವತ್ರಿಕವನ್ನು (ಪರಮಶ್ರೇಯ) ಗ್ರಹಿಸಲು ಸಾಕ್ಷಾತ್ಕರಿಸಿಕೊಳ್ಳಲು ಮುಂದಾಗುತ್ತಾನೆ. ಖಚಿತವೂ, ನಿಷ್ಕೃಷ್ಟವೂ ಆದ ಗಣಿತ ಜ್ಞಾನದಿಂದ ಪರಮಶ್ರೇಯ ಸಾವ್ರತ್ರಿಕವನ್ನು ಸಾಕ್ಷಾತ್ಕರಿಸಿಕೊಳ್ಳ ಬಹುದೆಂದು ಅವನು ಬೋಧಿಸುತ್ತಾನೆ.

೧೨

ವಿಭಜಿತ ರೇಖೆಯ ದೃಷ್ಟಾಂತವನ್ನಲ್ಲದೆ 'ಸೂರ್ಯ' (The sun) ಉಪಮೆಯನ್ನು ಹಾಗೂ 'ಗುಹೆ ದೃಷ್ಟಾಂತ' (Allegory of the cave)ವನ್ನೂ ಉಪಯೋಗಿಸಿಕೊಂಡಿದ್ದಾನೆ.

ಪರಮಶ್ರೇಯ (The good)ವನ್ನು ಸೂರ್ಯನಿಗೆ ಹೋಲಿಸಬಹುದು. ಹೇಗೆ ಸೂರ್ಯ–ಪ್ರಕಾಶ, ನೋಟ, ಎಲ್ಲವಸ್ತುಗಳ ಉತ್ಪತ್ತಿ, ಮತ್ತು, ವಿಕಾಸಕ್ಕೆ, ಹೀಗೆ ಇಡೀ ಜೀವನಕ್ಕೆ ಆಧಾರನಾಗಿರುವನೋ ಹಾಗೆ ಪರಮಶ್ರೇಯ ಇಡೀ ವಿಶ್ವದ ಮೂಲವೆಂದು ಹೇಳಬಹುದೆಂದು ಪ್ಲೇಟೋ ವಿಶ್ಲೇಷಿಸುತ್ತಾನೆ.

೧೩

'ಗುಹೆ ದೃಷ್ಟಾಂತ' ಮಾನವ ಹೇಗೆ ಅಜ್ಞಾನದಿಂದ ಜ್ಞಾನಕ್ಕೆ ಮುನ್ನಡೆಯುತ್ತಾನೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಪ್ಲೇಟೋವಿನ 'ಆದರ್ಶ ರಾಜ್ಯ' ಎಂಬ ಸಂವಾದದಲ್ಲಿ ಕಾಣಸಿಗುತ್ತದೆ2. ಒಂದು ಗುಹೆಯಿದೆ ಎಂದುಕೊಳ್ಳೋಣ. ಗುಹೆಯ ಬಾಗಿಲಿಗೆ ಮುಚ್ಚಳವೆಂಬಂತೆ ಬೆನ್ನುಗಳನ್ನು ಹಾಕಿಕೊಂಡು ಕೆಲವರು ಸೆರೆಯಾಳುಗಳಂತೆ ಕುಳಿತಿದ್ದಾರೆ. ಅವರ ದೃಷ್ಟಿ ತಾವು ಕುಳಿತಿರುವ ಗುಹೆಯ ಎದುರು ಗೋಡೆಯ ಕಡೆಗೇ ಸದಾ ಇರುವಂತೆ, ಅತ್ತ ಇತ್ತ ಅವರು ಹೊರಳಾಡದಂತೆ, ಭದ್ರವಾಗಿ ಅವರ ಕತ್ತು

ಮತ್ತು ಕೈಕಾಲುಗಳನ್ನು ಕಟ್ಟಿ ಬಂಧಿಸಿದ್ದಾರೆ ಎಂದು ಇಟ್ಟುಕೊಳ್ಳೋಣ. ಅವರ ಬೆನ್ನಿನ ಹಿಂದೆ (ಗುಹೆಯ ಬಾಗಿಲು) ಬೆಂಕಿ ಜ್ವಾಜ್ವಲ್ಯಮಾನವಾಗಿ ಉರಿಯುತ್ತಿದೆ ಎಂದು ಭಾವಿಸೋಣ. ಬೆಂಕಿಯ ಸುತ್ತಮುತ್ತ ಹರಿದಾಡುವ ವಸ್ತುಗಳ ನೆರಳುಗಳು (ಪ್ರತಿಬಿಂಬ) ಅವರು ನೆಟ್ಟದೃಷ್ಟಿಯಿಂದ ನೋಡುತ್ತಿರುವ ಕಣ್ಣೆದುರಿನ ಗೋಡೆಯ ಮೇಲೆ ಬೀಳುತ್ತವೆ. ಅವರು ಈ ನೆರಳುಗಳನ್ನು ನೋಡಿ ಅವೇ ಪರಮ ಸತ್ಯಗಳೆಂದು ತಿಳಿಯುತ್ತಾರೆ ಆಗಲೇ ಹೇಳಿದಂತೆ ಅವನನ್ನು ಬಿಗಿಯಾಗಿ ಬಂಧಿಸಿರುವುದರಿಂದ, ಅವರಿಗೆ ಬಾಹ್ಯ ಪ್ರಪಂಚದ ರೂಪ ಗಂಧವೇ ಇಲ್ಲ. ಅದೃಷ್ಟವಶಾತ್ ಅವರಲ್ಲಿ ಒಬ್ಬನು ಹೇಗೋ ಹೊರಗೆ ಬಂದು 'ವಾಸ್ತವ ಪ್ರಪಂಚ' ವನ್ನು ಅವಲೋಕಿಸಿ, 'ಸತ್ಯ' ವನ್ನು ತಿಳಿದು ಅವನ್ನು ಗುಹೆಯಲ್ಲಿರುವ ತನ್ನ ಮಿತ್ರರಿಗೆ ಹೇಳಿದರೆ ಅವರು ಅವನನ್ನು ಭ್ರಾಂತನೆಂದೂ, ಮರುಳನೆಂದೂ ಗೇಲಿಮಾಡಿ ಬಿದ್ದು ಬಿದ್ದು ನಗುತ್ತಾರೆ. ಹಾಗೆಯೇ ಇಂದ್ರಿಯ ಸಂವೇದನೆಯಲ್ಲಿ ಮುಳುಗಿ ಹೋದ ನಾವು ಪ್ರತ್ಯೇಕ ಪ್ರತ್ಯೇಕ ವಸ್ತುಗಳಿರುವ ಪ್ರಪಂಚವನ್ನು ಪರಮಸತ್ಯವೆಂದು ತಪ್ಪಾಗಿ ತಿಳಿದಿರುತ್ತೇವೆ. ಹೇಗೋ ಹೊರಗೆ ಬಂದ ಅವರು ಸತ್ಯವನ್ನು ನೋಡಿ ಮಿತ್ರನು ಹೇಳಿದ್ದು ಸರಿ ಎಂದು ತಿಳಿಯುತ್ತಾರೆ. ಕೊನೆಗೆ ಬೆಂಕಿಗಿಂತಲೂ ಪ್ರಕಾಶಮಾನವಾದ ನಭೋರತ್ನವಾದ ಸೂರ್ಯನನ್ನು ನೋಡಿ ಪರಮಸತ್ಯವನ್ನು ತಿಳಿಯುತ್ತಾರೆ. ಹಾಗೆಯೇ ಇಂದ್ರಿಯದೃಷ್ಟಿ ಎಂಬ ಪೊಟರೆಯಿಂದ ಹೊರಬಂದು ಸಾರ್ವತ್ರಿಕಗಳನ್ನು ಅರಿತು ಪರಮಶ್ರೇಯವನ್ನು ಸಾಕ್ಷಾತ್ಕರಿಸಿಕೊಂಡಾಗ ನಮಗೆ ತಿಳಿಯುತ್ತದೆ, ಇಂದ್ರಿಯ ಪ್ರಪಂಚ ಸ್ವತಃಸಿದ್ಧವಾದುದಲ್ಲ ; ಆದುದರಿಂದ ಅದು ಕೇವಲ ತೋರಿಕೆ ಎಂದು.

ಹೀಗೆ ಪರಮಶ್ರೇಯದ ಜ್ಞಾನವನ್ನು ಹೊಂದುವುದೆಂದರೇ ಸಕಲವನ್ನು ತಿಳಿದಂತೆ ಎಂದು ಈ ದೃಷ್ಟಾಂತದ ಮೂಲಕ ಪ್ಲೇಟೋ ಸಾರುತ್ತಾನೆ.

೧೪

ಆತ್ಮ ತತ್ವ

ವಿಶ್ವಾತ್ಮ ಅಥವಾ ಸೂತ್ರಾತ್ಮ (World-Soul)ವನಲ್ಲದೆ ಮಾನವ ಆತ್ಮವನ್ನೂ (Human-Soul) ಪ್ಲೇಟೋ ಪ್ರತಿಪಾದಿಸುತ್ತಾನೆ. ಅದು ಮಾನವನ ವೈಚಾರಿಕತೆಯ, ವಿವೇಚನೆಯ ಆಶ್ರಯ ಸ್ಥಾನವಾಗಿದೆ. ಅದು ಸಾರ್ವತ್ರಿಕಗಳು ಮತ್ತು ಪ್ರಪಂಚಗಳೆರಡರೊಡನೆಯೂ ಸಾಮ್ಯವನ್ನು ಹೊಂದಿದೆ. ಅದನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು :

(i) ವಿಚಾರಾತ್ಮಕ ಭಾಗ : ಇದು ಆತ್ಮದ ಬಹುಭಾಗವನ್ನು ಆಕ್ರಮಿಸಿಕೊಂಡಿದೆ. ಸಾರ್ವತ್ರಿಕಗಳನ್ನು ಗ್ರಹಿಸುವುದು ಈ ಭಾಗವೇ. ಅದು ಸರಳವೂ ಅವಿಭಾಜ್ಯವೂ ಆಗಿದೆ. ಆದುದರಿಂವ ಅದು ಅವಿನಾಶಿಯೂ ಅಮೃತವೂ ಆಗಿದೆ.

ಆತ್ಮನ ಎರಡನೆಯ ಭಾಗ ಅವಿಚಾರಾತ್ಮಕವಾದುದು. ಅದು ಮರ್ತ್ಯ. ಅದನ್ನು ಪುನಃ ಎರಡು ಉಪಭಾಗಗಳನ್ನಾಗಿ ಮಾಡಬಹುದು. (i) ಯೋಗ್ಯ ಅರ್ಧ (The

Noble Half) ಮತ್ತು (ii) ಅಯೋಗ್ಯ ಅರ್ಧ. (The ignoble Half) ಅಪ್ರತಿಮ ಶೌರ್ಯ, ಧೈರ್ಯ, ಸ್ಥೈರ್ಯ, ಪರಾಕ್ರಮ, ಘನತೆ, ಗೌರವ ಮುಂತಾದ ಉತ್ಕೃಷ್ಟ ಆಶಯುಗಳಿಗೆ ಭಾವಪೂರಿತ ಗುಣಗಳಿಗೆ ಯೋಗ್ಯ ಅರ್ಧ ಆಶ್ರಯ ಸ್ಥಾನವಾಗಿದೆ. ಇಂದ್ರಿಯಗಳ ಹಸಿವಿಗೆ ವಿಷಯ ವಾಸನೆಗೆ ಆಶ್ರಯವನ್ನು ನೀಡುವುದು ಅಯೋಗ್ಯ ಅರ್ಧ. ಮಾನವನ ಆತ್ಮನಲ್ಲಿ ಮಾತ್ರ ಈ ಮೂರು ಭಾಗಗಳಿವೆ. ಪ್ರಾಣಿಗಳಲ್ಲಿ ಕೊನೆಯ ಎರಡು ಭಾಗಗಳು ಮಾತ್ರ ಇವೆ. ಅವುಗಳಲ್ಲಿ ವೈಚಾರಿಕ ಭಾಗ ಇಲ್ಲ.

೧೫

ಆತ್ಮದ ಅಮರತ್ವ

ಪ್ಲೇಟೋವಿನ ಪ್ರಕಾರ ಆತ್ಮ ಅವಿನಾಶಿ, ಅಮರವಾದುದು. ಶರೀರಕ್ಕೆ ಹುಟ್ಟು ಸಾವು ಉಂಟು. ಆದರೆ ಆತ್ಮ ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಅದು ಆದಿ ಅಂತ್ಯರಹಿತವಾದುದು. ಪ್ಲೇಟೋ ತನ್ನ ಸಂವಾದಗಳಲ್ಲಿ ಆತ್ಮದ ಅಮರತ್ವವನ್ನು ವಾದಗಳ ಮೂಲಕ ಸಾಧಿಸಿದ್ದಾನೆ. ಆ ವಾದಗಳನ್ನು ಈಗ ಪರಿಶೀಲಿಸಬಹುದು.

(i) ಸಂಸ್ಮರಣವಾದ (Argument form anamnesis); ಈ ವಾದದ ಪ್ರಕಾರ ಎಲ್ಲಾ ಜ್ಞಾನವೂ ಸಂಸ್ಮರಣ ಅಥವಾ ನೆನಪು ಮಾತ್ರ. ಜ್ಞಾನ ಹೊಸದಾಗಿ ಉದಯಿಸುವುದಿಲ್ಲ. ಸಂಸ್ಮರಣ ಎಂದರೆ ಸಾರ್ವತ್ರಿಕಗಳ ಲೋಕದಲ್ಲಿ ಆತ್ಮ ಅಶರೀರ ಸ್ಥಿತಿಯಲ್ಲಿ ಅನುಭವಿಸಿದ ದಿವ್ಯಾನಂದವನ್ನು ದಿವ್ಯ ಜ್ಞಾನವನ್ನು ಈ ಪ್ರಪಂಚಕ್ಕೆ ಬಂದ ಮೇಲೆ ನೆನಪಿಸಿಕೊಳ್ಳುವುದು. ಆತ್ಮನ ಸಹಜ ಸ್ಥಿತಿ ಅಶರೀರ ಸ್ಥಿತಿ. ಅದು ಸಾರ್ವತ್ರಿಕಗಳ ಲೋಕದಲ್ಲಿ ವಿಹರಿಸುತ್ತಾ ದಿವ್ಯಾನಂದದಲ್ಲಿ ಮುಳುಗಿತ್ತು. ಈಗ ಸಶರೀರಿಯಾಗಿ ಈ ಪ್ರಪಂಚಕ್ಕೆ ಬಂದು ಪ್ರತ್ಯೇಕಗಳನ್ನು ವೀಕ್ಷಿಸಿದಾಗ ತಾನು ಜ್ಞಾನ ಚಕ್ಷುಸ್‌ನಿಂದ ಅನುಭವಿಸಿದ ಸಾರ್ವತ್ರಿಕಗಳ ಜ್ಞಾನ ಮರುಕಳಿಸುತ್ತದೆ. ಇಂದ್ರಿಯ ಪ್ರಪಂಚದ ಅನುಭವ ನಮಗೆ ಕೇವಲ ಅಭಿಮತವನ್ನು ನೀಡುವುದರಲ್ಲಿ ಸಮರ್ಥವಾಗಿದೆಯೇ ಹೊರತು 'ಜ್ಞಾನ'ವನ್ನು ನೀಡುವುದರಲ್ಲಲ್ಲ. ಏಕೆಂದರೆ ಇಂದ್ರಿಯ ಸಂವೇದನೆ ನಮಗೆ ಪ್ರತ್ಯೇಕ ಪ್ರತ್ಯೇಕ ಮೂರ್ತ ವಸ್ತುಗಳನ್ನು ತೋರಿಸುತ್ತದೆಯೇ ಹೊರತು ಸಾರ್ವತ್ರಿಕಗಳನ್ನಲ್ಲ. ಉದಾಹರಣೆಗೆ 'ಮಾನವತ್ವ' (The Universal Idea of Man) ವನ್ನು ನಾವು ಈ ಪ್ರಪಂಚದಲ್ಲಿ ನೋಡಿಲ್ಲ. ನಾವು ನೋಡಿರುವುದು ಎತ್ತರವಾಗಿರುವ ಆ ಮನುಷ್ಯ, ಕುಳ್ಳಗಿರುವ ಈ ಮನುಷ್ಯ, ಶ್ವೇತವರ್ಣದ ಈ ಮನುಷ್ಯ, ಎಣ್ಣೆಗಂಪಿನ ಆ ಮನುಷ್ಯ ಇತ್ಯಾದಿ. ಹಾಗಾದರೆ ನಾವು ಸಾರ್ವತ್ರಿಕಗಳ ಜ್ಞಾನವನ್ನು ಹೇಗೆ ಪಡೆಯುತ್ತೇವೆ? ಈ ಪ್ರಶ್ನೆಗೆ ಪ್ಲೇಟೋ ಸಂಸ್ಮರಣೆಯಿಂದ ಮಾತ್ರ ಎಂದು ಉತ್ತರಿಸುತ್ತಾನೆ.[3] ಅವನ ಪ್ರಕಾರ, ಬೋಧಕ ವಿದ್ಯಾರ್ಥಿಯ ಮನಸ್ಸಿನಲ್ಲಿ ಹೊಸದಾಗಿ ಜ್ಞಾನವನ್ನು ತುಂಬುವುದಿಲ್ಲ; ಆಗಲೇ ಅವನ ಮನಸ್ಸಿನಲ್ಲಿ ಮಸುಕು

ಮುಸುಕಾಗಿ ಅಸ್ಪಷ್ಟವಾಗಿರುವ ಜ್ಞಾನದ ಮೋಡಗಳನ್ನು ಚದುರಿಸುತ್ತಾನೆ ಅಷ್ಟೆ. ಆಗ ವಿದ್ಯಾರ್ಥಿಯಲ್ಲಿನ ಜ್ಞಾನ ತನಗೆ ತಾನೇ ಬೆಳಗುತ್ತದೆ. ಹೀಗೆ ಆತ್ಮಕ್ಕೆ ಹುಟ್ಟೂ ಇಲ್ಲ, ಸಾವೂ ಇಲ್ಲ, ವ್ಯವಹಾರದಲ್ಲಿ ಅದು ಸಶರೀರಿಯಾಗುವುದನ್ನ ಹುಟ್ಟು ಎನ್ನುವರು. ಅಶರೀರಯಾಗುವುದನ್ನೆ ಮರಣ ಎನ್ನುವುದು. ಆದರೆ ಹುಟ್ಟು ಸಾವು ಶರೀರಕ್ಕೆ, ಆತ್ಮನಿಗಲ್ಲ. ಆತ್ಮ ಅಮರ, ಅವಿನಾಶಿ ಎಂದು ಪ್ಲೇಟೋ ಸಾರುತ್ತಾನೆ.

ಇದಕ್ಕೆ ಉದಾಹರಣೆಯಾಗಿ 'ಮೆನೋ' ಸಂವಾದವನ್ನು ತೆಗೆದುಕೊಳ್ಳಬಹುದು. ಇಲ್ಲಿ ದನಕಾಯುವ ಗುಲಾಮ ಹುಡುಗ ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಗಣಿತದ ಸತ್ಯಗಳನ್ನು ಗುರ್ತಿಸುತ್ತಾನೆ. ಸಾಕ್ರಟೀಸ್ ಅವನ ಬಾಯಿಂದ ಕ್ಲಿಷ್ಟಕರವಾದ ಗಣಿತದ ಸೂತ್ರಗಳನ್ನು ಲೀಲಾಜಾಲವಾಗಿ ಹೇಳಿಸುತ್ತಾನೆ. ಇದರಿಂದ ಆತ್ಮ ಸಶರೀರಿಯಾಗಿ ಈ ಪ್ರಪಂಚಕ್ಕೆ ಬರುವುದಕ್ಕಿಂತ ಮುಂಚೆ ಗಣಿತ ಜ್ಞಾನವನ್ನು ಹೊಂದಿತ್ತೆಂದೂ, ಈಗ ಅದನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ ಅದನ್ನು ನೆನಪಿಗೆ ತಂದುಕೊಳ್ಳುತ್ತಿದೆಯೆಂದೂ ಅರ್ಥವಾಗುತ್ತದೆ. ಅಂದರೆ ಆತ್ಮ ಅಮರ ಎಂದು ಇದರಿಂದ ಸಿದ್ಧವಾಗುತ್ತದೆ. ಇದೇ ಸಂಸ್ಮರಣವಾದ.

(ii) ಸಾರವನ್ನು ಕುರಿತ ವಾದ (Argument from essence). ಆತ್ಮದ ಸಾರ ತಾನು ಸದಾ ಜೀವಿಸುವುದರಲ್ಲಿದೆ. ಅಂದರೆ ಅದು 'ಜೀವನ' ಎಂಬ ಸಾರ್ವತ್ರಿಕವಲ್ಲಿ ಪಾಲ್ಗೊಳ್ಳುತ್ತದೆ. ಅಂದರೆ ತಾರ್ಕಿಕವಾಗಿ ಅದು ಜೀವನದ ವಿರೋಧ ಕಲ್ಪನೆಯಾದ ಮರಣವನ್ನು ಹೊರತುಪಡಿಸಿದಂತಾಗುತ್ತದೆ. ಆದುದರಿಂದ ಆತ್ಮನಿಗೆ ಸಾವೇ ಇಲ್ಲ. ಅಂದರೆ ಅದು ಅಮರವೆಂದು ಸಿದ್ಧವಾಯಿತು.

(iii) ಸಚಲನಾತ್ಮಕ ವಾದ (Argument from self-motion) 'ಫೇಡ್ರಸ್' ಸಂವಾದದಲ್ಲಿ ಆತ್ಮದ ಅಮರತ್ವವನ್ನು ಹೀಗೆ ಸಾಧಿಸಲಾಗಿದೆ: ಆತ್ಮ ತನ್ನಿಂದ ತಾನು ಮಾತ್ರ ಚಲಿಸುತ್ತದೆ. ಅಂದರೆ ಅದು ಸಚಲನಾತ್ಮಕವಾದುದು. ಬೇರೆ ಯಾತ್ಯಾವುದರಿಂದಲೂ ಅದು ಚಲಿಸಲ್ಪಡುವುದಿಲ್ಲ. ಹಾಗೆಯೇ ತನ್ನ ಚಲನೆಗೆ ಯಾತ್ಯಾವುದೂ ತಡೆಯನ್ನು ಒಡ್ಡುವುದು ಸಾಧ್ಯವಿಲ್ಲ. ಆದುದರಿಂದ ಅದಕ್ಕೆ ಹುಟ್ಟಾಗಲೀ (ಪ್ರಾರಂಭವಾಗಲೀ) ಕೊನೆಯಾಗಲೀ ಇಲ್ಲವೆಂದು ಹೇಳಬೇಕಾಗುತ್ತದೆ. ಅಂದರೆ ಆತ್ಮ ಅಮರವೆಂದು ಸಿದ್ಧವಾಗುತ್ತದೆ.[4]

(iv) ಸಾಮ್ಯ ವಾದ (Argument from affinity) ಆತ್ಮ ಸಾರ್ವತ್ರಿಕಗಳೊಂದಿಗೆ ಎಲ್ಲ ರೀತಿಯಿಂದಲೂ ಸಾಮ್ಯವನ್ನು ಹೊಂದಿದೆ. ಸಾರ್ವತ್ರಿಕಗಳು ಅಮರವಾದುದರಿಂದ ಆತ್ಮವೂ ಅಮರವಾಗಿರಬೇಕೆಂದು ಈ ವಾದ ಸಾರುತ್ತದೆ.

ಅಲ್ಲದೆ ಆತ್ಮ ಶರೀರದ ಒಡೆಯ ಮತ್ತು ಅದಕ್ಕಿಂತಲೂ ಹೆಚ್ಚು ದೈವಿಕವಾದುದು. ದೇಹವನ್ನು ಸುಗಂಧ ದ್ರವ್ಯಗಳೊಡಗೂಡಿ [embalm] ಕೆಡದಂತೆ ಇಟ್ಟಾಗ ಅದು ಬಹಳ ಕಾಲ ಮುಂದುವರಿಯುವಂತೆ, ಆತ್ಮವು ಅದಕ್ಕಿಂತಲೂ ಹೆಚ್ಚು ಕಾಲ ಮುಂದುವರಿಯುತ್ತದೆಂದು ವಾದಿಸಬಹುದು. ಅಂದರೆ ಆತ್ಮ ಅಮರ ಎಂದು ಸಿದ್ಧವಾಗುತ್ತದೆ.

೧೬

ಈಗಾಗಲೇ ಹೇಳಿದಂತೆ, ಪ್ಲೇಟೋವಿನ ಪ್ರಕಾರ ನೀತಿಶಾಸ್ತ್ರಕ್ಕಿಂತ ಮಿಗಿಲಾದ ಬೇರೆ ಶಾಸ್ತ್ರವಿಲ್ಲ. ಅದರ ಗುರಿ ಸರ್ವರಿಗೂ ಹಿತವನ್ನುಂಟು ಮಾಡುವ ನೀತಿಯನ್ನು ಅಂದರೆ ಪರಮಶ್ರೇಯ (The Good) ವನ್ನು ಆವಿಷ್ಕರಿಸಿ, ಅದರ ಸ್ವರೂಪ, ರಚನೆಗಳನ್ನು ತಿಳಿದು ಕೊನೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುವುದಾಗಿದೆ. ಪರಮಶ್ರೇಯ ಎಂದರೆ ಇಂದ್ರಿಯ ಸುಖಭೋಗವಲ್ಲ, ವಿವೇಕಜ್ಞಾನ. ಪ್ರತ್ಯೇಕಗಳು ಅಲ್ಪವೂ, ನಶ್ವರವೂ, ಅನಿತ್ಯವೂ, ಸದಾ ಬದಲಾವಣೆ ಹೊಂದುವಂಥವೂ ಆಗಿರುವುದರಿಂದ ಅವುಗಳನ್ನು ಅರಸುವುದು ಅರ್ಥವಿಲ್ಲದ ಕಾರ್ಯ. ನಿಸ್ಸಾರವಾದುದನ್ನು ಮಾನವ ಎಂದು ಹುಡುಕಕೂಡದು. ನಿತ್ಯವೂ, ಶಾಶ್ವತವೂ ಚೈತನ್ಯಮಯವೂ ಆದ ಪರಮಶ್ರೇಯವನ್ನು ಅರಸುತ್ತಾ ಸದ್ಗುಣಿಯಾಗಿರಬೇಕು. ಸದ್ಗುಣಿಯೆನಿಸಿಕೊಂಡವನಲ್ಲಿ ಮುಖ್ಯವಾಗಿ ನಾಲ್ಕು ಗುಣಗಳಿರಬೇಕು. ಅವುಗಳೇ 'ವಿವೇಕ' ಧೈರ್ಯ (courage), ಆತ್ಮ ಸಂಯಮ (Temperance) ಮತ್ತು ನ್ಯಾಯಶೀಲತೆ (Justice). ಇವುಗಳನ್ನು ಪ್ಲೇಟೋ 'Cardinal Virtues' ಎಂದು ಕರೆದಿದ್ದಾನೆ.

'ವಿವೇಕ' ಎಂದರೆ ಪ್ರಪಂಚದ ವ್ಯವಹಾರಗಳಲ್ಲಿ, ಯೋಗ–ಭೋಗ ನಿತ್ಯ–ಅನಿತ್ಯ, ನೋವು–ನಲಿವುಗಳ ಅಂತರವನ್ನು ತಿಳಿಯುವುದು. ಅಂತಹ ತಿಳುವಳಿಕೆಯನ್ನು ಹೊಂದಿರುವವನೇ ವಿವೇಕಿ.

ವಿವೇಕವನ್ನು ಕಳೆದುಕೊಳ್ಳುವಂತೆ ಮಾಡುವ ಪಾಶವೀ ಪ್ರವೃತ್ತಿಗಳನ್ನು ಸದೆಬಡಿದು ಸತ್ ಸಂಕಲ್ಪವನ್ನು ಕಾರ್ಯಾಚರಣೆಗೆ ತರುವುದೇ ಧೈರ್ಯವೆನಿಸುವುದು. ಅಂದರೆ, ಸುಖದಲ್ಲಿಯೂ ದುಃಖದಲ್ಲಿಯೂ ಭಯಪಡತಕ್ಕ ವಿಚಾರಗಳು ಯಾವುವು, ಭಯಪಡಕೂಡದ ವಿಚಾರಗಳು ಯಾವುವು ಎಂಬುದನ್ನು ಕುರಿತು ವಿವೇಕ ನೀಡುವ ತೀರ್ಪನ್ನು ಕಾರ್ಯದಲ್ಲಿ ತೋರಿಸುವುದು. ಒಬ್ಬನಲ್ಲಿ ಯಾವನು ನೀತಿಗೆ, ಸತ್ಯಕ್ಕೆ 'ಹೆದರುತ್ತಾನೋ' ಅವನೇ ಧೈರ್ಯಶಾಲಿ !

ಆತ್ಮ ಸಂಯಮ ಎಂದರೆ ಮಿತ ಆಚಾರ. ಸುಖ–ದುಃಖ ಲಾಭ–ನಷ್ಟ, ನೋವು–ನಲಿವು, ಯೋಗ–ಭೋಗಗಳನ್ನು ಕಾಣುವ ಸಮರಸ, ಸಮಭಾವನೆಯ ದೃಷ್ಟಿಯೇ ಆತ್ಮ ಸಂಯಮ.

ನ್ಯಾಯ ಅಥವಾ ನ್ಯಾಯಶೀಲತೆ ಎಂದರೆ ವಿವೇಕ, ಧೈರ್ಯ, ಆತ್ಮ ಸಂಯಮಗಳ ಸುಮಧುರ ಸಾಮ್ಯಾವಸ್ಥೆ. ಇದೇ ಅವುಗಳೆಲ್ಲದರ ಸ್ಥಿತಿಗೆ ಅಂತಿಮ ಕಾರಣ. ಅದು ಅವುಗಳಲ್ಲಿ ಅಂತರ್ಗತವಾಗಿದ್ದು ಅವುಗಳನ್ನು ರಕ್ಷಿಸುವುದು. ಪ್ರತಿಯೊಬ್ಬನೂ ತನ್ನ ಶಕ್ತಿ ಸಾಮರ್ಥ್ಯ ಸ್ವಭಾವಗಳಿಗನುಗುಣವಾಗಿ ಕಾರ್ಯಮಾಡುವುದು, ಅಂದರೆ ಸ್ವಧರ್ಮಕ್ಕೆ ಅನುಸಾರವಾಗಿ ಕಾರ್ಯ ಮಾಡುವುದು ನ್ಯಾಯವೆನಿಸುವುದು.

೧೭

ಪ್ಲೇಟೋವಿನ ರಾಜನೀತಿಕುಶಲತೆ ಅವನಿಗೆ ವಿಶಿಷ್ಟವಾದುದು. ಸದ್ಗುಣವನ್ನು ಸಂಪಾದಿಸುವುದೇ ಮಾನವನ ಕರ್ತವ್ಯ. ತಾನು ಸದ್ಗುಣಿಯಾಗಬೇಕೆಂದು ಅಂತರ್ಯದ ಪ್ರೇರಣೆಯ ಜೊತೆಗೆ, ಅದು ಬಾಹ್ಯದಿಂದಲೂ ಪುಷ್ಟೀಕರಿಸಲ್ಪಟ್ಟಾಗ ಅವನು ತ್ವರಿತವಾಗಿ ಸದ್ಗುಣಿಯಾಗುವನಲ್ಲದೆ ಉಳಿದೆಲ್ಲರೂ ಸದ್ಗುಣಿಗಳಾಗುವಂತೆ ಪ್ರಭಾವ ಬೀರುತ್ತಾನೆ. ಹೀಗೆ ಹೊರಗಡೆಯಿಂದ ಕಾನೂನು ಕಟ್ಟಳೆಗಳ ಮೂಲಕ ಸದ್ಗುಣಿಯಾಗಲು ಪ್ರೇರಕ ಶಕ್ತಿಯನ್ನು ನೀಡುವ ವ್ಯವಸ್ಥೆಗೆ 'ರಾಜ್ಯ'ವೆಂದು ಹೆಸರು. ಪ್ಲೇಟೋವಿನ ಪ್ರಕಾರ ರಾಜ್ಯ ವಿರುವುದು ಸದ್ಗುಣವನ್ನು ಬೆಳಸಿ ಪೋಷಿಸುವುದಕ್ಕೇ. ಅದು ಮೂರುವರ್ಗದ ಜನರನ್ನು ಹೊಂದಿರಬೇಕೆಂದು ಪ್ರತಿಪಾದಿಸುತ್ತಾನೆ.

(i) ರಾಜ್ಯವನ್ನು ಆಳಲು ಸಾಮರ್ಥ್ಯವಿರುವ ವರ್ಗ (ರಾಜ್ಯ ಪರಿಪಾಲಕರು)
(ii) ಯೋಧರು
(iii) ವರ್ತಕರು (ವ್ಯವಸಾಯಗಾರರು, ಕಲಾ ವಿಶಾರದರು ಇತ್ಯಾದಿ)

ತತ್ವಜ್ಞರು (Philosophers) ಮಾತ್ರ ರಾಜ್ಯವನ್ನು ಆಳಲು ಸಮರ್ಥರು. ಏಕೆಂದರೆ ಅವರಲ್ಲಿ ಬುದ್ಧಿಬಲವಿದೆ, ಜ್ಞಾನ ಪ್ರಭೆಯಿದೆ. ಅವರು ವಿವೇಕಿಗಳು, ಕಾಮ ಕ್ರೋಧಾದಿ ಅರಿಷಡ್ವರ್ಗಗಳ ಮೇಲೆ ಪೂರ್ಣ ಪ್ರಭುತ್ವವನ್ನು ಹೊಂದಿರುವವರು. ಶ್ರೇಯ–ಪ್ರೇಯಗಳ ನಡುವಿನ ಬೇಧವನ್ನು ಅರಿತವರು ; ಚಿತ್ತ ಸ್ವಾಸ್ಥಿಗಳು, ಕಾರ್ಯ ತತ್ಪರರು, ನಿಗರ್ವಿಗಳು, ಆತ್ಮ ಸಂಯಮಿಗಳು ; ಎಲ್ಲ ಶಾಸ್ತ್ರಗಳ ಮೂಲವಾದ ನೀತಿ ಶಾಸ್ತ್ರದ ಸಾರವನ್ನು ಅರಿತವರು ; ಮಾನವ ಸ್ವಭಾವದ ಪ್ರತಿಯೊಂದು ಭಾಗದ ಹಾಗೂ ಸಮಗ್ರ ಆತ್ಮದ ಹಿತ ಯಾವುದೆಂದು ಚೆನ್ನಾಗಿ ತಿಳಿದವರು. ಇಂಥವರ ಕೈಯಲ್ಲಿ ರಾಜ್ಯದ ಆಡಳಿತ ಸುಗಮವಾಗಿ ನಡೆಯುತ್ತದೆ.

ಶೌರ್ಯವಂತರು, ಶಕ್ತರು, ಯುದ್ಧಕಲೆಯಲ್ಲಿ ನಿಪುಣರಾದವರು ಯೋಧರು. ಅವರು ರಾಜ್ಯವನ್ನು ಶತ್ರುಗಳಿಂದ ರಕ್ಷಿಸುತ್ತಾರೆ. ಆಂತರಿಕ ದಂಗೆಯನ್ನು ಅಡಗಿಸುತ್ತಾರೆ. ಇವರು ಪರಿಪಾಲಕರ ಆದೇಶಗಳನ್ನು ಶಿರಸಾವಹಿಸಿ ನಡೆಯುತ್ತಾರೆ.

ವರ್ತಕರು ಇತ್ಯಾದಿಗಳಿಗೆ ಪ್ರತ್ಯೇಕವಾದ ಕರ್ತವ್ಯ ಉಂಟು. ರಾಜ್ಯಕ್ಕೆ ಅತ್ಯಾವಶ್ಯಕವಾದ ಆಹಾರಸಾಮಗ್ರಿಗಳನ್ನು ಸಿದ್ಧಗೊಳಿಸುವುದು ಅವರ ಕರ್ತವ್ಯ. ಹೀಗೆ ಆಯಾಯ ವರ್ಗದವರು, ಅವರವರ ಸ್ವಭಾವ, ಸ್ವಧರ್ಮಗಳಿಗನುಗುಣವಾಗಿ ಅವರವರ ಕಾರ್ಯಗಳನ್ನು ಚಾಚೂ ತಪ್ಪದೆ ಮಾಡುವುದೇ ನ್ಯಾಯವೆನಿಸುವುದು. ಆಗಲೇ ರಾಜ್ಯದಲ್ಲಿ ಶಾಂತಿ ಸುಭಿಕ್ಷೆಗಳು ನೆಲಸುವುದು ಎಂದು "ಆದರ್ಶರಾಜ್ಯ" ಎಂಬ ತನ್ನ ಸಂವಾದದಲ್ಲಿ ಪ್ಲೇಟೋ ಪ್ರತಿಪಾದಿಸುತ್ತಾನೆ.

ಬಹುಜನರು ರಾಜ್ಯವಾಳಬೇಕೆಂಬ ಪ್ರಜಾಪ್ರಭುತ್ವದ ತತ್ವಕ್ಕೆ ಪ್ಲೇಟೋ ತನ್ನ ಅಸಮ್ಮತಿಯನ್ನು ಅಸಮಾಧಾನವನ್ನು ಸೂಚಿಸುತ್ತಾನೆ. ಅಂಥ ಆಡಳಿತದಲ್ಲಿ ಪ್ರತಿ

ಯೊಬ್ಬ ಪ್ರಜೆಯೂ ಸಹ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಹೊಂದಿರುವನಾದರೂ, ಆಳುವವರಿಗೆ ಅತ್ಯಾವಶ್ಯಕವಾಗಿ ಬೇಕಾದ ಶಿಕ್ಷಣ ಯೋಗ್ಯತೆ ಮತ್ತು ಸಾಮರ್ಥ್ಯಗಳನ್ನು ಹೊಂದಿರುವುದಿಲ್ಲವಾದ್ದರಿಂದ ರಾಜ್ಯದ ಆಡಳಿತದಲ್ಲಿ ಅಚಾತುರ್ಯಗಳಾಗುವ ಸಂಭವ ಉಂಟು. ಆದುದರಿಂದ ಇಡೀ ಮಾನವ ಕುಲದ ಪರಮಶ್ರೇಯಸ್ಸು ಏನೆಂಬುದನ್ನು ಅರಿತು ಸಾಕ್ಷಾತ್ಕರಿಸಿಕೊಂಡಿರುವ ಕೆಲವೇ ತತ್ವಜ್ಞರ ಶ್ರೀಮಂತ ಮತಿಯ ದ್ಯೋತನವನ್ನು (intellectual aristocracy) ಅನುಮೋದಿಸುತ್ತಾನೆ. ವಿವೇಕದ ತಾರತಮ್ಯನೆ ಯಾವ ಜ್ಞಾನ ಆಳಬೇಕು, ಶೌರ್ಯ ಅದರ ಅಧೀನದಲ್ಲಿರಬೇಕು. ಎಲ್ಲಿಯ ತನಕ ರಾಜ್ಯ ಅಂಥವರಿಂದ ಆಳಲ್ಪಡುವುದಿಲ್ಲವೋ ಅಲ್ಲಿಯ ತನಕ ರಾಜ್ಯಕ್ಕೆ ಕೇಡು ತಪ್ಪಿದ್ದಲ್ಲ ಎಂದು ಪ್ಲೇಟೋ ಸಾರುತ್ತಾನೆ.

ಪರಿಪಾಲಕರು ಸ್ವಾರ್ಥ ಎಳ್ಳಿನ ಮೊನೆಯಷ್ಟೂ ಹತ್ತಿರ ಸುಳಿಯದಂತೆ ಎಚ್ಚರ ವಹಿಸಬೇಕು. ಹೀಗಾಗಲು ಅವರು ಸ್ವಂತ ಆಸ್ತಿಯೆಂಬುದನ್ನಾಗಲೀ, ಅಷ್ಟೇಕೆ ಸ್ವಂತ ಸಂಸಾರ—ಹೆಂಡತಿ ಮಕ್ಕಳನ್ನೂ ಹೊಂದಿರಕೂಡದು. ಅವುಗಳಿಂದ ಸ್ವಾರ್ಥಭಾವ ಹೇಗೋ ನುಸುಳಿಕೊಂಡು ಬಂದುಬಿಡುತ್ತದೆ. ಮಕ್ಕಳ ಪೋಷಣೆ ರಾಜ್ಯಕ್ಕೆ ಸಂಬಂಧಿಸಿದುದು. ಶಿಕ್ಷಣ ಕಡ್ಡಾಯವಾಗಬೇಕು. ಆತ್ಮಾನಂದವನ್ನು ಹೆಚ್ಚಿಸಲು ಸಂಗೀತವನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು. ದೇಹಪುಷ್ಟಿಗೆ ಅಂಗಸಾಧನೆ ಕಡ್ಡಾಯವಾಗಬೇಕು. ಹೀಗೆ ಒಂದು ಆದರ್ಶರಾಜ್ಯವನ್ನು ಪ್ಲೇಟೋ ಚಿತ್ರಿಸಿದ್ದಾನೆ.

೧೮

ಪ್ಲೇಟೋವಿನ ತತ್ವಚಿಂತನೆಯನ್ನು ಕುರಿತ ವಿಮರ್ಶೆ

ವಿಮರ್ಶಾತ್ಮಕವಾಗಿ ಪ್ಲೇಟೋವಿನ ಚಿಂತನೆಯನ್ನು ಪರಿಶೀಲಿಸಿದಾಗ ಈ ಕೆಳಗಿನ ದೋಷಗಳು ಕಂಡುಬರುತ್ತವೆ:

(i) ಸಾರ್ವತ್ರಿಕಗಳು ಪ್ರತಿಯೊಂದೂ ಸ್ವತಃ ಸಿದ್ಧ ತತ್ವ, ಸ್ವಾವಲಂಬನೆಯ ತತ್ವ, ತನ್ನಷ್ಟಿಗೆ ತಾನೇ, ತನಗೋಸ್ಕರ ಅಸ್ತಿತ್ವದಲ್ಲಿರುವಂಥಾದ್ದು ಎಂದು ಹೇಳುತ್ತಾನೆ. ಆದರೆ ಕೊನೆಯಲ್ಲಿ ಪರಮಶ್ರೇಯ (The Good) ಮಾತ್ರ ಉತ್ಕೃಷ್ಟ ಸಾರ್ವತ್ರಿಕ ಎಂದು ಪ್ರತಿಪಾದಿಸುತ್ತಾನೆ. ಇಲ್ಲಿ ಸ್ವವಿರೋಧವಿದೆ. ಏಕೆಂದರೆ ಪರಮಶ್ರೇಯ ಒಂದೇ ಅತ್ಯುನ್ನತ ಸಾರ್ವತ್ರಿಕವಾದರೆ, ಉಳಿದೆಲ್ಲ ಸಾರ್ವತ್ರಿಕಗಳು ಅದರಿಂದ ಹೇಗೆ ಹೊರಬರುತ್ತವೆ ಎಂಬುದನ್ನು ಅವನು ತೋರಿಸಬೇಕು. ಆದರೆ ಅವನು ಹಾಗೆ ಮಾಡಿಲ್ಲ. ಸಮಂಜಸವಾದ ಯಾವ ವಿಶ್ಲೇಷಣೆಯನ್ನು ಮಾಡದೆ 'ಸುಮ್ಮನೆ' ಶ್ರೇಯ 'ಪರಮ ಸಾರ್ವತ್ರಿಕ' ಎಂದು ಹೇಳಿಬಿಟ್ಟಿದ್ದಾನೆ. ಇದು ನಿರ್ವಿಚಾರ (dogmatic) ವೇ ಸರಿ. ಶ್ರೇಯ ಒಂದೇ ಪರಮ ಸಾರ್ವತ್ರಿಕವೆಂದು ಒಪ್ಪಿದರೆ ಉಳಿದೆಲ್ಲ ಸಾರ್ವತ್ರಿಕಗಳು, ಸಾರ್ವತ್ರಿಕಗಳಾಗದೆ ಪ್ರತ್ಯೇಕಗಳ ಮಟ್ಟಕ್ಕೆ ಇಳಿದು ಬಿಡುತ್ತವೆ.

(ii) ಈಗಾಗಲೇ ಹೇಳಿದಂತೆ, ಪ್ರಪಂಚ ತತ್ತ್ವದ ಬಗ್ಗೆ ಅವನು ಸಮರ್ಪಕವೂ ಸಮಂಜಸವೂ ಆದ ವಿವರಣೆಯನ್ನು ನೀಡುವಲ್ಲಿ ಸಫಲನಾಗಿಲ್ಲ. ದೇವರು ಅವನ ತತ್ತ್ವ ಚಿಂತನೆಯಲ್ಲಿ ಹೊರಗಡೆಯಿಂದ ತಂದ ಯಾಂತ್ರಿಕ ತಂತ್ರವಾಗಿದೆ (Deus ex machina), ಭವ್ಯವೂ, ಅತ್ಯುತ್ತಮವೂ ಆದ ಅನಸ ಸಾರ್ವತ್ರಿಕವಾದ, ಪ್ರಪಂಚ ತತ್ತ್ವವನ್ನು ವಿವರಿಸಲಾಗದೆ ತಟಕ್ಕನೆ 'ಅಪಕ್ವದೈವಾಸ್ತಿಕ್ಯವಾದ' (Crude theism) ವಾಗಿ ಬಿಡುತ್ತದೆ. ಅವನ ಚಿಂತನೆಯಲ್ಲಿ ಸಾರ್ವತ್ರಿಕಗಳು ಮತ್ತು 'Matter' ಪ್ರತಿ ಸ್ಪರ್ಧಿಗಳಾಗಿ ಮುಖಾಮುಖಿ ನಿಲ್ಲುತ್ತವೆ.

(iii) ಸಾಮಾನ್ಯ ತಿಳುವಳಿಕೆಗೆ (common sense) ಆತನ ಸಾಮಾನ್ಯ ವಾದ ವಿರೋಧವಾದುದಾಗಿದೆ. ಉದಾಹರಣೆಗೆ ಪ್ರತ್ಯೇಕ ಮೂರ್ತ ಕುದುರೆ (ಅದು ಯಾವುದೇ ಬಣ್ಣದ್ದಾಗಿರಲಿ)ಗೆ ಅಸ್ತಿತ್ವ ಉಂಟು ಎಂದು ಸಾಮಾನ್ಯ ತಿಳುವಳಿಕೆ ಸಾರುತ್ತದೆ. ಆದರೆ ಪ್ಲೇಟೋ ಅದನ್ನು ತೋರಿಕೆ, ಸಾರ್ವತ್ರಿಕ–ಕುದುರೆಯ ನಕಲು ಎಂದು ಹೇಳುತ್ತಾನೆ. ಅಶ್ವವೊಂದನ್ನು ನಾವು ನೋಡಬಲ್ಲವೇ ಹೊರತು ಅಶ್ವತ್ವ ಎಂಬುದನ್ನು ಕಂಡಿಲ್ಲ ಎಂದು ಸಾಮಾನ್ಯ ತಿಳುವಳಿಕೆ ಘಂಟಾಘೋಷಿತವಾಗಿ ಹೇಳುತ್ತದೆ.

(iv] ಪ್ರಪಂಚ ಸದಾ ಬದಲಾವಣೆ ಹೊಂದುತ್ತಿರುವುದರಿಂದ ಅದನ್ನು ಕುರಿತ ಜ್ಞಾನ ಸಾಧ್ಯವಿಲ್ಲ ; ಜ್ಞಾನ ಎನ್ನುವುದು ಸಾಧ್ಯವಾಗುವುದಾದರೆ ಅದು ಸಾರ್ವತ್ರಿಕಗಳನ್ನು ಕುರಿತು ಮಾತ್ರ ಎಂದು ಪ್ಲೇಟೋ ಪ್ರತಿಪಾದಿಸುತ್ತಾನೆ. ಆಧುನಿಕ ವಿಜ್ಞಾನ ಈ ನಿಲುವನ್ನು ಪ್ರಶ್ನಿಸುತ್ತದೆ. ಚರಾಚರ ವಸ್ತುಗಳೆರಡರ ಜ್ಞಾನವೂ ಸಾಧ್ಯವೆಂದು ಅದು ಪ್ರತಿಪಾದಿಸುತ್ತದೆ.

೧೯

ಈ ದೋಷಗಳು ಇದ್ದರೂ, ಅವನ ಚಿಂತನೆಯಲ್ಲಿ ಗುಣಾಂಶಗಳು ಇಲ್ಲದಿಲ್ಲ. ಪ್ಲೇಟೋವನ್ನು 'ಧ್ಯೇಯವಾದ' ಅಥವಾ 'ಆದರ್ಶವಾದ' ಅಥವಾ 'ಚಿತ್ಪ್ರಧಾನವಾದ' (Idealism)ದ ಪಿತಾಮಹಾನೆನ್ನಬಹುದು. ಪರಿಕಲ್ಪನೆಯೇ. ಧ್ಯೇಯವೇ ಆದರ್ಶವೇ ಅಂತಿಮ ಸತ್ಯ. ಅದು ಜ್ಞಾನಸ್ವರೂಪವುಳ್ಳದ್ದು. ವಿಚಾರವೇ ವಿವೇಚನೆಯೇ ಮೂಲ ಭೂತ ಸತ್ಯ ; ವಸ್ತು, ಅಸ್ವತಂತ್ರ ತತ್ತ್ವ, ಎರವಲು ತತ್ತ್ವ ಪರಾವಲಂಬಿ—ಇದು ಧ್ಯೇಯ ವಾದದ ಸಾರ. ಪ್ಲೇಟೋವಿಗೆ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ವಿದ್ದರೆ ಅದು ಅವನು 'ಧ್ಯೇಯವಾದ'ದ ಸಂಸ್ಥಾಪಕನೂ ಪೋಷಕನೂ ಆಗಿರುವುದರಿಂದ ಪಾಶ್ಚಾತ್ಯ ತತ್ತ್ವಶಾಸ್ತ್ರದ ಮೇಲೆ ಅವನು ಎಷ್ಟರಮಟ್ಟಿಗೆ ಪ್ರಭಾವ ಬೀರಿದ್ದಾನೆಂಬುದನ್ನು ಎ. ಎನ್. ವೈಟ್‌ಹೆಡ್ ಬಹಳ ಚೆನ್ನಾಗಿ ಹೀಗೆ ಹೇಳಿದ್ದಾನೆ : 'ಪಾಶ್ಚಾತ್ಯ ತತ್ತ್ವಶಾಸ್ತ್ರವೆಲ್ಲಾ ಪ್ಲೇಟೋವಿನ ಚಿಂತನೆಯ ಮೇಲೆ ಬರೆದ ಒಂದು ಟಿಪ್ಪಣಿ'.

ಅರಿಸ್ಟಾಟಲ್

೨೦

ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಪ್ಲೇಟೋವಿನಷ್ಟೇ ಮಹತ್ವವುಳ್ಳ ಗ್ರೀಕ್ ಚಿಂತಕನೆಂದರೆ ಅರಿಸ್ಟಾಟಲ್ (ಸುಮಾರು ಕ್ರಿ.ಪೂ. 384–ಕ್ರಿ.ಪೂ. 322). ಪಾಶ್ಚಾತ್ಯರು ಹುಟ್ಟುವಾಗಲೇ, ಪ್ಲೇಟೋವಿನ ಅನುಯಾಯಿಯಾಗಿ ಇಲ್ಲವೆ ಅರಿಸ್ಟಾಟಲನ ಅನುಯಾಯಿಯಾಗಿರುತ್ತಾರೆ ಎಂದು ಹೇಳುವಷ್ಟು ಇಬ್ಬರೂ ಪ್ರಭಾವೀ ವ್ಯಕ್ತಿಗಳಾಗಿದ್ದಾರೆ. ಜಗತ್ತು ಕಂಡಿರುವ ಮಹಾನ್ ತಾರ್ಕಿಕ ಶ್ರೇಷ್ಠರಲ್ಲಿ ಅರಿಸ್ಟಾಟಲ್ ಒಬ್ಬನಾಗಿದ್ದಾನೆ. ಅವನು ಅದ್ವಿತೀಯ ನೀತಿಶಾಸ್ತ್ರಜ್ಞನೂ ಆಗಿದ್ದನು. ಅವನು ಬರೆದ 'ನೈಕೋ ಮ್ಯಾಕಿಯನ್ ನೀತಿಶಾಸ್ತ್ರ' ಇಂದಿಗೂ ಬಹಳ ಪ್ರಭಾವಪೂರ್ಣ ಗ್ರಂಥವಾಗಿದೆ. ಅವರ ಪ್ರತಿಪಾದನೆ ಕಾಲಪರೀಕ್ಷೆಯನ್ನು ಎದುರಿಸಿ ಜಯಶೀಲವಾಗಿದೆ. ಇಂದಿನ ಪ್ರಸಿದ್ಧ ನೀತಿಶಾಸ್ತ್ರ ಗ್ರಂಥಗಳಲ್ಲಿ ಅವರ ಪ್ರತಿಧ್ವನಿಯನ್ನು ಕಾಣಬಹುದಾಗಿದೆ.

ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಗಣಿತಶಾಸ್ತ್ರವನ್ನುಳಿದು ಉಳಿದ ಎಲ್ಲಾ ಕ್ಷೇತ್ರಗಳಲ್ಲಿಯೂ ಅವನು ಪರಿಣತಿಯನ್ನು ಹೊಂದಿದ್ದನು. ರಸಾಯನ ಶಾಸ್ತ್ರ, ವಿಶ್ವಸೃಷ್ಟಿಶಾಸ್ತ್ರ (cosmology), ಯಂತ್ರಶಾಸ್ತ್ರಗಳಲ್ಲಿ ಅವನು ಬಹುಮುಖ್ಯವಾದ ವೈಜ್ಞಾನಿಕ ಊಹೆಗಳನ್ನು ಮಾಡಿದ್ದನು. ಅವನು ಶ್ರೇಷ್ಠ ಜೀವಶಾಸ್ತ್ರಜ್ಞನಾಗಿದ್ದನು. ಜೀವಶಾಸ್ತ್ರದ ಮೇಲಿನ ಅವನ ಲೇಖನಗಳಿಂದ ವಿಕಾಸವಾದದ ಜನಕನಾದ ಡಾರ್ವಿನ್ ಸ್ಫೂರ್ತಿಯನ್ನೂ, ಸಹಾಯವನ್ನೂ ಪಡೆದಿದ್ದನು. ಪ್ರಾಣಿಶಾಸ್ತ್ರದಲ್ಲೂ ಅರಿಸ್ಟಾಟಲನಿಗೆ ತಣಿಸುದ ಕುತೂಹಲವಿತ್ತು. ಹೀಗೆ ಅವನು ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಅವನು ತತ್ವಜ್ಞನಷ್ಟೇ ಅಲ್ಲದೆ ಸಕಲರಂಗಗಳಲ್ಲಿಯೂ ನಿಷ್ಣಾತನಾಗಿದ್ದನು. ಇಡೀ ಪ್ರಪಂಚವನ್ನು ತನ್ನ ದಾಳಿಯಿಂದ ನಡುಗಿಸಿ ಪ್ರಪಂಚದ ಒಡೆಯನಾಗಬೇಕೆಂಬ ಮಹದಾಸೆಯನ್ನು ಹೊಂದಿದ್ದ ಅಲೆಕ್ಸಾಂಡರ್ ಮಹಾಶಯ ಅರಿಸ್ಟಾಟಲನ ಶಿಷ್ಯನಾಗಿದ್ದನು.

ಅರಿಸ್ಟಾಟಲ್ ಪ್ಲೇಟೋವಿನ ಶಿಷ್ಯ. ಸಾಕ್ರಟೀಸನ ಪರಮಶಿಷ್ಯ. ಅವನು 28 ವರ್ಷಗಳ ಕಾಲ ಪ್ಲೇಟೋವಿನ ವಿದ್ಯಾರ್ಥಿಯಾಗಿದ್ದನು. ಅವನು ಸ್ವತಂತ್ರ ಚಿಂತನ ಶೀಲ, ಅವನದು ವಿಶೇಷತಃ ವಿಜ್ಞಾನಿಯ ಸ್ಫೂರ್ತಿ. ಅವನು ಎಲ್ಲ ಸಮಸ್ಯೆಗಳನ್ನೂ ವೈಜ್ಞಾನಿಕ ದೃಷ್ಟಿಯಿಂದ ನೋಡುತ್ತಿದ್ದನು. ಅವನು ಎಲ್ಲರ ಆದರಕ್ಕೂ ಪಾತ್ರನಾಗಿರುವುದಕ್ಕೆ ಕಾರಣ ಬಹುಶಃ ಈ ಅಂಶವೇ. ಅವನಿಗೆ ಮಾನವನ ವಿಚಾರ ಬುದ್ಧಿಯಲ್ಲಿ ಅಚಲವಾದ ಶ್ರದ್ಧೆ ಹಾಗೂ ಗೌರವವಿತ್ತು. ಅವನು ವಸ್ತುಸ್ಥಿತಿವಾದಿ. ಪರಮ ಶ್ರೇಯ ಯಾವುದೆಂದು ತಿಳಿಯುವುದಕ್ಕಿಂತಲೂ ಪರಮ ಸತ್ಯ ಯಾವುದೆಂದು ಕಂಡು ಹಿಡಿಯುವುದು ಮುಖ್ಯವೆಂದು ನಂಬಿದ್ದನು. "ದಿ ಲಿಸಿಯಮ್" ಎಂಬ ಶಾಲೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪರಮ ಸತ್ಯವನ್ನು ಬೋಧಿಸಲು ಪ್ರಾರಂಭ

ಮಾಡಿವನು. ಮಧ್ಯಕಾಲೀನ ಚಿಂತಕರು ಹಾಗೂ 17ನೇ ಶತಮಾನದ ತತ್ವ ಚಿಂತಕರು ಅವನಿಂದ ವಿಶೇಷವಾಗಿ ಪ್ರಭಾವಿತರಾಗಿದ್ದಾರೆ.

೨೧

ಅರಿಸ್ಟಾಟಲ್ ವಸ್ತುಸಂಗತಿಗಳಲ್ಲಿ (facts) ಅನುರಾಗವುಳ್ಳವನಾಗಿದ್ದನು. ಇಂದ್ರಿಯ ಪ್ರಪಂಚವನ್ನು ಪ್ಲೇಟೋವಿನಂತೆ ಅವನು ತುಚ್ಛೀಕರಿಸಲಿಲ್ಲ; ಅದರ ಮೇಲೆ ದ್ವೇಷವನ್ನು ಕಾರಲಿಲ್ಲ; ಅದನ್ನು ಹೀಯಾಳಿಸಲಿಲ್ಲ. ತನ್ನ ಗುರುವಿನ ನಿಲುವನ್ನು ಅವನು ಒಪ್ಪಿಕೊಳ್ಳಲಿಲ್ಲ. ಪ್ಲೇಟೋ ಭೌತಿಕ ಪ್ರಪಂಚವನ್ನು ಅರಿಯಲಾರದೆ ಹೋದ. ಆದರೆ ಭೌತಿಕ ಪ್ರಪಂಚದ ಪ್ರತ್ಯೇಕ ವಸ್ತುಗಳಲ್ಲಿ ಅರಿಸ್ಟಾಟಲನಿಗೆ ಎಲ್ಲಿಲ್ಲದ ವಿಶ್ವಾಸ. ಅವುಗಳ ಜ್ಞಾನವನ್ನು ಪಡೆಯುವುದೇ ಸಮ್ಯಕ್‌ಜ್ಞಾನವೆನಿಸುವುದು ಪ್ಲೇಟೋ ತನಗೆ ಪ್ರಿಯನೆಂದೂ ಆದರೆ ಸತ್ಯ 'ಪರಮಪ್ರಿಯ'ವೆಂದೂ ಅರಿಸ್ಟಾಟಲ್ ಹೇಳುತ್ತಾನೆ. ಅವನು ತನ್ನ ತತ್ವಚಿಂತನೆಯನ್ನು ಪ್ಲೇಟೋವಿನ 'ಸಾರ್ವತ್ರಿಕ ಸಿದ್ಧಾಂತವನ್ನು ಈ ಕೆಳಗೆ ಕಂಡಂತೆ ಖಂಡಿಸುವುದರ ಮೂಲಕ ಪ್ರಾರಂಭಿಸುತ್ತಾನೆ:

(i) ಪ್ಲೇಟೋ ಜಗತ್ ತತ್ವವನ್ನು ಸಮಂಜಸವಾಗಿ ಹಾಗೂ ಸಕಾರಣವಾಗಿ ವಿವರಿಸಿಲ್ಲ. ತತ್ವಶಾಸ್ತ್ರದ ಮೂಲಸಮಸ್ಯೆ, ಜಗತ್ತು ಏಕಿದೆ ಮತ್ತು ಹೇಗೆ ಬಂದಿದೆ, ಅದರ ಅಂತಿಮಯಾತ್ರೆ ಎತ್ತ ಎಂದು ವಿವರಿಸುವುದು. ಶ್ವೇತವರ್ಣ ಇದೆ ಎಂದು ಒಪ್ಪಬಹುದು. ಆದರೆ ಅದರಿಂದ ಬಿಳುಪಾದ ವಸ್ತುಗಳು ಹೊರಬರುತ್ತವೆ ಎಂದು ಹೇಗೆ ಒಪ್ಪುವುದು? ಪ್ಲೇಟೋ ಇವುಗಳಾವುದನ್ನೂ ಸಕಾರಣವಾಗಿ ವಿವರಿಸದೆ, ತೋರಿಕೆಗಳೆಂದು ಮಾತ್ರ ಹೇಳಿ ಪಲಾಯನ ಸಿದ್ಧಾಂತಿಯಾಗಿದ್ದಾನೆಂದು ಅರಿಸ್ಟಾಟಲ್ ಆರೋಪಿಸುತ್ತಾನೆ.

(2) ಸಾರ್ವತ್ರಿಕಗಳು ಮತ್ತು ಪ್ರತ್ಯೇಕಗಳು—ಇವುಗಳ ನಡುವಿನ ಸಂಬಂಧವನ್ನು 'ಪಾಲ್ಗೊಳ್ಳುವಿಕೆ', 'ಅನುಕರಣೆ' ಎಂದು ಪ್ಲೇಟೋ ಹೇಳುತ್ತಾನೆ ಇದು ಸಮರ್ಪಕವಾದ ವಿವರಣೆಯಲ್ಲ. ಏಕೆಂದರೆ 'ಪಾಲ್ಗೊಳ್ಳುವಿಕೆ' 'ಅನುಕರಣೆ' ಎಂದರೇನು ಎಂಬ ಪ್ರಶ್ನೆ ತಕ್ಷಣವೇ ತಲೆಯೆತ್ತುತ್ತದೆ. ಇದಕ್ಕೆ ಪ್ಲೇಟೋವಿನಲ್ಲಿ ಸಕಾರಣವಾದ ಉತ್ತರವಿಲ್ಲ. ಅವನದು ಒಂದು ರೀತಿಯ ಕಾವ್ಯಮಯ, ಊಹನಾತ್ಮಕ ಅನಿಸಿಕೆಯಾಗಿದೆ ಎಂದು ಅರಿಸ್ಟಾಟಲ್ ವಿಮರ್ಶಿಸುತ್ತಾನೆ.

(3) ವಿಶ್ವದಲ್ಲಿರುವ ಚಲನೆಯನ್ನು, ಬದಲಾವಣೆಯನ್ನು ಸಮರ್ಪಕವಾಗಿ ವಿವರಿಸುವಲ್ಲಿ ಪ್ಲೇಟೋ ಸೋತಿದ್ದಾನೆ. ಅಂತಿಮಸತ್ಯಗಳಾದ ಸಾರ್ವತ್ರಿಕಗಳು ಚಲನರಹಿತವಾದವು, ಅಪರಿಣಾಮಿ ಎಂದು ಒಪ್ಪುವ ಪ್ಲೇಟೋ, ಅವುಗಳ ನಕಲು ಆದ ವಿಶ್ವವೂ ಅಚಲ, ಅಪರಿಣಾಮಿ ಎಂದು ಅವಶ್ಯವಾಗಿ ಒಪ್ಪಬೇಕು. ಆದರೆ ವಸ್ತುಸ್ಥಿತಿಯೇ ಬೇರೆ. ಜಗತ್ತು ಚಲನಶಕ್ತಿಯಿಂದ ಬದಲಾವಣೆಯಿಂದ, ಗತಿಯಿಂದ, ಜೀವರಸದಿಂದ ತುಂಬಿ ತುಳುಕುತ್ತಿದೆ. ಜಗತ್ತಿನಲ್ಲಿ ವಸ್ತುಗಳು ಜನ್ಮ ತಾಳಿ, ಬದಲಾವಣೆ

ಹೊಂದುತ್ತಿರುತ್ತವೆ. ಇದು ಹೇಗೆ ಎಂಬುವನ್ನು ಪ್ಲೇಟೋ ವಿವರಿಸಿಯೇ ಇಲ್ಲ ಎಂದು ಅರಿಸ್ಟಾಟಲ್ ಆರೋಪಿಸುತ್ತಾನೆ.

(4) ಪ್ರತ್ಯೇಕ ವಸ್ತುಗಳು ಸಾರ್ವತ್ರಿಕಗಳ ನಕಲು (ತದ್ರೂಪ) ಎಂದು ಪ್ಲೇಟೋ ಹೇಳುವುದು ಸರಿಯಲ್ಲ. ಸಾರ್ವತ್ರಿಕಗಳು ಅಥವಾ 'ಐಡಿಯಾ'ಗಳೇ ಪ್ರತ್ಯೇಕ ವಸ್ತುಗಳ ನಕಲು ಎಂದು ಹೇಳಬೇಕು. ಐಡಿಯಾಗಳು ಇಂದ್ರಿಯಗಳಿಗೆ ಅಗೋಚರವಾದವುಗಳು (non-sensuous) ಎಂದು ಪ್ಲೇಟೋ ಹೇಳುತ್ತಾನೆ. ಅದು ತಪ್ಪು. ಅವು ಇಂದ್ರಿಯ ಗೋಚರ (sensuous). 'ಅಶ್ವಕ್ಕೂ' ಆದರ 'ಐಡಿಯಾ'ಕ್ಕೂ ಅಂತಹ ಭೇದವೇನೂ ಇಲ್ಲ ಎಂದು ಅರಿಸ್ಟಾಟಲ್ ಹೇಳುತ್ತಾನೆ.

(5) 'ತೃತೀಯ ಮಾನವ' (Argument of the third Man) ಎಂಬ ವಾದದ ಮೂಲಕವೂ, ಅರಿಸ್ಟಾಟಲ್ ಪ್ಲೇಟೋವಿನ 'ಸಾಮಾನ್ಯ ಸಿದ್ಧಾಂತ'ವನ್ನು ಖಂಡಿಸುತ್ತಾನೆ. ಅನೇಕ ವಸ್ತುಗಳಲ್ಲಿ ಸಮಾನವಾಗಿರುವ ಅಂಶವನ್ನು ಪ್ಲೇಟೋ 'ಐಡಿಯಾ' ಎಂದು ಕರೆದಿದ್ದಾನೆ. ಸಮಾನ ಅಂಶ ಎಲ್ಲೆಲ್ಲಿ ಇರುತ್ತದೋ ಅಲ್ಲಲ್ಲಿ ಒಂದೊಂದು ಸಾಮಾನ್ಯ ಅಥವಾ 'ಐಡಿಯಾ' ಇರಬೇಕು. ಉದಾಹರಣೆಗೆ 'ಮಾನವತ್ವ' ಎಂಬುದು ಎಲ್ಲ ಮಾನವರಿಗೂ ಸಮಾನವಾಗಿರುವ ಅಂಶ. ಈ 'ಮಾನವ ಐಡಿಯಾ'ಕ್ಕೂ ಹಾಗೂ ಪ್ರತ್ಯೇಕ ಮಾನವನಿಗೂ ಸಮಾನವಾದ ಅಂಶವಿದೆ. ಇದನ್ನು ವಿವರಿಸಲು ತೃತೀಯ 'ಮಾನವ ಸಾಮಾನ್ಯ'ವನ್ನು ಪೂರ್ವಭಾವಿಯಾಗಿ ರೂಪಿಸಿಕೊಳ್ಳಬೇಕಾಗುತ್ತದೆ. ಪುನಃ ಈ ತೃತೀಯ 'ಮಾನವ ಸಾಮಾನ್ಯಕ್ಕೂ ಮತ್ತು ಮತ್ತೊಬ್ಬ ಪ್ರತ್ಯೇಕ ಮಾನವನಿಗೂ ಸಮಾನವಾದ ಅಂಶವಿದೆ. ಇದನ್ನು ವಿವರಿಸಲು ಮತ್ತೊಂದು 'ಮಾನವ ಸಾಮಾನ್ಯ'ವನ್ನು ಪೂರ್ವಭಾವಿಯಾಗಿ ರೂಪಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಅನಾವಸ್ಥಾ ದೋಷ ಉಂಟಾಗುವುದು. ಆದುದರಿಂದ ಪ್ಲೇಟೋವಿನ 'ಸಾಮಾನ್ಯ ಸಿದ್ಧಾಂತ' ದೋಷಪೂರ್ಣವಾಗಿದೆ ಎಂದೇ ಹೇಳಬೇಕು ಎಂದು ಅರಿಸ್ಟಾಟಲ್ ಅಭಿಪ್ರಾಯ ಪಡುತ್ತಾನೆ.

(6) ಸಾಮಾನ್ಯಗಳನ್ನು ವಸ್ತುಗಳ ಸಾರವೆಂದು ಪ್ಲೇಟೋ ಹೇಳುತ್ತಾನೆ. ಸಾರವೆನ್ನುವುದು ವಸ್ತುವಿನಲ್ಲಿ ಇರಬೇಕೇ ಹೊರತು ವಸ್ತುವಿನಿಂದ ಹೊರಗಡೆಯಲ್ಲಲ್ಲ. ಆದರೆ ಪ್ಲೇಟೋ ಪ್ರತಿಪಾದಿಸುವ 'ಸಾಮಾನ್ಯ'ಗಳನ್ನು ಈ ಪ್ರಪಂಚದಲ್ಲಿ ಕಾಣಲಾಗುದಿಲ್ಲ. ಅವು ದೇಶಕಾಲಾತೀತವಾದವುಗಳು. ಅವುಗಳಿಗೇ ತಮ್ಮದೇ ಆದ ಲೋಕ ಉಂಟು ಎಂದು ಅವನು ಹೇಳುತ್ತಾನೆ. ಇದು ತಪ್ಪು. 'ಸಾಮಾನ್ಯ' ಅಥವಾ 'ಐಡಿಯಾ' ಪ್ರತ್ಯೇಕದಲ್ಲಿ ಮಾತ್ರ ಇರಬಲ್ಲದು. 'ಅಶ್ವತ್ವ' ಅಥವಾ 'ಅಶ್ವಸಾಮಾನ್ಯ' ಅಶ್ವವನ್ನು ಬಿಟ್ಟು ಇರುತ್ತದೆ ಎಂದು ಹೇಳುವುದು ಅಸಂಬದ್ಧ ಪ್ರಲಾಪವಾಗುತ್ತದೆಂದು ಅರಿಸ್ಟಾಟಲ್ ಪ್ಲೇಟೋವಿನ 'ಸಾಮಾನ್ಯ ಸಿದ್ಧಾಂತ'ವನ್ನು ಖಂಡಿಸುತ್ತಾನೆ.

ಪ್ಲೇಟೋವಿನಂತೆ ಅರಿಸ್ಟಾಟಲನೂ ಸಹ 'ಸಾಮಾನ್ಯ' ಅಥವಾ 'ಐಡಿಯಾ' ಪರಮ ಸತ್ಯವೆಂದು ಒಪ್ಪಿಕೊಳ್ಳುತ್ತಾನೆ. ಆದರೆ ಅದು ತನ್ನದೇ ಆದ ಲೋಕದಲ್ಲಿ

ವಿಹರಿಸುತ್ತಿಲ್ಲ. ಅದು ಸದಾ 'ಪ್ರತ್ಯೇಕ' ದಲ್ಲಿಯೇ ವಾಸಮಾಡುತ್ತದೆ. ಹೀಗೆ 'ಸಾಮಾನ್ಯ', ಪ್ಲೇಟೋ ಹೇಳುವಂತೆ 'substance' ಅಲ್ಲ. 'ಸಾಮಾನ್ಯ ಮತ್ತು ಪ್ರತ್ಯೇಕ'ಗಳು ಒಂದನ್ನು ಬಿಟ್ಟು ಮತ್ತೊಂದು ಇರಲಾರವು. ಅವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಹೀಗೆ, ಅರಿಸ್ಟಾಟಲನ ಪ್ರಕಾರ, ವ್ಯಕ್ತ ವಸ್ತು ಎನ್ನುವುದು 'ಸಾಮಾನ್ಯ' ಮತ್ತು 'ಪ್ರತ್ಯೇಕ'ಗಳ ಸಂಯುಕ್ತ. ವಸ್ತುವೇ 'substance' ಅದು ವಿಶ್ವದಲ್ಲಿ ಹೇಗೆ ವ್ಯಕ್ತವಾಗುತ್ತದೆ ಎಂಬುದನ್ನು ತನ್ನ 'ಕಾರ್ಯಕಾರಣವಾದದ' ಮೂಲಕ ವಿವರಿಸಿದ್ದಾನೆ.

೨೨

ಅರಿಸ್ಟಾಟಲನ 'ಕಾರ್ಯಕಾರಣ' ವಾದ

'ಕಾರಣ' ಎಂದರೇನು ? ಅಸ್ತಿತ್ವದಲ್ಲಿರುವ ವಸ್ತುವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಯಾವ ತತ್ವ ಅತ್ಯಾವಶ್ಯಕವೋ ಅದನ್ನು ಅರಿಸ್ಟಾಟಲ್ 'ಕಾರಣ' (Cause) ಎಂದು ಕರೆಯುತ್ತಾನೆ. ಅವನು 'ಕಾರಣ' ಪದವನ್ನು ವಿಶಾಲಾರ್ಥದಲ್ಲಿ ಬಳಸಿದ್ದಾನೆ. ಅದು ತಾತ್ವಿಕ ಅರ್ಥವನ್ನಷ್ಟೇ ಒಳಗೊಂಡಿರದ ವೈಜ್ಞಾನಿಕ ಅರ್ಥವನ್ನು ತನ್ನಲ್ಲೇ ಹೊಂದಿದೆ. ಅದು ವಸ್ತುವಿನ 'ಏಕೆ' ಎಂಬುದನ್ನು ಅಲ್ಲದೆ 'ಹೇಗೆ' ಎಂಬುದನ್ನೂ ವಿವರಿಸುತ್ತದೆ.

ಅರಿಸ್ಟಾಟಲನ ಪ್ರಕಾರ ನಾಲ್ಕು ವಿಧದ ಕಾರಣಗಳಿವೆ :

(i) ಉಪಾದಾನ ಕಾರಣ (Material Cause)

(ii) ನಿಮಿತ್ತ ಕಾರಣ (Efficient Cause)

(iii) ರೂಪ ಕಾರಣ (Formal Cause)

ಮತ್ತು

(iv) ಅಂತಿಮ ಅಥವಾ ಉದ್ದೇಶತಾ ಕಾರಣ (Final Cause)

ಒಂದು ವಸ್ತುವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಈ ನಾಲ್ಕು ಕಾರಣಗಳೂ ಅತ್ಯಾವಶ್ಯಕ. ವಿಶ್ವಸೃಷ್ಟಿಯಲ್ಲಿ ಈ ಚತುರ್ಥಕಾರಣಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಅವು ಪರಸ್ಪರ ಪೂರಕವಾಗಿ ವರ್ತಿಸಿದಾಗ 'ವಸ್ತು' ಉತ್ಪತ್ತಿಯಾಗುತ್ತದೆ.

ಯಾವುದರಿಂದ ವಸ್ತು ಮಾಡಲ್ಪಟ್ಟಿದೆಯೋ ಅದೇ ವಸ್ತುವಿನ ಉಪಾದಾನ ಕಾರಣ. ಹೀಗೆ ಕಚ್ಚಾ ವಸ್ತುವೇ ಉಪಾದಾನ ಕಾರಣವೆನಿಸುವುದು. ಉದಾಹರಣೆಗೆ 'ಪ್ಲೇಟೋವಿನ ಕಂಚಿನ ಪ್ರತಿಮೆ' ಇದೆ ಎಂದಿಟ್ಟುಕೊಳ್ಳೋಣ. ಇಲ್ಲಿ 'ಕಂಚು' ಎಂಬ ಮಿಶ್ರ ಲೋಹವೇ ಪ್ರತಿಮೆಯ ಉಪಾಧಾನ ಕಾರಣ. ಆದರೆ ಉಪಾದಾನ ಕಾರಣ

ಯಾವತ್ತೂ ಭೌತಿಕವಾಗಿರುತ್ತದೆ ಎಂಬ ಅಂಶವನ್ನು ಅರಿಸ್ಟಾಟಲ್ ಒಪ್ಪಿಕೊಳ್ಳುವುದಿಲ್ಲ.

ವಸ್ತುವಿನ ಚಲನೆಗೆ, ಗತಿಗೆ ಮೂಲವಾದುದೇ ನಿಮಿತ್ತ ಕಾರಣ ಎನಿಸುವುದು. ಇಲ್ಲಿ ಚಲನೆಯೆಂದರೆ ವಸ್ತು ಪಲ್ಲಟ ಎಂದಷ್ಟೇ ಅಲ್ಲ. ಎಲ್ಲ ರೀತಿಯ ಬದಲಾವಣೆಗಳನ್ನು ಅರಿಸ್ಟಾಟಲ್ 'ಚಲನೆ' 'ಗತಿ' ಎಂದು ಕರೆಯುತ್ತಾನೆ. ಒಂದು ಹಸಿರು ಎಲೆ ಹಳದಿ ಬಣ್ಣಕ್ಕೆ ತಿರುಗುವುದೂ ಚಲನೆಯೆನಿಸುವುದು, ಅಂದರೆ ಎಲ್ಲ ರೀತಿಯ ಚಲನೆ, ಬದಲಾವಣೆ, ವಿಕಾರವನ್ನುಂಟು ಮಾಡುವ ಶಕ್ತಿಯೇ ನಿಮಿತ್ತ ಕಾರಣ ಎನಿಸುವುದು. ಹಿಂದೆ ತೆಗೆದುಕೊಂಡ ಉದಾಹರಣೆಯಲ್ಲಿ ಶಿಲ್ಪಿಯೇ ನಿಮಿತ್ತ ಕಾರಣ. ಏಕೆಂದರೆ ಅವನು ಕಂಚನ್ನು 'ಪ್ಲೇಟೋ ಪ್ರತಿಮೆ'ಯನ್ನಾಗಿ ಪರಿವರ್ತಿಸುವನು ; ಅದಕ್ಕೆ ಒಂದು ರೂಪವನ್ನು ಕೊಡುವನು.

ವಸ್ತುವಿನ ರೂಪ ಮತ್ತು ಸಾರವನ್ನೇ ರೂಪಕಾರಣ (Formal Cause) ಎಂದು ಕರೆಯಬಹುದು. ವಸ್ತುವಿನ ಸಾರವನ್ನು (ಎಲ್ಲ ವಸ್ತುಗಳ ಸಮಾನ ಗುಣವನ್ನು) 'ಪರಿಕಲ್ಪನೆ' ಎಂದು ಅರಿಸ್ಟಾಟಲ್ ಕರೆಯುತ್ತಾನೆ ಪರಿಕಲ್ಪನೆಯನ್ನು ವಾಕ್ಯದಲ್ಲಿ ಉಪಯೋಗಿಸಿದಾಗ ಅದು ಲಕ್ಷಣ ವ್ಯಾಖ್ಯೆ (Definition) ಎನಿಸುತ್ತದೆ. ಅಂದರೆ ವಸ್ತುವನ್ನು ಕುರಿತ 'ಭಾವ'ವೇ ರೂಪಕಾರಣವೆನಿಸುತ್ತದೆ. ಹೀಗೆ ಪ್ಲೇಟೋವಿನ 'ಸಾಮಾನ್ಯ', ಅರಿಸ್ಟಾಟಲನ 'ಐಡಿಯಾ' ಆಗಿ ಪುನಃ ಕಾಣಿಸಿಕೊಳ್ಳುತ್ತದೆ.

ಕ್ರಿಯೆಯ ಅಂತಿಮ ಉದ್ದೇಶವನ್ನು, ಅರಿಸ್ಟಾಟಲ್ 'ಅಂತಿಮ ಕಾರಣ' ಅಥವಾ 'ಉದ್ದೇಶ ಕಾರಣ' (Final Cause) ಎಂದು ಕರೆಯುತ್ತಾನೆ. ಉದಾಹರಣೆಗೆ, ಯಾವ ಉದ್ದೇಶಕ್ಕಾಗಿ ಶಿಲ್ಪಿ ಪ್ರತಿಮೆಯನ್ನು ರೂಪಿಸುತ್ತಾನೋ, ಅದೇ ಅದರ ಅಂತಿಮ ಕಾರಣ. ಶಿಲ್ಪಿ 'ಪ್ಲೇಟೋವಿನ ಕಂಚಿನ ಪ್ರತಿಮೆ'ಯನ್ನು ತತ್ತ್ವಾಭ್ಯಾಸಿಗಳ ಚಿಂತನೆಯನ್ನು ಬಡಿದೆಬ್ಬಿಸಲು, ಸ್ಫೂರ್ತಿ ನೀಡಲು ಇಲ್ಲವೇ ಧನಲಾಭಾಪೇಕ್ಷೆಯಿಂದ ರೂಪಿಸಿರಬಹುದು. ಒಟ್ಟಿನಲ್ಲಿ ಅದಕ್ಕೆ ಒಂದು ಉದ್ದೇಶವಿರಬೇಕು.

ಹೀಗೆ ಅರಿಸ್ಟಾಟಲನ 'ಕಾರಣ' ಸಿದ್ಧಾಂತ, ವೈಜ್ಞಾನಿಕ 'ಕಾರಣ ಸಿದ್ಧಾಂತ'ಕ್ಕಿಂತ ವಿಶಾಲವಾದುದಾಗಿದೆ. ವೈಜ್ಞಾನಿಕ ಅರ್ಥದಲ್ಲಿ 'ಕಾರಣ' ಎಂದರೆ ಒಂದು ಕ್ರಿಯೆಯ ಅತ್ಯಾವಶ್ಯಕವಾದ, ಬೇಷರತ್ತಾದ ಪೂರ್ವಭಾವಿತ್ವ (antecedent). ಇಲ್ಲಿ ಅಂತಿಮ ಕಾರಣದ ಪ್ರಸ್ತಾಪವೇ ಇಲ್ಲ. ಇಲ್ಲಿ ಕಾರಣ ಕಾಲವಶವಾದುದಾಗಿದೆ. ಹಾಗೆಯೇ ವೈಜ್ಞಾನಿಕ' 'ಕಾರಣ ಸಿದ್ಧಾಂತದಲ್ಲಿ 'ರೂಪಕಾರಣ'ದ ಪ್ರಸ್ತಾಪವಿಲ್ಲ. ರೂಪ ಅಥವಾ ಪರಿಕಲ್ಪನೆ, ಕಾರಣದ ಘಟಕ ಎಂದು ವಿಜ್ಞಾನ ನಂಬುವುದಿಲ್ಲ. ನಿಮಿತ್ತ ಕಾರಣವನ್ನು ವಿಜ್ಞಾನ ತಳ್ಳಿಹಾಕುತ್ತದೆ. ವಿಜ್ಞಾನ ಪ್ರತಿಯೊಂದನ್ನು ಯಾಂತ್ರಿಕವಾಗಿ ವಿವರಿಸಲು ಪ್ರಯತ್ನಪಡುತ್ತದೆ. ಈ ಅರ್ಥದಲ್ಲಿ ಅದು ವಸ್ತುವಿನ "ಉತ್ಪತ್ತಿ"ಯನ್ನು ಕುರಿತು ಹೇಳುವುದಿಲ್ಲ. ಏಕೆಂದರೆ ವಸ್ತುವಿನ ಉತ್ಪತ್ತಿಯನ್ನು ಕುರಿತು ಹೇಳುವುದೆಂದರೆ, ಅದರ ಕರ್ತೃ, ಅದರ ಉದ್ದೇಶ—ಈ ಎಲ್ಲವನ್ನೂ ಹೇಳುವುದಾಗಿದೆ. ವಿಜ್ಞಾನ

ವಸ್ತುಗಳನ್ನು, ವಸ್ತುಗಳ ಪರಸ್ಪರ ಸಂಬಂಧವನ್ನು ಕುರಿತು ಚಾರಿತ್ರಿಕವಾಗಿ ಕಾಲದ ದೃಷ್ಟಿಯಿಂದ ವಿವರಿಸುತ್ತದೆ. ಹೀಗೆ 'ರೂಪಕಾರಣ', 'ನಿಮಿತ್ತ ಕಾರಣ' ಮತ್ತು 'ಅಂತಿಮಕಾರಣ'ಗಳು ವಿಜ್ಞಾನದ ಕಕ್ಷೆಯಿಂದ ಹೊರತಾಗಿವೆ. ಅರಿಸ್ಟಾಟಲನ ಉಪಾದಾನ ಕಾರಣ, ಆಧುನಿಕ ವಿಜ್ಞಾನದ 'ದ್ರವ್ಯ'ವನ್ನು (Matter), 'ಶಕ್ತಿ' (Energy) ಯನ್ನೂ ಸರಿಸುಮಾರಾಗಿ ಪ್ರತಿನಿಧಿಸುತ್ತದೆಂದು ಹೇಳಬಹುದು. ಅವನ 'ಕಾರ್ಯ ಕಾರಣ'ವಾವ ಯಾಂತ್ರಿಕತೆ ಹಾಗೂ ಉದ್ದೇಶತಾ—ಎರಡನ್ನೂ ಬಳಸಿಕೊಳ್ಳುತ್ತದೆ.

ಈ ನಾಲ್ಕು ಕಾರಣಗಳಲ್ಲಿ ಉಪಾದಾನ ಕಾರಣವನ್ನು ಸಂಕ್ಷೇಪವಾಗಿ "ದ್ರವ್ಯ" (Matter) ಎಂದೂ ಉಳಿದ ಮೂರು ಕಾರಣ (ನಿಮಿತ್ತ, ರೂಪ, ಹಾಗೂ ಅಂತಿಮ) ಗಳನ್ನು ಸೂಕ್ಷ್ಮವಾಗಿ "ರೂಪ" (Form) ಎಂದೂ ಅರಿಸ್ಟಾಟಲ್ ಕರೆಯುತ್ತಾನೆ.

'ರೂಪಕಾರಣ'ವನ್ನೂ 'ಅಂತಿಮಕಾರಣ'ವನ್ನೂ "ರೂಪ" (Form) ಕಲ್ಪನೆಯ ಮುಖಾಂತರ ವಿವರಿಸಬಹುದು. 'ರೂಪಕಾರಣ'ಕ್ಕೂ 'ಅಂತಿಮ ಕಾರಣ'ಕ್ಕೂ ಅಂಥ ಭೇದವಿಲ್ಲ. ಏಕೆಂದರೆ, 'ಅಂತಿಮಕಾರಣ'ವೆಂದರೆ 'ರೂಪಕಾರಣ'ವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಅಂದರೆ ಕಾರ್ಯರೂಪಕ್ಕೆ ತರುವುದು. ಹೀಗೆ 'ಅಂತಿಮ ಕಾರಣ' 'ರೂಪಕಾರಣ'ವನ್ನು ಇನ್ನೂ ಸ್ಪಷ್ಟವಾಗಿ ವಿವರಿಸುತ್ತದೆ ಎಂದು ಹೇಳಬಹುದು.

ಹಾಗೆಯೇ 'ನಿಮಿತ್ತಕಾರಣ'ವೂ 'ಅಂತಿಮಕಾರಣ'ವೂ ಅಂತಿಮಾರ್ಥದಲ್ಲಿ ಒಂದೇ. 'ನಿಮಿತ್ತ ಕಾರಣ' 'ಆಗುವಿಕೆಯ' ಪ್ರಾರಂಭವಾದರೆ, 'ಅಂತಿಮಕಾರಣ' 'ಆಗುವಿಕೆಯ' ಅಂತ್ಯವಾಗಿದೆ. ಎಲ್ಲಾ ವಸ್ತುಗಳು ಒಂದು ಉದ್ದೇಶವನ್ನು ಇಟ್ಟುಕೊಂಡು ಸದಾ ಅದರೆಡೆಗೆ ಪಯಣ ಬೆಳಸುತ್ತಿರುತ್ತವೆ ಎಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ. ಹೀಗೆ 'ಅಂತಿಮಕಾರಣ' ವಸ್ತುವಿನ ಅಸ್ತಿತ್ವವನ್ನು ವಿವರಿಸುತ್ತದೆ. ಈ ಹಿಂದೆ ತೆಗೆದುಕೊಂಡ ಉದಾಹರಣೆಯಲ್ಲಿ ನಿಮಿತ್ತಕಾರಣ (ಶಿಲ್ಪಿ), ತನ್ನ ಮನದಲ್ಲಿ ಆಗಲೇ ಪ್ರತಿಮೆಯ 'ರೂಪ'ವನ್ನು ಸೃಜಿಸಿಕೊಂಡು, ಅದನ್ನು ಕಾರ್ಯರೂಪಕ್ಕೆ ಇಳಿಸುವುದೇ ಅಂತಿಮಕಾರಣವಾಗುತ್ತದೆ, ಹೀಗೆ, ಇಲ್ಲಿ ಶಿಲ್ಪಿ ನಿಮಿತ್ತ, ರೂಪ ಮತ್ತು ಉದ್ದೇಶತಾ—ಮೂರು ಕಾರಣಗಳೂ ಆಗಿದ್ದಾನೆ. ಈ ವಿಶಾಲಾರ್ಥದಲ್ಲಿ ಅರಿಸ್ಟಾಟಲ್ ಆ ಮೂರು ಕಾರಣಗಳನ್ನು ಸಂಕ್ಷೇಪವಾಗಿ "ರೂಪ" (Form) ಎಂದು ಕರೆಯುತ್ತಾನೆ. ಹೀಗೆ ಅರಿಸ್ಟಾಟಲನ ತತ್ವಚಿಂತನೆಯಲ್ಲಿ 'ದ್ರವ್ಯ' (Matter) ಮತ್ತು 'ರೂಪ' (Form)ಗಳು ಇಡೀ ವಿಶ್ವವನ್ನು ವಿವರಿಸುವ ಮೂಲಭೂತ ಪರಿಕಲ್ಪನೆಗಳಾಗುತ್ತವೆ.

೨೩

'ದ್ರವ್ಯ' ಮತ್ತು ರೂಪಲಕ್ಷಣಗಳ ಗುಣಲಕ್ಷಣಗಳು

(i) 'ದ್ರವ್ಯ' ಮತ್ತು 'ರೂಪ'ಗಳು ಬೇರ್ಪಡಿಸಲಾಗದ ಅತ್ಯಂತ ನಿಕಟವೂ ಆತ್ಮೀಯವೂ ಆದ ಸಂಬಂಧವನ್ನು ಹೊಂದಿವೆ. ಅವು ತತ್ವದಲ್ಲಿ ಪರಸ್ಪರ ವಿರುದ್ಧ

ವಾದರೂ ವಾಸ್ತವದಲ್ಲಿ ಅವಿಭಾಜ್ಯ ತತ್ವಗಳಾಗಿವೆ. ಈ ವಿಶ್ವದಲ್ಲಿ 'ದ್ರವ್ಯ'ವಿಲ್ಲದ 'ರೂಪ'ವಾಗಲೀ, ರೂಪವಿಲ್ಲದ 'ದ್ರವ್ಯ'ವಾಗಲೀ ಇಲ್ಲ. ಅಸ್ತಿತ್ವದಲ್ಲಿರುವ ಪ್ರತಿಯೊಂದೂ ವಸ್ತುವೂ 'ರೂಪ' ಮತ್ತು 'ದ್ರವ್ಯ'ಗಳ ಸಂಯುಕ್ತವಾಗಿದೆ. ಈ ದೃಷ್ಟಿಯಲ್ಲಿ 'ದ್ರವ್ಯ' ಮತ್ತು 'ರೂಪ'ಗಳನ್ನು 'ವಸ್ತು' ಮತ್ತು ಅದರ 'ಆಕಾರ'ದೊಡನೆ (shape) ಹೋಲಿಸಬಹುದು. ಆದರೆ 'ರೂಪ' ಕೇವಲ 'ಆಕಾರ'ವಲ್ಲ ; ಅದಕ್ಕಿಂತಲೂ ಮಿಗಿಲಾದುದು. ಯಾವ ವಸ್ತುವೂ ಆಕಾರವಿಲ್ಲದೆ ಇರಲಾರದು. ವೃತ್ತ, ಆಯತ ಇತ್ಯಾದಿ ಆಕಾರಗಳು ಸ್ವತಂತ್ರ ಅಸ್ತಿತ್ವವನ್ನು ಹೊಂದಿವೆ ಎಂದು ಜ್ಯಾಮಿತಿ ಸಾರುತ್ತದೆ. ಆದರೆ ಜಗತ್ತಿನಲ್ಲಿ ನಾವು ವಸ್ತುಗಳ ವೃತ್ತಾಕಾರ, ಚಚ್ಚೌಕ, ಆಯತಾಕಾರಗಳನ್ನು ಹೊಂದಿರುವುದನ್ನು ಕಾಣುತ್ತೇವೆಯೇ ಹೊರತು 'ವೃತ್ತ', 'ಚಚ್ಚೌಕ', 'ಆಯತ' ಎಂಬ ವಸ್ತುಗಳಿಲ್ಲ.

ಹೀಗೆ 'ರೂಪ' 'ಆಕಾರ'—ಈ ಎರಡೂ ಒಂದೇ ಅಲ್ಲ ; ಅವು ಬೇರೆ ಬೇರೆ. 'ರೂಪ' ವಸ್ತುವಿನ ಎಲ್ಲ ಗುಣಾಂಶಗಳನ್ನು ತನ್ನಲ್ಲಿ ಹಿಡಿದಿಟ್ಟುಕೊಂಡರೆ, 'ಆಕಾರ' ವಸ್ತುವಿನ ಅಮುಖ್ಯ ಭಾಗವಾಗಿದೆ. 'ರೂಪ'ದಲ್ಲಿ ವ್ಯವಸ್ಥೆಯಿರುತ್ತದೆ ; ಒಂದು ಭಾಗಕ್ಕೂ ಮತ್ತೊಂದು ಭಾಗಕ್ಕೂ ನಿರ್ದಿಷ್ಟ ಸಂಬಂಧವಿರುತ್ತದೆ. ಆಂತರಿಕ ಮತ್ತು ಬಾಹ್ಯ ಸಂಬಂಧಗಳನ್ನು ಅದು ಹೊಂದಿರುತ್ತದೆ. ವಿವಿಧ ಭಾಗಗಳ ನಡುವೆ ಬೇರ್ಪಡಿಸಲಾರದ ಸಂಬಂಧವಿರುತ್ತದೆ. ಹೀಗೆ ಯಾವ 'ಆದರ್ಶ' (moulding)ವಾಗಿ ವಸ್ತು ಎರಕ ಹೊಯ್ಯಲ್ಪಡುತ್ತದೋ ಅದೇ 'ರೂಪ', ಅಲ್ಲದೆ 'ರೂಪ' ಕ್ರಿಯೆಯನ್ನು ಒಳಗೊಂಡಿರುತ್ತದೆ. ಅದು ಅಂತಿಮ ಕಾರಣವೂ ಹೌದು. ಒಂದು ವಸ್ತುವಿನ ಕಾರ್ಯ ಅದು ಯಾವ ಉದ್ದೇಶಕ್ಕಾಗಿ ಇದೆ ಎಂಬುದರಲ್ಲಡಗಿದೆ. ಉದಾಹರಣೆಗೆ ಕೈ (ಹಸ್ತ)ಯನ್ನು ತೆಗೆದುಕೊಳ್ಳಬಹುದು. ಬಿಗಿ ಹಿಡಿಯುವುದು (ಮುಷ್ಟಿ), ಒತ್ತುವುದು ಹಸ್ತದ ಕಾರ್ಯ. ಅದು 'ರೂಪ'ದ ಒಂದು ಕಾರ್ಯ (ಕ್ರಿಯೆ). ಶರೀರದಿಂದ ಬೇರ್ಪಡಿಸಿದಾಗ ಅದು ತನ್ನ ಕ್ರಿಯೆಯನ್ನು 'ರೂಪ'ವನ್ನೂ ಕಳೆದುಕೊಳ್ಳುತ್ತದೆ. ಆದರೆ ಶರೀರದಿಂದ ಬೇರ್ಪಡಿಸಿದ ಕೈ ತನ್ನ 'ಆಕಾರ'ವನ್ನು ಕಳೆದುಕೊಳ್ಳುವುದಿಲ್ಲ. ಹೀಗೆ 'ರೂಪ'ದಲ್ಲಿ ಒಂದು ವ್ಯವಸ್ಥೆ, ಕ್ರಮವಿದ್ದರೆ, 'ಆಕಾರ'ದಲ್ಲಿ ಅದಿಲ್ಲ.

ದೃಶ್ಯ ಜಗತ್ತಿನಲ್ಲಿ 'ರೂಪ' ಮತ್ತು 'ದ್ರವ್ಯ'ಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದು ಇರಲಾರವು. ವಸ್ತುವೆಂಬುದನ್ನು ಕೇವಲ 'ದ್ರವ್ಯ'ವೆಂದಾಗಲೀ ಅಥವಾ ಕೇವಲ 'ರೂಪ'ವೆಂದಾಗಲೀ ಎಣಿಸುವುದು ಅಮೂರ್ತಚಿಂತನೆಯೇ ಸರಿ. 'ದ್ರವ್ಯ' ರಹಿತವಾದ ಸಾರ್ವತ್ರಿಕ (Ideas)ಗಳು ತಮ್ಮಷ್ಟಿಗೆ ತಾವೇ ಇರಬಲ್ಲವು ಎಂದು ಪ್ರತಿಪಾದಿಸಿದ್ದು ಪ್ಲೇಟೋ ಮಾಡಿದ ಬಹುದೊಡ್ಡ ತಪ್ಪು ಎಂದು ಅರಿಸ್ಟಾಟಲ್ ಭಾವಿಸುತ್ತಾನೆ.

(ii) 'ರೂಪ' ಸಾರ್ವತ್ರಿಕವಾದುದು (universal). ಆದರೆ 'ದ್ರವ್ಯ' ಪ್ರತ್ಯೇಕ (particular)ವಾದುದು. 'ರೂಪ' ಮತ್ತು 'ದ್ರವ್ಯ'ಗಳು ಒಂದನ್ನು

ಬಿಟ್ಟು ಮತ್ತೊಂದು ಇರಲಾರವಾದುದರಿಂದ ಸಾರ್ವತ್ರಿಕವು ಪ್ರತ್ಯೇಕದಲ್ಲೂ, ಪ್ರತ್ಯೇಕವು ಸಾರ್ವತ್ರಿಕದಲ್ಲೂ ಇರಬೇಕು. ಹೀಗೆ ಸಾರ್ವತ್ರಿಕಗಳು, ತಮ್ಮದೇ ಆದ ಲೋಕದಲ್ಲಿ ವಿಹರಿಸುತ್ತವೆ ಎಂಬ ಪ್ಲೇಟೋವಿನ ಪ್ರತಿಪಾದನೆಯನ್ನು ಅರಿಸ್ಟಾಟಲ್ ಒಪ್ಪಿಕೊಳ್ಳುವುದಿಲ್ಲ. ಸಾರ್ವತ್ರಿಕಗಳು ಪ್ರತ್ಯೇಕಗಳಲ್ಲಿಯೇ ಇರುತ್ತವೆ. ಇದು ಅರಿಸ್ಟಾಟಲನ ಚಿಂತನೆಯ ಬಹುಮುಖ್ಯ ಅಂಶ. ಅವನ ಪ್ರಕಾರ, ಪ್ರತಿಯೊಂದು ವಸ್ತುವೂ 'ದ್ರವ್ಯ' ಮತ್ತು 'ರೂಪ' ಅಂದರೆ, ಪ್ರತ್ಯೇಕ, ಸಾರ್ವತ್ರಿಕಗಳ ಸಂಯುಕ್ತವಾಗಿದೆ. ನಿರಪೇಕ್ಷವಾದ 'ದ್ರವ್ಯ'ವೆಂಬುದಾಗಲೀ, 'ರೂಪ'ವಾಗಲೀ ಅಸ್ತಿತ್ವದಲ್ಲಿಲ್ಲ. ಉದಾಹರಣೆಗೆ ಬೆಳ್ಳಿ. ಬೆಳ್ಳಿ ತನ್ನ 'ರೂಪ'ವನ್ನು, 'ಗುಣಲಕ್ಷಣ'ಗಳನ್ನು ಬಿಟ್ಟು ನಿರಪೇಕ್ಷವಾದ ದ್ರವ್ಯವಾಗಿ ಅಸ್ತಿತ್ವದಲ್ಲಿಲ್ಲ. ಅದು ಯಾವಾಗಲೂ ತನ್ನ 'ರೂಪ, ಗುಣಲಕ್ಷಣಗಳೊಡಗೂಡಿಯೇ ಅಸ್ತಿತ್ವದಲ್ಲಿರುತ್ತದೆ.

(iii) 'ದ್ರವ್ಯ' ಸಂಪೂರ್ಣವಾಗಿ ರೂಪರಹಿತವಾದುವಾಗಿದೆ. ಅದು ತನ್ನಲ್ಲಿ ಯಾವ ಲಕ್ಷಣವನ್ನೂ ಹೊಂದಿಲ್ಲ. ಅದು ನಿರೂಪ ಅನಿರ್ದಿಷ್ಟ ಹಾಗೂ ಸ್ವರೂಪರಹಿತವಾದ ತತ್ವ.

ಆದರೆ 'ರೂಪ' ಹಾಗಲ್ಲ. ಯಾವುದು ವಸ್ತುವಿಗೆ ಒಂದು ನಿರ್ದಿಷ್ಟತೆಯನ್ನು, ಗುಣವನ್ನು ನೀಡುತ್ತದೋ ಅದೇ 'ರೂಪ'. 'ಅದು ಆ ವಸ್ತು' 'ಇದು ಈ ವಸ್ತು' ಎಂದು ಹೇಳಲು ಸಾಧ್ಯವಾಗುವುದು 'ರೂಪ' ತತ್ವದಿಂದಲೇ. ಒಂದು ವಸ್ತು ಇನ್ನೊಂದು ವಸ್ತುವಿಗಿಂತ ಭಿನ್ನ ಎಂದರೆ, ಮೊದಲಿನ ವಸ್ತುವಿನ ಗುಣಲಕ್ಷಣಗಳೇ ಬೇರೆ, ಎರಡನೆಯ ವಸ್ತುವಿನ ಗುಣಲಕ್ಷಣಗಳೇ ಬೇರೆ ಎಂದು ಅರ್ಥ. ಹೀಗೆ ವಸ್ತುಗಳಲ್ಲಿರುವ ಪರಸ್ಪರ ಭೇದಕ್ಕೆ 'ರೂಪ' ತತ್ವವೇ ಕಾರಣ.

ಆದರೆ 'ದ್ರವ್ಯ'ದಲ್ಲಿ ಯಾವುದೇ ರೀತಿಯ ಲಕ್ಷಣಗಳೂ ಇಲ್ಲದಿರುವುದರಿಂದ ಅದರಲ್ಲಿ ಭೇದವಿರಲು ಸಾಧ್ಯವಿಲ್ಲ.

ಹೀಗೆ ಯಾವುದನ್ನು ನಾವು ವಿಶ್ಲೇಷಿಸಬಹುದೋ, ವಿವರಿಸಬಹುದೋ ಲಕ್ಷಣ ವ್ಯಾಖ್ಯೆಯನ್ನು ಹೇಳಬಹುದೋ ವರ್ಗೀಕರಿಸಬಹುದೋ, ಮತ್ತೊಬ್ಬರಿಗೆ ಬೋಧಿಸಬಹುದೋ, ಒಟ್ಟಿನಲ್ಲಿ ತಿಳಿಯಬಹುದೋ ಅದೇ 'ರೂಪ'.

ಆದರೆ 'ದ್ರವ್ಯ' ಎನ್ನುವಂಥಾದ್ದನ್ನು ತಿಳಿಯಲಾಗುವುದಿಲ್ಲ. ಮನಸ್ಸು ಅದನ್ನು ಕುರಿತು ಸಮರ್ಪಕವಾಗಿ ಚಿಂತಿಸಲಾರದು. 'ದ್ರವ್ಯ' ನಿರ್ವಿಶೇಷ ಹಾಗೂ ನಿರ್ಗುಣ.

(iv) 'ದ್ರವ್ಯ' ಮತ್ತು 'ರೂಪ'ಗಳು ಪೃಥಕ್ಕಲ್ಲದ, ಸುಲಭವಾಗಿ ಹರಿಯುವ ತತ್ವಗಳಾಗಿವೆ. ಅವುಗಳಲ್ಲಿ ಒಂದು ಮತ್ತೊಂದಾಗಿ ಹರಿಯುತ್ತದೆ. ಒಂದೇ ವಸ್ತು, ಒಂದು ದೃಷ್ಟಿಯಲ್ಲಿ 'ದ್ರವ್ಯ'ವಾಗಿಯಲ್ಲಿ, ಮತ್ತೊಂದು ದೃಷ್ಟಿಯಲ್ಲಿ 'ರೂಪ'ವಾಗಿಯೂ ಇರುತ್ತದೆ. ಎಲ್ಲಾ ಬದಲಾವಣೆಯಲ್ಲಿಯೂ ಬದಲಾಯಿಸುವ ತತ್ವ 'ದ್ರವ್ಯ'; ಯಾವುದರಿಂದ ಚಲನೆ, ಬದಲಾವಣೆಗಳು ನಿರ್ದೇಶಿಸಲ್ಪಡುತ್ತವೋ ಅದೇ 'ರೂಪ' ತತ್ವ. ಯಾವುದು ಬದಲಾಗುತ್ತದೋ ಅದೇ 'ದ್ರವ್ಯ'; ಯಾವುದಾಗಿ ಬದಲಾಯಿಸು

9

ತ್ತದೋ, ಅದೇ 'ರೂಪ'. ಉದಾಹರಣೆಗೆ ಹತ್ತಿಯು (cotton) ಹಾಸಿಗೆಯ ದೃಷ್ಟಿಯಿಂದ 'ದ್ರವ್ಯ'ವಾಗಿದೆ ; ಆದರೆ ಹತ್ತಿಗಿಡದ ದೃಷ್ಟಿಯಿಂದ ಅದು 'ರೂಪ'ವಾಗಿದೆ.

ಹೀಗೆ ವಿಕಾಸ ಹೊಂದುವ ಪರಿಣಾಮಿ ತತ್ವವೇ 'ದ್ರವ್ಯ'. ಅದು ಅನೇಕತೆಯ ಮೂಲ. ಅದು ಪ್ರತಿಕ್ಷಣದಲ್ಲಿಯೂ ಬದಲಾವಣೆಯನ್ನು ಹೊಂದುತ್ತಿರುತ್ತದೆ. ಆದರೆ 'ಶುದ್ಧರೂಪ' ಪರಿಣಾಮವನ್ನು ಹೊಂದುವುದಿಲ್ಲ. ಅದು ನಿತ್ಯ ನಿರ್ವಿಕಾರ ತತ್ವವಾಗಿದೆ. ಅರಿಸ್ಟಾಟಲನ ಪ್ರಕಾರ 'ದ್ರವ್ಯದ' ಸಾರ್ಥಕ್ಯ ಅಡಗಿರುವುದು, ಅದು ತಾನು ತೆಗೆದು ಕೊಳ್ಳುವ 'ರೂಪ'ಗಳಲ್ಲಿ. ಅವರ ಗುಪ್ತಶಕ್ತಿ ಅದು ಹೆಚ್ಚು ಹೆಚ್ಚು 'ರೂಪ'ಗಳನ್ನು ತೆಗೆದುಕೊಂಡಾಗೆಲ್ಲಾ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. ಅದು ಹೊಸ ಹೊಸ 'ರೂಪ'ಗಳನ್ನು ಧರಿಸಿದ ಹಾಗೆಲ್ಲಾ 'ಹೊಸ ಹೊಸ' ಶಕ್ತಿವಿಶೇಷಗಳನ್ನು ಹೊಂದ ಬಲ್ಲದು. ಹೀಗೆ ರೂಪವೇ ದ್ರವ್ಯದ ಜೀವಾಳ. ಅನುಭವ ಸಾಧ್ಯವಾಗುವುದು ಇವೆರಡರ ಸಮ್ಮಿಲನದಿಂದ. ಪರಮಾಣುವಾದಿಗಳು ಹೇಳುವಂತೆ ಜಗತ್ತೆಂಬುದು ಪರಮಾಣುಗಳ ಸಂಘಾತವಲ್ಲ ; ಅದು ಉದ್ದೇಶಪೂರ್ವಕವಾದುದು' ಧ್ಯೇಯಾತ್ಮಕವಾದುದೆಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ.

ತನ್ನ ಮೇಲೆ ಯಾವ ರೂಪ ಒತ್ತಲ್ಪಡುತ್ತದೋ ಆ 'ರೂಪ'ವನ್ನು 'ದ್ರವ್ಯ' ತೆಗೆದುಕೊಳ್ಳುತ್ತದೆ. ಹೀಗೆ 'ದ್ರವ್ಯ'ದಲ್ಲಿ ಪ್ರತಿಯೊಂದು ವಸ್ತುವಿನ 'ಸಾಧ್ಯತೆ'ಯಿದೆ ರೂಪವನ್ನು ಹೊಂದುವುದರ ಮೂಲಕ ಅದು ಇನ್ನೊಂದಾಗುತ್ತದೆ. ಹೀಗೆ 'ದ್ರವ್ಯ' ತನ್ನಲ್ಲಿ ಏನೂ ಅಲ್ಲದಿದ್ದರೂ, 'ರೂಪ'ವನ್ನು ಹೊಂದುವುದರ ಮೂಲಕ ಇನ್ನೊಂದಾಗುವ ಸಾಧ್ಯತೆಯನ್ನು ಹೊಂದಿದೆ. ಆದರೆ ತನ್ನಲ್ಲಿ ಅದು ಯಾವ ಸಿದ್ಧತತ್ವವೂ ಅಲ್ಲ. ಅರಿಸ್ಟಾಟಲನ 'ದ್ರವ್ಯ' ಮತ್ತು 'ರೂಪ'ಗಳ ವಿಶ್ಲೇಷಣೆ 'ಸಾಧ್ಯತತ್ವ' (Potentiality) ಮತ್ತು 'ಸಿದ್ಧತತ್ವ' (Actuality)ಗಳಲ್ಲಿ ಪರ್ಯಾವಸಾನವಾಗುತ್ತದೆ.

೨೪

'ದ್ರವ್ಯ'ಕ್ಕೆ ಮತ್ತೊಂದು ಹೆಸರೇ 'ಸಾಧ್ಯತತ್ವ' ; 'ರೂಪ'ಕ್ಕೆ ಇನ್ನೊಂದು ಹೆಸರೇ 'ಸಿದ್ಧ ತತ್ವ'. 'ದ್ರವ್ಯ' ತಾನೇ ತಾನಾದ ಸ್ಥಿತಿಯಲ್ಲಿ ನಿರ್ವಿಶೇಷವಾದರೂ, ಇನ್ನೊಂದಾಗುವ ಅವ್ಯಕ್ತ ಶಕ್ತಿಯನ್ನು ಹೊಂದಿದೆ. ಅಂದರೆ ತನ್ನಲ್ಲಿ ಅದು 'ಸಿದ್ಧ ತತ್ವ'ವಲ್ಲ : ಕೇವಲ ಸಾಧ್ಯತತ್ವವಷ್ಟೆ. ಯಾವುದು ದ್ರವ್ಯಕ್ಕೆ ನಿರ್ದಿಷ್ಟತೆಯನ್ನು ತಂದುಕೊಡುತ್ತದೋ, ಯಾವುದು ಅದನ್ನು 'ಸಿದ್ಧತತ್ವ'ವನ್ನಾಗಿ ಮಾಡುತ್ತದೋ ಅದೇ 'ರೂಪ'ವಾಗಿದೆ. ಹೀಗೆ 'ರೂಪ'ವೇ ವಸ್ತುವಿನ ಸಿದ್ಧತತ್ವವಾಗಿದೆ.

'ಸಾಧ್ಯತತ್ವ'ಕ್ಕೂ 'ಸಿದ್ಧತತ್ವ'ಕ್ಕೂ ಅಂತರವನ್ನು ಹೇಳುವುದರ ಮೂಲಕ ಪ್ರಾಚೀನ ತತ್ವಶಾಸ್ತ್ರದ ಸಮಸ್ಯೆಯಾದ ಚಲನೆ ಅಥವಾ ಬದಲಾವಣೆಗೆ ಸಮರ್ಪಕವಾದ ಪರಿಹಾರವನ್ನು ಕಂಡುಹಿಡಿದಿರುವುದಾಗಿ ಅರಿಸ್ಟಾಟಲ್ ಭಾವಿಸುತ್ತಾನೆ. ಹೇಗೆಂದರೆ, ಪ್ರಾಚೀನ ತತ್ವಶಾಸ್ತ್ರದ ಪ್ರಕಾರ 'ಅಸತ್' (Non-Being) ಎಂಬುದುಂಟು ;

ಅದು ಶೂನ್ಯವಾದುದು ಎಂದು ಭಾವಿಸಲಾಗಿವೆ. ಅಲ್ಲದೆ 'ಸತ್' (Being) ಎಂಬುದನ್ನು ಅಂತಿಮ ಸತ್ಯವೆಂದು ಪ್ರಾಚೀನ ತತ್ವಶಾಸ್ತ್ರದಲ್ಲಿ ಪರಿಗಣಿಸಲಾಗಿದೆ. ಅರಿಸ್ಟಾಟಲನ ಪ್ರಕಾರ, 'ಅಸತ್' ಶೂನ್ಯ ತತ್ವವಲ್ಲ. ಅದು ಶೂನ್ಯಸ್ಥಿತಿಯುಲ್ಲ. ಇನ್ನೊಂದಾಗುವ ಸಾಮರ್ಥ್ಯ ಅಥವಾ ಸಾಧ್ಯತೆಯನ್ನು ಅದು ಹೊಂದಿದೆ. 'ಸಾಧ್ಯತತ್ವ' 'ಸಿದ್ಧತತ್ವ'ವಾಗುವುದನ್ನೇ 'ಬದಲಾವಣೆ' ಅಥವಾ ಚಲನೆ (ಗತಿ) ಎಂದು ಅರಿಸ್ಟಾಟಲ್ ಕರೆಯುತ್ತಾನೆ. 'ದ್ರವ್ಯ' 'ರೂಪ'ವಾಗುವುದನ್ನೇ 'ಚಲನೆ', 'ಬದಲಾವಣೆ' ಎಂದು ಅವನು ಹೇಳುತ್ತಾನೆ. ಹೀಗೆ ಚಲನೆ ಎಂಬುದು ಬಾಹ್ಯದಿಂದ ಕೋರಲ್ಪಟ್ಟ 'ಬಲ' ಅಥವಾ 'ಒತ್ತಡ' (Force) ಅಲ್ಲ ; ಅದು ಆಂತರಿಕವಾದುದು ; 'ಅಸತ್' ಅಥವಾ 'ದ್ರವ್ಯ' 'ಸತ್' ಅಥವಾ 'ರೂಪ'ವಾಗುವುದೇ ಚಲನೆ ಎನಿಸುವುದು.

'ರೂಪ' 'ದ್ರವ್ಯ'ಕ್ಕಿಂತ ಉತ್ಕೃಷ್ಟವಾದುದು ಎಂಬ ಅಂಶ ಈ ವಿಶ್ಲೇಷಣೆಯಿಂದ ಸಿದ್ಧಪಡುತ್ತದೆ. 'ದ್ರವ್ಯ' ತನ್ನಲ್ಲಿ ಏನೂ ಆಗಿಲ್ಲ ; ಆದರೆ 'ರೂಪ' ಪರಿಪೂರ್ಣವಾದುದಾಗಿದೆ. ಕಾಲದ ದೃಷ್ಟಿಯಿಂದ 'ದ್ರವ್ಯ' ಮೊದಲು, 'ರೂಪ' ಅನಂತರ. ಆದರೆ ಚಿಂತನೆಯ ದೃಷ್ಟಿಯಿಂದ 'ರೂಪ' ಮೊದಲು, 'ದ್ರವ್ಯ' ಅನಂತರ. ಹೀಗೆ ಅರಿಸ್ಟಾಟಲನ ಪ್ರಕಾರ 'ರೂಪ' ಅಂತಿಮ ಸತ್ಯವಾಗಿದೆ. 'ರೂಪ'ವನ್ನು ಪ್ಲೇಟೋ 'ಸಾರ್ವತ್ರಿಕ' ಅಥವಾ 'ಸಾಮಾನ್ಯ' (Idea) ಎಂದು ಕರೆದಿದ್ದಾನೆ. ಪ್ಲೇಟೋವಿನ ಸಾರ್ವತ್ರಿಕ ಸಿದ್ಧಾಂತವನ್ನು ಖಂಡಿಸುವುದರ ಮೂಲಕ ತನ್ನ ತತ್ವ ಚಿಂತನೆಯನ್ನು ಅರಿಸ್ಟಾಟಲ್ ಪ್ರಾರಂಭಿಸಿದರೂ ಕಡೆಯಲ್ಲಿ ಪ್ಲೇಟೋವಿನೊಡನೆ ಅವನು ಕೈಕುಲುಕುತ್ತಾನೆ. ಆದರೆ ಸಾರ್ವತ್ರಿಕ ಎಂಬುದು ಲೋಕಾತೀತವಲ್ಲ, ಅದು ಪ್ರತ್ಯೇಕದಲ್ಲಿಯೇ ಅಂತರ್ಗತವಾದುದು ; ಪ್ರತ್ಯೇಕದಲ್ಲಿಯೇ ಪ್ರಕಾಶಿಸುವಂತಹುದು ಎಂಬ ಅಂಶವನ್ನು ಎತ್ತಿ ಹಿಡಿಯುವುದರ ಮೂಲಕ ಅವನು ಪ್ಲೇಟೋವಿನಿಂದ ದೂರ ಸರಿಯುತ್ತಾನೆ.

೨೫

ಅರಿಸ್ಟಾಟನ ಪ್ರಕಾರ ವಿಶ್ವದ ಯಾವ ಭಾಗದಲ್ಲಿ 'ರೂಪ' 'ದ್ರವ್ಯ'ಕ್ಕಿಂತ ಹೆಚ್ಚು ಹೆಚ್ಚು ಪ್ರಮಾಣದಲ್ಲಿರುವುದೋ ಆ ಭಾಗ ಉತ್ಕೃಷ್ಟವಾದುದು. ಎಲ್ಲಿ 'ದ್ರವ್ಯ' 'ರೂಪ'ದ ಮೇಲೆ ಪ್ರಭುತ್ವವನ್ನು ಹೊಂದಿರುವುದೋ ಅದು ಸತ್ಯದಲ್ಲಿ ಸ್ವಲ್ಪ ಕಳಪೆಯಾದ ಭಾಗ. ವಿಶ್ವದ ಬುಡದಲ್ಲಿ 'ರೂಪರಹಿತ ದ್ರವ್ಯ'ವಿದೆ ; ಮತ್ತು ತುತ್ತ ತುದಿಯಲ್ಲಿ 'ದ್ರವ್ಯ ರಹಿತ ರೂಪ'ವಿದೆ. 'ರೂಪ ರಹಿತ ದ್ರವ್ಯ' ಸತ್ಯವಾದರೂ ಅದಕ್ಕೆ ಅಸ್ತಿತ್ವವಲ್ಲ ; ಹಾಗೆಯೇ 'ದ್ರವ್ಯರಹಿತ ರೂಪ' ಸತ್ಯವಾದರೂ ಅದು ಅಸ್ತಿತ್ವವನ್ನು ಹೊಂದಿಲ್ಲ. ಅಸ್ತಿತ್ವ ಇರುವುದೆಲ್ಲಾ, 'ರೂಪರಹಿತ ದ್ರವ್ಯ' ಮತ್ತು 'ದ್ರವ್ಯರಹಿತ ರೂಪ' ಈ ಎರಡರ ನಡುವೆ ಇರುವಂತಹುದಾಗಿದೆ. ಹೀಗೆ ವಿಶ್ವ ತಡೆರಹಿತ ಆರೋಹಣ ಅವರೋಹಣ ಸ್ತರಗಳನ್ನು ಪ್ರತಿನಿಧಿಸುತ್ತದೆ. ಕೆಳಗಿನ ಸ್ತರ ಮೇಲಿನ ಸ್ತರವಾಗಿ ಪರಿಣಾಮ ಹೊಂದುವುದನ್ನೇ 'ಚಲನೆ' 'ಗತಿ' ಎಂದು ಕರೆಯಬಹುದೆಂದು ಅರಿಸ್ಟಾಟಲ್ ಹೇಳುತ್ತಾನೆ. ವಿಶ್ವ ವಿಕಾ

ಶನ ತುತ್ತ ತುದಿಯಾದ ‘ದ್ರವ್ಯರಹಿತ ರೂಪ’ ವನ್ನು ಅವನು ‘ದೇವರು’ ಎಂದು ಹೆಸರಿಸುತ್ತಾನೆ. ‘ರೂಪ’ ಸಿದ್ಧ ತತ್ವವಾದ್ದರಿಂದ ದೇವರು ಮಾತ್ರ ಪರಿಪೂರ್ಣ ಸತ್ಯ. ಅಸ್ತಿತ್ವದಲ್ಲಿರುವ ವಸ್ತುಗಳು ಹೆಚ್ಚು ಕಡಿಮೆ ಅಸತ್ಯ. ಹೆಚ್ಚು ಹೆಚ್ಚು ‘ರೂಪ’ವನ್ನು ವಸ್ತು ಹೊಂದಿದ ಹಾಗೆ ಅದು ಹೆಚ್ಚು ಹೆಚ್ಚು ಸತ್ಯವಾಗುತ್ತದೆ.

೨೬

ದೇವರು ನಿಮಿತ್ತ ಕಾರಣನೂ, ರೂಪಕಾರಣನೂ ಹಾಗೂ ಅಂತಿಮಕಾರಣನೂ ಆಗಿದ್ದಾನೆ. ಅವನು ಸಾರದಲ್ಲಿ ಬುದ್ಧಿಬದ್ಧನೂ, ವಿಚಾರವಂತನೂ ಆಗಿದ್ದಾನೆ. ಅಂತಿಮಕಾರಣನಾಗಿ ಅವನು ಎಲ್ಲ ವಸ್ತುಗಳ ಗುರಿಯಾಗಿದ್ದಾನೆ. ದೇವರು ಪರಿಪೂರ್ಣ. ಚಲನೆ ಬದಲಾವಣೆಗಳಿಗೆ ಅವನು ಕಾರಣನಾಗಿದ್ದಾನೆ. ಅವನು ಚಲನೆಯ ಪ್ರಥಮ ಕಾರಣ ; ಆದರೆ ಅವನು ಅಚಲ. ಅವನು ಎಲ್ಲದರಲ್ಲಿಯೂ ಚಲನೆಯನ್ನುಂಟು ಮಾಡುತ್ತಾನೆ. ಆದರೆ ತಾನು ಮಾತ್ರ ಎಂದೆಂದಿಗೂ ಚಲನರಹಿತನಾಗಿರುತ್ತಾನೆ. ಈ ಅರ್ಥದಲ್ಲಿಯೇ ಅರಿಸ್ಟಾಟಲ್ ದೇವರನ್ನು ‘ಅಚಲನಾದ ಚಲನಕಾರ’ (Unmoved Mover) ಎಂದು ಕರೆಯುತ್ತಾನೆ.

ದೇವರು, ಅರಿಸ್ಟಾಟಲನ ಪ್ರಕಾರ ಚಿಂತನಾಸ್ವರೂಪನು. ಅವನು ಚಿಂತನೆಯನ್ನು ಕುರಿತು ಚಿಂತಿಸುತ್ತಾನೆ. ಹೀಗೆ ಅವನನ್ನು ‘ಚಿಂತನೆಯ ಮೇಲಿನ ಚಿಂತನೆ’ (Thought of thought) ಎಂದು ಅರಿಸ್ಟಾಟಲ್ ಹೇಳುತ್ತಾನೆ. ಅವನು ಸ್ವಪ್ರಜ್ಞೆಯುಳ್ಳವನು. ಅವನು ತನ್ನ ದಿವ್ಯಾನಂದದಲ್ಲಿ ಸದಾ ಮುಳುಗಿರುತ್ತಾನೆ. ತನ್ನ ಪರಿಪೂರ್ಣತೆಯನ್ನು ಕುರಿತು ಚಿಂತಿಸುವಲ್ಲಿ ಅವನ ದಿವ್ಯಾನಂದ ಅಡಗಿರುತ್ತದೆ. ಅವನು ಎಲ್ಲವನ್ನೂ ಒಂದುಗೂಡಿಸುವ ತತ್ವವಾಗಿದ್ದಾನೆ. ಅವನು ಪೂರ್ಣ ಚೈತನ್ಯ. ಅವನು ಸಿದ್ಧ, ಸಾಧಕನಲ್ಲ ಅವನು ಸಕಾಮನೂ, ಪರಿಶುದ್ಧನೂ ಆಗಿದ್ದಾನೆ. ಅವನು ಶುದ್ಧ ‘ರೂಪ’ನಾಗಿದ್ದಾನೆ. ಅವನಲ್ಲಿ ‘ದ್ರವ್ಯ’ದ ಅಂಶ ಕಿಂಚಿತ್ತಾದರೂ ಇಲ್ಲ. ಅವನೇ ಆತ್ಯಂತಿಕ ಸತ್ಯ. ಆದರೆ, ಅವನು ಪರಿಶುದ್ಧ ‘ರೂಪ’ನಾದ್ದರಿಂದ ಅವನಿಗೆ ಅಸ್ತಿತ್ವವಿದೆಯೆಂದು ಹೇಳಲಾಗದು. ಏಕೆಂದರೆ ಅಸ್ತಿತ್ವದಲ್ಲಿರುವುದೆಂದರೆ ‘ದ್ರವ್ಯ’ ಮತ್ತು ‘ರೂಪ’ಗಳು ಎಡೆಬಿಡದೆ ಜೋಡಿಸಲಾಗದ ಸಂಬಂಧವನ್ನು ಹೊಂದಿರುವುದಾಗಿದೆ. ಹೀಗೆ ದೇವರು ಆತ್ಯಂತಿಕ ಸತ್ಯವಾದರೂ ಅವನು ಅಸ್ತಿತ್ವದಲ್ಲಿಲ್ಲ ಎಂಬುದು ಅರಸ್ಟಾಟಲನ ಚಿಂತನೆಯ ವೈಶಿಷ್ಟ್ಯ. ವಿಶ್ವದ ಅಂತಿಮಕಾರಣನಾದರೂ ಅವನು ವಿಶ್ವದ ಸಂಬಂಧವನ್ನು ಕಡಿದುಕೊಂಡು ತನ್ನ ದಿವ್ಯಾನಂದದಲ್ಲಿ ಮುಳುಗಿ ಹೋಗಿದ್ದಾನೆ. ಮಾನವನ ಪ್ರಾರ್ಥನೆಗಳನ್ನು ಅವನು ಬಹುಶಃ ಆಲಿಸಲಾರ. ಏಕೆಂದರೆ, ಹಾಗೆ ಮಾಡುವುದು ಮಾನವರ ಅಪರಿಪೂರ್ಣತೆಯನ್ನು ತಾನೇ ಸ್ವಾಗತಿಸಿದಂತೆ. ಅದನ್ನು ಅವನೆಂದಿಗೂ ಮಾಡಲಾರ. ದೇವರನ್ನು ಕುರಿತ ಈ ವಾದವನ್ನು

'ಪ್ರಕೃತಿಸಿದ್ಧಮತ' (Deism) ಎಂದು ಕರೆಯಬಹುದು. ಈ ವಾದದ ಪ್ರಕಾರ ದೇವರು ಅತೀತವೇ ಹೊರತು ಅಂತರ್ಯಾಮಿಯಲ್ಲ.

ದೇವರು ವ್ಯಕ್ತಿಸ್ವರೂಪನೋ (Personal) ಅಥವಾ ವ್ಯಕ್ತಿಸ್ವರೂಪರಹಿತನೋ ಎಂಬ ತಾತ್ವಿಕ ಪ್ರಶ್ನೆಯುಂಟು. ಈ ಪ್ರಶ್ನೆಯನ್ನು ಅರಿಸ್ಟಾಟಲ್ ಬಹುಶಃ ಕೇಳಿ ಕೊಂಡಂತಿಲ್ಲ. ದೇವರು ವ್ಯಕ್ತಿಸ್ವರೂಪನೋ ಅಲ್ಲವೋ ಎಂಬುದನ್ನು ಅವನು ವಿವರವಾಗಿ ಚರ್ಚಿಸಿಲ್ಲ. ಅವನ ದೇವರ ಕಲ್ಪನೆ ವ್ಯಕ್ತಿಸ್ವರೂಪವುಳ್ಳದ್ದು ಹೌದು ಹಾಗೂ ವ್ಯಕ್ತಿ ಸ್ವರೂಪರಹಿತವಾದದ್ದೂ ಹೌದು ಎಂದು ಹೇಳಬಹುದು. ದೇವರು ಅರಿಸ್ಟಾಟಲನ ಪ್ರಕಾರ ವ್ಯಕ್ತಿಸ್ವರೂಪಉಳ್ಳವನಾಗಿದ್ದಿರಬೇಕು. ಏಕೆಂದರೆ ಹಾಗಿಲ್ಲದ ಪಕ್ಷದಲ್ಲಿ ಅವನು ನಿರಪೇಕ್ಷ ತತ್ವ (Absolute) ಎಂದು ದೇವರನ್ನು ಕರೆಯಬೇಕಾಗಿತ್ತು. ಆದರೆ ಅವನು ಹಾಗೆ ಕರೆದಿಲ್ಲ. ದೇವರು ಅವನ ಪ್ರಕಾರ ಸ್ವಪ್ರಜ್ಞೆಯುಳ್ಳವನಾಗಿದ್ದಾನೆ.

ಹಾಗೆಯೇ ದೇವರು ವ್ಯಕ್ತಿಸ್ವರೂಪರಹಿತನೆಂದೂ ಹೇಳಬಹುದು. ಏಕೆಂದರೆ, ಅರಿಸ್ಟಾಟಲನ ಪ್ರಕಾರ ದೇವರು ದ್ರವ್ಯರಹಿತನಾದ ಶುದ್ಧರೂಪ. ಶುದ್ಧರೂಪಕ್ಕೆ ಅಸ್ತಿತ್ವವಿಲ್ಲ. ಏಕೆಂದರೆ ಅಸ್ತಿತ್ವದಲ್ಲಿರುವುದೆಲ್ಲಾ ದ್ರವ್ಯ–ರೂಪಗಳ ಸಂಯುಕ್ತವಾಗಿದೆ. ಅಂದರೆ ದೇವರು ಆತ್ಯಂತಿಕ ಸತ್ಯವಾದರೂ ಅವನಿಗೆ ಅಸ್ತಿತ್ವವಿಲ್ಲವೆಂದಹಾಗಾಯಿತು. ಹೀಗೆಂದರೆ ದೇವರು ವ್ಯಕ್ತಿಸ್ವರೂಪವಲ್ಲವೆಂದು ಸ್ಪಷ್ಟವಾಗುತ್ತದೆ.

೨೭

ಈಗ ಅರಿಸ್ಟಾಟಲನ ಪ್ರಕೃತಿ ಮೀಮಾಂಸೆಯನ್ನು ಕುರಿತು ಇನ್ನೂ ವಿವರವಾಗಿ ಚರ್ಚಿಸಬಹುದು. ಆತನ ಪ್ರಕಾರ 'ರೂಪರಹಿತದ್ರವ್ಯ' ಮತ್ತು 'ದ್ರವ್ಯರಹಿತರೂಪ'— ಈ ಎರಡೂ ಅತಿರೇಕಗಳು. ಅವುಗಳಿಗೆ ಅಸ್ತಿತ್ವವಿಲ್ಲ. ಈ ಅತಿರೇಕ ಸ್ತರಗಳ ನಡುವೆ ಇರುವಂತಹುದೇ ವಿಶ್ವ ಅಥವಾ ಪ್ರಕೃತಿಯಾಗಿದೆ. ಅದು ರೂಪ ಮತ್ತು ದ್ರವ್ಯಗಳಿಂದ ತುಂಬಿ ತುಳುಕುತ್ತಿರುವ ಸಂಯುಕ್ತವಾಗಿದೆ. ಅವನ ಪ್ರಕಾರ ವಿಶ್ವದಲ್ಲಿ ಒಂದು ಕ್ರಮ, ನಿಯಮ, ವ್ಯವಸ್ಥೆಯಿದೆ. ಅದು ಯದ್ವಾತದ್ವಾವಾದ ದುರ್ವಸ್ಥೆಯಲ್ಲ. ವಿಶ್ವ ದಲ್ಲಿ ಪ್ರತಿಯೊಂದು ವಸ್ತುವೂ ತನ್ನದೇ ಆದ ಅತ್ಯುತ್ತಮ ಗುರಿಯನ್ನು ಪಡೆಯಲು ಸತತವೂ ಪ್ರಯತ್ನಪಡುತ್ತಿರುತ್ತದೆ. ವಿಶ್ವದಲ್ಲಿ ಶಿಲ್ಪಿಯ ಕೈವಾಡವಿದೆ. ವಿಶ್ವ ನಿರಂತರದಲ್ಲಿ ವಿಕಾಸವಾಗುತ್ತಿರುತ್ತದೆ. ವಿಶ್ವದ ಈ ವಿಕಾಸದಲ್ಲಿ 'ರೂಪ' 'ದ್ರವ್ಯ'ದ ಮೇಲೆ ತನ್ನ ನಿಯಂತ್ರಣವನ್ನೂ ಪ್ರಭುತ್ವವನ್ನು ಹೊಂದಿರುತ್ತದೆ. ಆದರೆ 'ದ್ರವ್ಯ' 'ರೂಪದ' ಪ್ರಭುತ್ವವನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅದಕ್ಕೆ ನಿರೋಧವನ್ನು ಉಂಟುಮಾಡುತ್ತದೆ. ಈ ಕಾರಣದಿಂದಲೇ 'ರೂಪ', ದೃಶ್ಯ ಜಗತ್ತಿನಲ್ಲಿ ಪೂರ್ಣವಾಗಿ 'ದ್ರವ್ಯ'ದಿಂದ ಮುಕ್ತವಾಗಿರಲು ಸಾಧ್ಯವಿಲ್ಲವೆಂದು ಅರಿಸ್ಟಾಟಲ್ ಹೇಳುತ್ತಾನೆ. ವಿಶ್ವ ವಿಕಾಸ ಎಂಬುದು ಈ ನಿರೋಧವನ್ನು ಮೆಟ್ಟಿ ನಿಲ್ಲುವ ಸತತ ಪ್ರಯತ್ನವಾಗಿದೆ.

ವಿಶ್ವದ ವಿಕಾಸ ಕ್ರಮವನ್ನು ಅರಿಸ್ಟಾಟಲ್ ಹೀಗೆ ವಿವರಿಸುತ್ತಾನೆ : ಕೆಳಗಿನದು ಮೇಲಿನ ದರ್ಜೆಯದಾಗಿ ವಿಕಾಸ ಹೊಂದುತ್ತದೆ. ಈ ವಿಕಾಸ ಕಾಲನಿಯಮಕ್ಕೆ ಅಧೀನವಾದುದಲ್ಲ, ಅದು ವಿಶೇಷತಃ ತಾರ್ಕಿಕ ವಿಕಾಸ. ಕೆಳಗಿನ ಸ್ತರ ಆಗಲೇ ಮೇಲಿನ ಸ್ತರವನ್ನು ಅವ್ಯಕ್ತವಾಗಿ ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುತ್ತದೆಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ. ಅವ್ಯಕ್ತವಾದುದು ವ್ಯಕ್ತವಾಗುವುದೇ ವಿಕಾಸವೆನಿಸುವುದು ; ಮಾನವ ಅವ್ಯಕ್ತವಾಗಿ ಆಗಲೇ ಮಂಗನಲ್ಲಿದ್ದು ಅನಂತರ ಹೊರಬರುವಂತೆ 'ದ್ರವ್ಯ'ದಲ್ಲಿ ಅವ್ಯಕ್ತವಾಗಿ ಅಡಗಿರುವ 'ರೂಪ' ಹೆಚ್ಚು ಹೆಚ್ಚು ಸ್ಪಷ್ಟವಾಗಿ ಹೊರಬರುವುದನ್ನೇ ಅರಿಸ್ಟಾಟಲ್ 'ವಿಶ್ವವಿಕಾಸ' ಎಂದು ಕರೆಯುತ್ತಾನೆ. ವಿಶ್ವ ಹೆಚ್ಚು ಹೆಚ್ಚು ವಿಕಾಸಹೊಂದಿದಂತೆಲ್ಲಾ 'ರೂಪ'ದ ಅಂಶ ಹೆಚ್ಚಾಗುತ್ತದೆ, ಹಾಗೆಯೇ ದ್ರವ್ಯದ ಅಂಶ ಕಡಿಮೆಯಾಗುತ್ತಾ ಹೋಗುತ್ತದೆ. ವಿಶ್ವ ವಿಕಾಸ ಒಂದು ತಡೆ ರಹಿತ ನಿರಂತರ ಕ್ರಿಯೆ. ವಸ್ತು ವಿಕಾಸ ಹೊಂದುವುದೆಂದರೆ ಹೆಚ್ಚು ಹೆಚ್ಚು ವ್ಯವಸ್ಥಾಬದ್ಧವಾಗುವುದು. ವ್ಯವಸ್ಥಾಬದ್ಧವಾಗುವುದೆಂದರೆ 'ರೂಪ', 'ದ್ರವ್ಯ'ದ ನಿರೋಧಶಕ್ತಿಯನ್ನು ಕ್ರಮಕ್ರಮವಾಗಿ ಮೆಟ್ಟಿ ನಿಂತು ಪ್ರಭುತ್ವವನ್ನು ಪಡೆಯುವುದು. ವಿಶ್ವ ನಿರ್ಜೀವ ಮತ್ತು ಸಜೀವ ಎಂದು ಎರಡು ಬಗೆಯದಾಗಿದೆ. ನಿರ್ಜೀವ ಜಗತ್ತಿನಲ್ಲಿ 'ದ್ರವ್ಯ' 'ರೂಪ'ದ ಮೇಲೆ ಪ್ರಭುತ್ವವನ್ನು ಹೊಂದಿರುತ್ತದೆ. ಅದು ವಿಶ್ವ ವ್ಯವಸ್ಥೆಯ ಅತ್ಯಂತ ಕೆಳಗಿನ ಸ್ತರವಾಗಿದೆ. ಅದರ ಮೇಲೆ ಸಜೀವ ಸ್ತರವಿದೆ ಸಜೀವ ಸ್ತರದಲ್ಲಿ 'ದ್ರವ್ಯ'ದ ಪ್ರಾಧಾನ್ಯವಿದ್ದರೂ, ಮೇಲೆ ಮೇಲೆ ಹೋದಂತೆಲ್ಲ ಆ ಪ್ರಾಧಾನ್ಯ ಕ್ರಮಕ್ರಮವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ಹಾಗೆಯೇ 'ರೂಪ' ಹೆಚ್ಚು ಹೆಚ್ಚು ನಿರ್ದಿಷ್ಟವೂ ಖಂಡಿತವೂ ಆಗುತ್ತದೆ. ಸಜೀವ ಸ್ತರದ ಮುಂದಿನ ಮೆಟ್ಟಲೇ ಸಸ್ಯ ಹಾಗೂ ಪ್ರಾಣಿ ಪ್ರಪಂಚ; ಅದರ ಅನಂತರ ಮಾನವ ಸ್ತರ ಮೊದಲಾಗುತ್ತದೆ. ಮುಂದೇನು ? ಈ ಪ್ರಶ್ನೆಗೆ ಅರಿಸ್ಟಾಟಲ್ ಯಾವ ನಿರ್ದಿಷ್ಟ ಉತ್ತರವನ್ನು ತನ್ನ ಗ್ರಂಥಗಳಲ್ಲಿ ನೀಡಿಲ್ಲ. ವಿಶ್ವ ವಿಕಾಸದಲ್ಲಿ ಅವನ ಪ್ರಕಾರ, ಮಾನವ ಸ್ತರವೇ ಕೊನೆಯ ಸ್ತರವಲ್ಲ ; ಅದನ್ನೂ ಮೀರಿ ವಿಕಾಸ ಮುಂದುವರಿಯುತ್ತದೆ. ಮಾನವ ಸ್ತರ ಗ್ರಹಗಳಾಗಿ, ನಕ್ಷತ್ರಗಳಾಗಿ ವಿಕಾಸ ಹೊಂದಿ ತುತ್ತತುದಿಯಾದ ದ್ರವ್ಯರಹಿತ "ಶುದ್ಧರೂಪ"ಸ್ಥಿತಿಯನ್ನು ತಲುಪುತ್ತದೆ. ಈ ಶುದ್ಧ ರೂಪವನ್ನೇ ಅರಿಸ್ಟಾಟಲ್ 'ದೇವರು' ಎಂದು ಕರೆಯುತ್ತಾನೆ. ಹೀಗೆ ವಿಶ್ವ ವಿಕಾಸದ ಅಂತಿಮ ಗುರಿ ದೇವರು ಎಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ. ವಿಶ್ವದ ವಿಕಾಸಕ್ರಮವನ್ನು ಸ್ಥೂಲವಾಗಿ ಈ ಕೆಳಗಿನ ನಕ್ಷೆಯಿಂದ ಸೂಚಿಸಬಹುದು.

ದ್ರವ್ಯರಹಿತ ರೂಪ (ದೇವರು)

↑

ನಕ್ಷತ್ರ ಪ್ರಪಂಚ

↑

ಗ್ರಹಗಳು

↑

ಮಾನವ ಪ್ರಪಂಚ

↑

ಸಸ್ಯ ಹಾಗೂ ಪ್ರಾಣಿ ಪ್ರಪಂಚ

↑

ಸಜೀವ ಪ್ರಪಂಚ

↑

ನಿರ್ಜೀವ ಪ್ರಪಂಚ

ರೂಪರಹಿತ ದ್ರವ್ಯ

ಅರಿಸ್ಟಾಟಲನ ಪ್ರಕಾರ ಅಂತರಿಕ್ಷ ವಸ್ತುಗಳಲ್ಲಿ (heavenly bodies) ಪ್ರಭೇದಗಳಿವೆ. ಗ್ರಹಗಳಿಗಿಂತ ನಕ್ಷತ್ರಗಳು ಉತ್ಕೃಷ್ಟವಾದವುಗಳಾಗಿವೆ. ಮಾನವ ವಿಚಾರವಾದಿ. ಅಂತರಿಕ್ಷ ವಸ್ತುಗಳಲ್ಲಿ ಇನ್ನೂ ಹೆಚ್ಚಿನ ವೈಚಾರಿಕತೆಯಿದೆಯೆಂದು ಅರಿಸ್ಟಾಟಲ್ ಭಾವಿಸುತ್ತಾನೆ. ಅವು ಅನಂತವೂ ಆನಂದದಾಯಕವೂ ಆದ ಜೀವನ ವನ್ನು ನಡೆಸುವ ಅಮರ ತತ್ವಗಳಾಗಿವೆ. ಚಲನೆ ಅವುಗಳಿಗೆ ಸ್ವಭಾವಸಿದ್ಧವಾದುದಾಗಿದೆ. ವಿಶ್ವವಿಕಾಸದ ತುತ್ತ ತುದಿಯೇ ದೇವರು. ಅವನು ದೇಶ–ಕಾಲಾತೀತನಾಗಿದ್ದಾನೆಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ. ಬುದ್ಧಿ ಅಥವಾ ವಿಚಾರ ತನ್ನನ್ನು ತಾನು ಸ್ಪಷ್ಟ ಪಡಿಸಿಕೊಳ್ಳುವಿಕೆಯೇ ವಿಶ್ವವಿಕಾಸದ ಬಹುಮುಖ್ಯ ಗುರಿಯಾಗಿದೆ.

ಹೀಗೆ ಅರಿಸ್ಟಾಟಲನ ಅಭಿಮತದಂತೆ ವಿಕಾಸ ಅಥವಾ ಪರಿಣಾಮ ಎಂಬುದು ಅನಿರ್ದಿಷ್ಟತೆಯಿಂದ ನಿರ್ದಿಷ್ಟತೆಯೆಡೆಗೆ, ವಿಷಮದಿಂದ ಸಾಮರಸ್ಯದೆಡೆಗೆ, ದ್ರವ್ಯದಿಂದ ಪರಿಪೂರ್ಣ ರೂಪದೆಡೆಗೆ ಸಾಗುವ ಮಾರ್ಗವಾಗಿದೆ. ವಿಶ್ವವೆಂಬುದು ಉದ್ದೇಶರಹಿತ ನಿಷ್ಫಲ ಘಟನೆಗಳ ಹುಟ್ಟು ಕೊನೆಯಿಲ್ಲದ ನೀರ್ಝರಿಯಲ್ಲ. ಮತ್ತೇನೆಂದರೆ ಅದು ಕ್ರಮಪಾದ ಸುವ್ಯವಸ್ಥಾಬದ್ಧವಾದ, ಬುದ್ಧಿಬದ್ಧವಾದ ಬೆಳವಣಿಗೆಯಾಗಿದೆ.

೨೮

ಮಾನವನ ಒಳಿತು ಅಥವಾ 'ಪರಮಶ್ರೇಯ'ವನ್ನು ಕುರಿತು ಅರಿಸ್ಟಾಟಲ್ ತನ್ನ ನೀತಿಶಾಸ್ತ್ರದಲ್ಲಿ ಪರಾಮರ್ಶಿಸಿದ್ದಾನೆ. ಮಾನವ ತನ್ನಲ್ಲಿನ ವಿವೇಕ ಅಥವಾ ಬುದ್ಧಿಬಲದಿಂದ ಇತರ ಪ್ರಾಣಿಗಳಿಗಿಂತ ಭಿನ್ನನೂ ಶ್ರೇಷ್ಠನೂ ಆಗಿದ್ದಾನೆ. ಕ್ರಮಕ್ರಮವಾಗಿ ಜ್ಞಾನ ಸಂಪಾದನೆ ಮಾಡಿ, ಜ್ಞಾನಪೂರ್ವಕವಾದ ಜೀವನವನ್ನು ನಡೆಸುವುದರಲ್ಲಿ ಮಾನವನ ಪರಮಶ್ರೇಯವಿದೆ ಎಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ. ಈ ವಿವೇಕವೂ ಜ್ಞಾನಪೂರ್ವಕವೂ ಆದ ಜೀವನ ಮಹದಾನಂದದಲ್ಲಿ ಪರ್ಯವಸಾನವಾಗುತ್ತದೆ.

ಅರಿಸ್ಟಾಟಲನ ಪ್ರಕಾರ ಮಾನವ ಆತ್ಮನಲ್ಲಿ ಮೂರು ಭಾಗಗಳುಂಟು : ಜ್ಞಾನ (cognition), ಭಾವ (Feeling) ಮತ್ತು ಕ್ರಿಯೆ (conation). ಇವುಗಳ ನಡುವೆ 'ಸಾಮ್ಯಾವಸ್ಥೆ' ಏರ್ಪಟ್ಟಾಗ ಅಂಥ ಆತ್ಮ 'ಧರ್ಮಾತ್ಮ' ಅಥವಾ 'ಸ್ಥಿತಪ್ರಜ್ಞ' ಎಂದು ಕರೆಯಿಸಿಕೊಳ್ಳುತ್ತದೆ. ಈ ಸಾಮ್ಯಾವಸ್ಥೆಯ ಫಲವೇ ಧೈರ್ಯ, ಶೌರ್ಯ, ಮಿತ ವ್ಯವಹಾರ ಶೀಲ, ಸದ್ಗುಣಗಳು ಇತ್ಯಾದಿ. ಅವನ ಪ್ರಕಾರ ಅತಿರೇಕಗಳಿಲ್ಲದ 'ಸ್ವರ್ಣಮಧ್ಯಮ' (Golden Mean) ವೇ ನೈತಿಕ ಜೀವನದ ತಳಹದಿ. ಯಾವುದೇ ವಿಷಯದಲ್ಲಿನ ಅತಿರೇಕಗಳನ್ನು ವರ್ಜಿಸಿ 'ಮಧ್ಯಮ ಮಾರ್ಗ'ವನ್ನು ಅನುಸರಿಸುವುದೇ ನೀತಿ, ಸದ್ಗುಣ ಎನಿಸುವುದು. ಉದಾಹರಣೆಗೆ, 'ಹುಚ್ಚು ಸಾಹಸ' ಒಂದು ಅತಿರೇಕವಾದರೆ, 'ಹೇಡಿತನ' ಮತ್ತೊಂದು ಅತಿರೇಕ. ಈ ಎರಡೂ ತ್ಯಾಜ್ಯಯೋಗ್ಯವಾದವುಗಳು. ಈ ಎರಡರ ನಡುವಿನ ಸ್ವರ್ಣ ಮಧ್ಯಮವೇ ನಿಜವಾದ 'ಧೈರ್ಯ. ಹಾಗೆಯೇ 'ಕೃಪಣತೆ' ಒಂದು ವೈಪರೀತ್ಯವಾದರೆ, 'ದುಂದುಗಾರಿಕೆ' ಮತ್ತೊಂದು ವೈಪರೀತ್ಯ. 'ಜ್ಞಾನಿ'ಯಾದವನು ಈ ಎರಡನ್ನೂ ವರ್ಜಿಸಿ 'ಔದಾರ್ಯ' ಎಂಬ ಸ್ವರ್ಣ ಮಧ್ಯಮವನ್ನು ಆರಿಸಿಕೊಳ್ಳುತ್ತಾನೆ. ವಿವೇಕಿಯಾದವನು ತನ್ನ ನಿಜ ಜೀವನದಲ್ಲಿ ಹೇಗೆ ನಡೆದುಕೊಳ್ಳುತ್ತಾನೆಂಬುದೇ ನೀತಿಯ ಮೂಲ, ನೀತಿಸೂತ್ರ. ಇದನ್ನು ಭಾರತೀಯ ನೀತಿಶಾಸ್ತ್ರದಲ್ಲಿ 'ಶಿಷ್ಟಾಚಾರ' ಎಂದು ಕರೆಯಲಾಗಿದೆ.

೨೯

ಮಾನವ 'ರಾಜಕೀಯ ಪ್ರಾಣಿ' ಎಂದು ಮೊದಲು ಹೇಳಿದವನು ಅರಿಸ್ಟಾಟಲ್. ಮಾನವ ಸಂಘ ಜೀವಿ. ಸದ್ಗುಣ ಸಂಪನ್ನನಾಗಬಯಸುವ ಅವನು ತನ್ನ ಪ್ರೀತಿಯನ್ನು ಹಂಚಿಕೊಳ್ಳಲು ಮತ್ತೊಬ್ಬರನ್ನು ಬಯಸುತ್ತಾನೆ, ಪರರೊಡನೆ ಸಂಬಂಧವನ್ನು ಹೊಂದಲು ಅಪೇಕ್ಷಿಸುತ್ತಾನೆ. ಇವೆಲ್ಲವನ್ನು ಈಡೇರಿಸಲು 'ರಾಜ್ಯ' ಎಂಬ ಸಂಸ್ಥೆಯಿರಬೇಕು. ಅದು ಜನತೆಯ ಹಿತವನ್ನು, ಪೋಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ನಿಯಮಗಳನ್ನು ವಿಧಿಸುತ್ತದೆ. ಅವುಗಳನ್ನೇ 'ಕಾನೂನು'ಗಳು ಎಂದು ಕರೆಯು

ವುವು. ಅವು ಪ್ರತಿಯೊಬ್ಬರ ಏಳಿಗೆಗೋಸ್ಕರವೇ ಮಾಡಲ್ಪಟ್ಟಿರುವುದರಿಂದ ನ್ಯಾಯಯುತವಾಗಿವೆ–ಎಂದು ಅರಿಸ್ಟಾಟಲ್ ಅಭಿಪ್ರಾಯಪಡುತ್ತಾನೆ.

ಅರಿಸ್ಟಾಟಲನ ಪ್ರಕಾರ, ಎಲ್ಲಾ ಮಾನವರೂ ಒಂದೇ ತೆರನಾಗಿಲ್ಲ. ಮನೋಧರ್ಮದಲ್ಲಿ, ಸ್ವಭಾವದಲ್ಲಿ, ಶರೀರ ಪ್ರಕೃತಿಯಲ್ಲಿ ಅವರು ಭಿನ್ನರಾಗಿದ್ದಾರೆ. ಜನರ ಯೋಗ್ಯತೆಗೆ ಅನುಸಾರವಾಗಿ ಹಕ್ಕುಬಾಧ್ಯತೆಗಳು ದೊರಕಬೇಕು, ನ್ಯಾಯ ಸಲ್ಲಬೇಕು. ಹಾಗಲ್ಲದೆ ಎಲ್ಲರಿಗೂ ಸಮಾನವಾದ ಹಕ್ಕುಬಾಧ್ಯತೆಗಳಿರಬೇಕೆಂಬ ವಾದವನ್ನು ಒಣ ಸಿದ್ಧಾಂತವೆಂದು ಅವನು ಅಭಿಪ್ರಾಯಪಡುತ್ತಾನೆ ಅವನು, ವಿದ್ಯಾಸಂಪನ್ನರೂ, ವಿವೇಕ ಬುದ್ಧಿಯುಳ್ಳವರೂ, ಸ್ಥಿತಿವಂತರೂ, ಸನ್ಮಾರ್ಗಪ್ರವರ್ತಕರೂ ಆದ ಕೆಲವೇ ಮಹಾವ್ಯಕ್ತಿಗಳ ಆಳ್ವಿಕೆಯನ್ನು (Aristocracy) ಪ್ರತಿಪಾದಿಸಿ ಎತ್ತಿ ಹಿಡಿಯುತ್ತಾನೆ. ಪ್ಲೇಟೋ ಪ್ರತಿಪಾದಿಸಿದ "ಆದರ್ಶರಾಜ್ಯ" ಸಿದ್ಧಾಂತವನ್ನು ಅವನು ಖಂಡಿಸುತ್ತಾನೆ. ಯಾರಿಗೂ ಸ್ವಂತ ಆಸ್ತಿ ಇರಕೂಡದು, ಎಲ್ಲ ಹೆಂಗಸರೂ, ಎಲ್ಲ ಮಕ್ಕಳೂ ಎಲ್ಲಾ ಗಂಡಸರಿಗೂ ಸೇರಿದವರು , ಅವರು ಒಬ್ಬೊಬ್ಬರಿಗೆ ಪ್ರತ್ಯೇಕವಾಗಿರಕೂಡದು ; ಹಾಗಿದ್ದಲ್ಲಿ 'ನಾನು', 'ನನ್ನದು', 'ಅಹಂಕಾರ' 'ಮಮಕಾರ'ಗಳು ಬೆಳೆದು ಸಮಾಜದ ಅಭಿವೃದ್ಧಿ, ಅಭ್ಯುದಯಗಳಿಗೆ ಅಡಚಣೆಯುಂಟಾಗಿ ಸಮತಾವಾದ ಸಿದ್ಧಿಸದೇ ಹೋಗುತ್ತದೆ, ಹೀಗೆಂದು ಪ್ಲೇಟೋ ತನ್ನ 'ಆದರ್ಶ ರಾಜ್ಯ'ದಲ್ಲಿ ಪ್ರತಿಪಾದಿಸಿರುವುದನ್ನು ಅರಿಸ್ಟಾಟಲ್ ನೈತಿಕ ಅಧಃಪತನದ ಜಾರುಬಂಡೆ ಎಂದು ವಿಮರ್ಶಿಸಿ ತ್ಯಜಿಸುತ್ತಾನೆ.

೩೦

ರಾಜ್ಯದ ಜನರ ಹಕ್ಕುಬಾಧ್ಯತೆಗಳನ್ನು ಕುರಿತು ಪ್ಲೇಟೋ ಮತ್ತು ಅರಿಸ್ಟಾಟಲ್ —ಈ ಇಬ್ಬರಿಗೂ ಸಮಾನವಾಗಿರುವ ಅಂಶಗಳನ್ನು ಇಲ್ಲಿ ಹೇಳಬಹುದು. ದುರದೃಷ್ಟವಶಾತ್, ಇಬ್ಬರೂ 'ಗುಲಾಮ'ರು ಎಂಬ ಪಂಗಡದವರಿಗೆ ಯಾವ ನಾಗರೀಕ ಹಕ್ಕುಬಾಧ್ಯತೆಗಳೂ ಇರಕೂಡದೆಂದೂ, ಆದರೆ ಆ ಪಂಗಡದ ಅಸ್ತಿತ್ವ ಅತ್ಯಾವಶ್ಯಕವೆಂದೂ, ದೈಹಿಕ ಕೆಲಸಗಳನ್ನು ಮಾಡಲೆಂದೇ ಅವರಿದ್ದಾರೆಂದೂ ಅಭಿಪ್ರಾಯಪಡುತ್ತಾರೆ. ಹೀಗೆ ಸರ್ವೋದಯ, ಸಮತಾವಾದಕ್ಕೆ ಅವರು ತಿಲಾಂಜಲಿಯನ್ನಿತ್ತಿದ್ದಾರೆ. ಇಬ್ಬರೂ ಚಿಂತಕರ ಪ್ರಕಾರ 'ಗುಲಾಮ' ಪಂಗಡ ಗ್ರೀಕರಾಗಿರುವುದು ಹಾಗಿರಲಿ ಮಾನವರೇ ಅಲ್ಲ ! ಆ ಪಂಗಡದ ಜನ ಅಡನಾಡಿಗಳು, ಕಾಡುಮನುಷ್ಯರು (Barbarians and the Helots) !

೩೧

ಕೊನೆಯಲ್ಲಿ ಅರಿಸ್ಟಾಟಲನ ತತ್ವ ಚಿಂತನೆಯನ್ನು ಕುರಿತು ಹೀಗೆ ಹೇಳಬಹುದು. ಪ್ಲೇಟೋವಿನ ತತ್ವಚಿಂತನೆಯನ್ನು ಖಂಡಿಸುವ ಮೂಲಕ ಅರಿಸ್ಟಾಟಲ್ ತನ್ನ ಚಿಂತನೆಯನ್ನು ಪ್ರಾರಂಭಿಸಿದರೂ, ಕೊನೆಯಲ್ಲಿ ಅವನು ಬಹು ದೊಡ್ಡ ಪ್ಲೇಟೋ ಅನುಯಾಯಿ

ಯಾಗಿ ಪರಿಣಮಿಸುತ್ತಾನೆ. ಅಂತಿಮಾರ್ಥದಲ್ಲಿ ಅವನು ಪ್ಲೇಟೋವಿನಿಂದ ಭಿನ್ನನಾಗಿಲ್ಲ. ಏಕೆಂದರೆ ಇಬ್ಬರ ಪ್ರಕಾರವೂ ಆತ್ಯಂತಿಕ ಸತ್ಯ ಒಂದೇ (Idea) ಆಗಿದೆ. ಆದರೆ ಪ್ಲೇಟೋದರ್ಶನದಲ್ಲಿನ ದೋಷಗಳನ್ನು ಅವನು ನಿವಾರಿಸಿದ್ದಾನೆಂಬುದರಲ್ಲಿ ಸಂದೇಹ ವಿಲ್ಲ. ಈ ಅರ್ಥದಲ್ಲಿ ಅರಿಸ್ಟಾಟಲನ ತಾತ್ವಿಕ ಚಿಂತನೆ ಪ್ಲೇಟೋವಿನ ಚಿಂತನೆಯ 'ಬೆಳವಣಿಗೆ' ಎಂದಷ್ಟೇ ಹೇಳಬೇಕು.

ಪ್ಲೇಟೋ 'ಚಿತ್ರಭಾಸವಾದ' (Idealism)ದ ಒಹುಮುಖ್ಯ ಪ್ರತಿಪಾದಕ ನಾದರೂ, ಅವನ ಕೈಯಲ್ಲಿ ಚಿತ್ರಭಾಸವಾದ, ಕೆಲವು ಅಮುಖ್ಯವೂ ಅನಾವಶ್ಯಕವೂ ಆದ ಅಂಶಗಳೊಡನೆ ಬೆರೆತು ಅಪುಷ್ಟವೂ ಅಸ್ಪಷ್ಟವೂ ಆಗಿತ್ತು. ಉದಾಹರಣೆಗೆ ಚಿತ್ರ ಭಾಸವಾದದ ಪ್ರಕಾರ ಆತ್ಯಂತಿಕ ಸತ್ಯ Idea ಅಥವಾ Reason ಅಥವಾ ಸಾರ್ವ ತ್ರಿಕ (Universal)ವಾಗಿದೆ. ಅದು ಅಸ್ತಿತ್ವವನ್ನು ಹೊಂದಿಲ್ಲ ಎಂಬ ಅಂಶ ಚಿತ್ರ ಭಾಸವಾದಕ್ಕೆ ಮೂಲಭೂತವಾದುದು. ಏಕೆಂದರೆ ಅದರ ಪ್ರಕಾರ ಅಸ್ತಿತ್ವದಲ್ಲಿರುವು ವೆಲ್ಲಾ ಅಪರಿಪೂರ್ಣವೂ ಆದುದರಿಂದ, ತೋರಿಕೆಯದೂ ಆಗಿದ್ದಾಗಿದೆ. ಪ್ಲೇಟೋ Idea'ಗಳು ಪರಮಸತ್ಯವೆಂದು ಹೇಳುತ್ತಾನೆ, ಆದರೆ ಅವು ಅಸ್ತಿತ್ವದಲ್ಲಿರುವ ಸ್ವತಃ ಸಿದ್ಧ ತತ್ವಗಳೆಂದು ಪ್ರತಿಪಾದಿಸುತ್ತಾನೆ. ಹೀಗೆ ಅವನಲ್ಲಿ 'ಸತ್ಯ' ಮತ್ತು 'ಅಸ್ತಿತ್ವ' ಕಲ್ಪನೆಗಳ ನಡುವೆ ಒಂದು ರೀತಿಯ ತಪ್ಪುಗ್ರಹಿಕೆ ಇದೆ. 'ಚಿತ್ರಭಾಸವಾದ' ಪ್ಲೇಟೋ ವಿನ ಅಪರಂಜಿ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಅರಿಸ್ಟಾಟಲ್ ಆ ಅಪರಂಜಿ ಯನ್ನು ಶುದ್ಧಗೊಳಿಸುತ್ತಾನೆಂದು ಮಾತ್ರ ಹೇಳಬಹುದು. Idea ಅಥವಾ Form ಬೇರೆಲ್ಲಿಯೂ ಇರದೆ 'ಪ್ರತ್ಯೇಕ'ದಲ್ಲಿಯೇ ಕಾಣಸಿಗುತ್ತದೆ ಎಂಬುದು ಅವನ ತತ್ವಚಿಂತ ನೆಯ ಕೇಂದ್ರ ಬಿಂದು. 'ಗ್ರೀಕ್ ಚಿತ್ರಭಾಸವಾದ' ಪರಿಪೂರ್ಣತೆಯನ್ನು ಪಡೆಯು ವುದು ಅರಿಸ್ಟಾಟಲನಲ್ಲಿಯೇ. ತನಗಿಂತ ಹಿಂದೆ ಇದ್ದ ಎಲ್ಲ ತತ್ವಚಿಂತನೆಗಳ ಗುಣಾಂಶ ಗಳು ಅವನಲ್ಲಿ ಹೂವಾಗಿ ಅರಳಿವೆ, ಹಾಗೂ ಪ್ರತಿಷ್ಠಾಪನೆಗೊಂಡಿವೆ. ಹಾಗೆಯೇ ಅವನು ಅವುಗಳ ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ವಿಶ್ಲೇಷಿಸಿ ಅಲ್ಲಗಳೆದಿದ್ದಾನೆ.

ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಸುವ್ಯವಸ್ಥಾಬದ್ಧವಾದ 'ಪರಿಣಾಮವಾದ'ವನ್ನು ಹುಟ್ಟು ಹಾಕಿ ಬೆಳಕಿಗೆ ತಂದವನು ಅರಿಸ್ಟಾಟಲ್. ಅವನ ವಾದನ್ನು ಮುಂದೆ ಪ್ರಸಿದ್ಧ ಜರ್ಮನ್ ತಾತ್ವಿಕನಾದ ಹೆಗಲ್ ಅನುಸರಿಸಿ 'ಪರಿಣಾಮ' ವಾದವನ್ನು ತನ್ನದೇ ಆದ ರೀತಿಯಲ್ಲಿ ಬೆಳಸಿದನು. ಹೀಗೆ ಪರಿಣಾಮವಾದ ಗ್ರೀಕ್ ಚಿಂತನೆಗೆ ಅರಿಸ್ಟಾಟಲ್ ನೀಡಿದ ಮಹಾ ಕೊಡುಗೆಯಾಗಿದೆ.

ಆದರೂ ಅರಿಸ್ಟಾಟಲನ ಚಿಂತನೆಯಲ್ಲಿ ದೋಷಗಳು ಇಲ್ಲದಿಲ್ಲ. ಅವನ ಚಿಂತನೆ 'ರೂಪ' ಮತ್ತು 'ದ್ರವ್ಯ'ಗಳ 'ಕಡುದ್ವೈತ ವಾದ'ವಲ್ಲಿ ಪರ್ಯಾವಸಾನವಾಗುತ್ತದೆ. 'ಕಡು ದ್ವೈತವಾದ' ಏನನ್ನೂ ವಿವರಿಸುವುದಿಲ್ಲವೆಂದೇ ಹೇಳಬೇಕು. ಯಾವುದರ ಬಗ್ಗೆಯೂ ಸಮರ್ಪಕವಾದ ವಿವರಣೆಯನ್ನು ನೀಡಬೇಕಾದರೆ ಅದು ಯಾವುದೇ ಒಂದು ಮೂಲ ತತ್ವದಿಂದ ಹೊರಬಂದಿರಬೇಕೆಂಬುದು ಆವಶ್ಯಕವಾಗಿ ಭಾವಿಸಬೇಕಾಗುತ್ತದೆ. 'ರೂಪ'

ಮತ್ತು 'ದ್ರವ್ಯ' ಎರಡೂ underived ಆದ್ದರಿಂದ "ರೂಪ"ವನ್ನು ತಿಳಿದರೆ ದ್ರವ್ಯವನ್ನು ತಿಳಿದಂತಾಗುವುದಿಲ್ಲ, ಹಾಗೆಯೇ 'ದ್ರವ್ಯ'ವನ್ನು ತಿಳಿದರೆ 'ರೂಪ'ವನ್ನು ತಿಳಿದಂತಾಗುವುದಿಲ್ಲ. ಆದರೆ ವಿಶ್ವ ಯಾವುದೋ ಒಂದು ಮೂಲತತ್ವದಿಂದ ಬಂದಿದೆಯೆಂದು ಭಾವಿಸಿದರೆ, ಆ ಮೂಲತತ್ವವನ್ನು ತಿಳಿದು ವಿಶ್ವವನ್ನು ತಿಳಿದಂತಾಗುತ್ತದೆ. ಈ ದೋಷಗಳು ಅವನಲ್ಲಿ ಇದ್ದಾಗ್ಯೂ ಅವನ ಚಿಂತನೆ ತನಗಿಂತ ಹಿಂದೆ ಇದ್ದ ಚಿಂತನೆಗಳಿಗಿಂತ ಹೆಚ್ಚು ಉತ್ತಮತರದ್ದಾಗಿದೆ ಎಂದು ಹೇಳಬಹುದು.

೩.೨

ಅರಿಸ್ಟಾಟಲನ ತತ್ವಚಿಂತನೆ ಭಾರತೀಯ ತತ್ವಶಾಸ್ತ್ರದ ಸಾಂಖ್ಯದರ್ಶನವನ್ನು ಬಹುವಾಗಿ ಹೋಲುತ್ತದೆ. ಎರಡೂ ಚಿಂತನೆಗಳ ನಡುವೆ ಈ ಸಾದೃಶ್ಯ ವೈದೃಶ್ಯಗಳಿವೆ :

(i) ಸಾಂಖ್ಯ ದರ್ಶನದ ಆದ್ಯ ಪ್ರವರ್ತಕರಾದ ಕಪಿಲ ಋಷಿಗಳಂತೆ ಅರಿಸ್ಟಾಟಲನೂ ಮಹಾ ಮೇಧಾವಿಯಾಗಿದ್ದನು.

(ii) ಸಾಂಖ್ಯ ದರ್ಶನದ ಪ್ರಕಾರ ಪುರುಷ ಮತ್ತು ಪ್ರಕೃತಿ ಎಂಬ ಎರಡು ತತ್ವಗಳಿವೆ. ಅವು ಎರಡೂ ಅನಂತ ,ಸ್ವತಂತ್ರ ಮತ್ತು ಎರಡೂ ಮೂಲತತ್ವಗಳು (underived). ಅಂದರೆ ಪುರುಷನಿಂದ 'ಪ್ರಕೃತಿ' ಬಂದಿಲ್ಲ, 'ಪ್ರಕೃತಿ' 'ಪುರುಷ'ನ ಮೂಲವಲ್ಲ. ಹೀಗೆ ಸಾಂಖ್ಯ ದರ್ಶನವನ್ನು 'ಕಡು ದ್ವೈತವಾದ' ಎಂದು ಕರೆಯಬಹುದು.

ಹಾಗೆಯೇ ಅರಿಸ್ಟಾಟಲನೂ ಕೂಡ 'ರೂಪ' ಮತ್ತು 'ದ್ರವ್ಯ'ಗಳೆಂಬ ಎರಡು ತತ್ವಗಳನ್ನು ಪ್ರತಿಪಾದಿಸುತ್ತಾನೆ. ಎರಡೂ ಸ್ವತಂತ್ರ, ಅನಂತ ಮತ್ತು ಮೂಲತತ್ವಗಳು (underived). ಹೀಗೆ ಅವನಲ್ಲೂ ಕಡು ದ್ವೈತವಾದ (utter Dualism)ದ ಪ್ರತಿಪಾದನೆಯಿದೆ.

(iii) ಎರಡೂ 'ದ್ವಂದ್ವ' (ಸಾಂಖ್ಯದರ್ಶನದ 'ಪುರುಷ' – 'ಪ್ರಕೃತಿ', ಅರಿಸ್ಟಾಟಲನ 'ರೂಪ' 'ದ್ರವ್ಯ')ಗಳ ತತ್ವಚಿಂತನೆಗಳಾಗಿವೆ.

(iv) ಸಾಂಖ್ಯ ದರ್ಶನದಂತೆ, ಅರಿಸ್ಟಾಟಲನೂ ತನ್ನ ಸಿದ್ಧಾಂತಕ್ಕೆ ತರ್ಕದ ಆಧಾರವನ್ನು ತೋರಿಸಿದ್ದಾನೆ. ಸಾಂಖ್ಯ ಇತರ ಕೆಲವು ಭಾರತೀಯ ದರ್ಶನಗಳಂತೆ ಶ್ರುತಿಯ ಸಹಾಯವನ್ನು ಕೋರಿಲ್ಲ.

(v) ಸಾಂಖ್ಯ ದರ್ಶನ 'ಸತ್ಕಾರ್ಯವಾದ' ವನ್ನು ಪ್ರತಿಪಾದಿಸಿ ಪ್ರಬಲವಾಗಿ ಸಮರ್ಥಿಸುತ್ತದೆ. ಅದರ ಪ್ರಕಾರ 'ಕಾರ್ಯ' (Effect), 'ಕಾರಣ' (cause)ಗಳು ಎರಡು ಪರಸ್ಪರ ಸಂಬಂಧವಿಲ್ಲದ ವಿಭಿನ್ನ ಅಂಶಗಳಲ್ಲ. 'ಕಾರ್ಯ' ಎಂಬುದು ಆಗಲೇ 'ಕಾರಣ'ದಲ್ಲಿ ಅವ್ಯಕ್ತವಾಗಿ ಅಡಗಿರುತ್ತದೆ. ಸೂಕ್ತ ಸನ್ನಿವೇಶದಲ್ಲಿ ಅದು ಹೊರಬರುತ್ತದೆ. ಅಮೂರ್ತವಾಗಿದ್ದ ಕಾರ್ಯ ಮೂರ್ತವಾಗುತ್ತದೆ. ಅಸ್ಪಷ್ಟವೂ ಅವ್ಯಕ್ತವೂ ಆಗಿದ್ದುದು ಸ್ಪಷ್ಟವೂ, ವ್ಯಕ್ತವೂ ಆಗುತ್ತದೆ. ಅಂದರೆ 'ಪ್ರಕೃತಿ'ಯಲ್ಲಿ ಆಗಲೇ ಬುದ್ಧಿ,

ಅಹಂಕಾರ, ಮನಸ್ ಮುಂತಾದುವುಗಳು ಅವ್ಯಕ್ತವಾಗಿ ಅಡಗಿದ್ದು ಪುರುಷನ 'ಸನ್ನಿಧಿ' ಮಾತ್ರದಿಂದ ವಿಕಾಸವಾಗುವುದರ ಮೂಲಕ ಅವುಗಳನ್ನು ವ್ಯಕ್ತಗೊಳಿಸುತ್ತದೆ.

ಹಾಗೆಯೇ ಸಂಕೀರ್ಣವಾದ 'ದ್ರವ್ಯ'ದಲ್ಲಿ ಆಗಲೇ ಅವ್ಯಕ್ತವಾಗಿರುವ 'ರೂಪ' ಹೆಚ್ಚು ಹೆಚ್ಚು ಸ್ಪಷ್ಟವೂ ಮೂರ್ತವೂ ಆದಂತೆಲ್ಲ ವಿಶ್ವ ಹೆಚ್ಚು ಹೆಚ್ಚು ಸ್ಪಷ್ಟವಾಗಿ ವಿಕಾಸಗೊಳ್ಳುತ್ತಾ ವ್ಯಕ್ತವಾಗುತ್ತದೆ.

ಹೀಗೆ ಎರಡು ದರ್ಶನಗಳು 'ಪರಿಣಾಮ'ವಾದಗಳಾಗಿವೆ.

(vi) 'ಪರಿಣಾಮ'ವಾದವನ್ನು ವಿವರವಾಗಿ ಶಾಸ್ತ್ರೀಯವಾಗಿ ಭಾರತೀಯ ತತ್ವ ಶಾಸ್ತ್ರದಲ್ಲಿ ಮುಂದಿಟ್ಟವನು ಕಪಿಲ ಋಷಿ. ಹಾಗೆಯೇ ಇಡೀ ಪಾಶ್ಚಾತ್ಯ ತತ್ವಚಿಂತನೆ ಯಲ್ಲಿ 'ಪರಿಣಾಮ'ವಾದವನ್ನು ಮೊಟ್ಟ ಮೊದಲ ಬಾರಿಗೆ ಹುಟ್ಟುಹಾಕಿ ಬೆಳೆಸಿ ದವನು ಅರಿಸ್ಟಾಟಲನಾಗಿದ್ದಾನೆ.

(vii) ಸಾಂಖ್ಯ ದರ್ಶನ ಹಾಗೂ ಅರಿಸ್ಟಾಟಲನ ಚಿಂತನೆ—ಎರಡೂ ವಿಶ್ವ ಸತ್ಯವಾದುವೆಂದೂ, 'ಮಿಥ್ಯೆ'ಯಿಲ್ಲವೆಂದೂ ಪ್ರತಿಪಾದಿಸುತ್ತವೆ.

(viii) ಸಾಂಖ್ಯ ದರ್ಶನದ 'ಪುರುಷ' ತತ್ವ, ಅರಿಸ್ಟಾಟಲನ 'ರೂಪ' ತತ್ವ ವನ್ನು ಬಹುವಾಗಿ ಹೋಲುತ್ತದೆಂದು ಹೇಳಬಹುದು. 'ಪುರುಷ' ನಂತೆ 'ರೂಪ'ವೂ ಚೈತನ್ಯ ತತ್ವವಾಗಿದ್ದು ವೈಚಾರಿಕತೆಯ ಪ್ರತೀಕವಾಗಿದೆ.

(ix) ಪುರುಷನ 'ಸನ್ನಿಧಿ' ಮಾತ್ರದಿಂದ, ಪ್ರಕೃತಿ ಬುದ್ಧಿ, ಅಹಂಕಾರ, ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚ ಸೂಕ್ಷ್ಮ ಭೂತಗಳು, ಪಂಚ ಸ್ಥೂಲ ಭೂತಗಳೆಂಬ ಇಪ್ಪತ್ತೊರು ತತ್ವಗಳಾಗಿ ಪರಿಣಾಮಹೊಂದು ತ್ತದೆ.

ಹಾಗೆಯೇ 'ದ್ರವ್ಯ' 'ರೂಪ'ದ ಪ್ರಭುತ್ವಕ್ಕೆ ಹೆಚ್ಚು ಹೆಚ್ಚು ಒಳಗಾದಾಗ ಸಜೀವ ಪ್ರಪಂಚ, ಸಸ್ಯ ಮತ್ತು ಪ್ರಾಣಿ ಪ್ರಪಂಚ, ಮಾನವ, ಗ್ರಹಗಳು, ಅಂತರಿಕ್ಷ ಪದಾರ್ಥಗಳಾದ ಸೂರ್ಯ, ಚಂದ್ರ, ನಕ್ಷತ್ರಗಳಾಗಿ ವಿಕಾಸಹೊಂದಿ ದೈವತತ್ವದ ಆವಿಷ್ಕಾರದಲ್ಲಿ ಪರ್ಯಾವಸಾನವಾಗುತ್ತದೆ.

ಆದರೆ, ಸಾಂಖ್ಯದರ್ಶನ, ಪ್ರಕೃತಿ ವಿಕಾಸದ ಅಂತಿಮ ಅವಸ್ಥೆ 'ದೇವರು' ಎಂದು ಪ್ರತಿಪಾದಿಸುವುದಿಲ್ಲ. ಪ್ರಾಚೀನ ಸಾಂಖ್ಯದರ್ಶನ ದೇವರ ಅಸ್ತಿತ್ವವನ್ನು ನಿರಾಕರಿಸು ತ್ತದೆ. ಆದುದರಿಂದಲೇ ಅದನ್ನು ನಿರೀಶ್ವರ ಸಾಂಖ್ಯ ಎನ್ನುವರು. ಆದರೆ ಪರಸ್ಪರ ವಿರುದ್ಧ ತತ್ವಗಳಾದ 'ಪುರುಷ–ಪ್ರಕೃತಿ'ಗಳನ್ನು ಒಂದು ಗೂಡಿಸುವ ತತ್ವವಾಗಿ, ದೇವರನ್ನು ಅವಶ್ಯಕನಾಗಿ ಒಪ್ಪಬೇಕೆಂದು ತಥ್ಯಪರಾಮರ್ಶೆ ನಡೆದು ಸಾಂಖ್ಯದರ್ಶನ 'ಸೇಶ್ವರ ಸಾಂಖ್ಯ'ವಾಗುತ್ತದೆ. ಅದೇನೇ ಇರಲಿ, ಅರಿಸ್ಟಾಟಲನ ಪ್ರಕಾರ, ವಿಕಾಸ ವಾದದ ಅಂತಿಮ ಗುರಿ ದೈವತ್ವಕ್ಕೇರುವುದಾಗಿದೆ. ಪ್ರಪಂಚದ ಪ್ರತಿಯೊಂದು ವಸ್ತು ಗಳೂ ತಮ್ಮ ತಮ್ಮ ಗುರಿಯನ್ನು ಸಾಧಿಸಿಕೊಳ್ಳುವುದಕ್ಕಲ್ಲದೆ, ಅಂತಿಮಗುರಿಯಾದ

ಚೈನತ್ವಕ್ಕೇರಲೆಂದೇ ವಿಶ್ವವಿಕಾಸಹೊಂದುತ್ತದೆಂದು ಅರಿಸ್ಟಾಟಲ್ ಸ್ಪಷ್ಟವಾಗಿ ಪ್ರತಿಪಾದಿಸುತ್ತಾನೆ.

ಪುರುಷನಿಗೆ ಭೋಗವನ್ನೊದಗಿಸುವುದಕೋಸ್ಕರವಾಗಿಯೇ ಪ್ರಕೃತಿ ಪರಿಣಾಮವನ್ನು ಹೊಂದುತ್ತದೆ ಎಂದು ಸಾಂಖ್ಯದರ್ಶನ ಸಾರುತ್ತದೆ. ಪ್ರಕೃತಿಯ ಭೋಗದ ಬಲೆಗೆ ಸಿಕ್ಕಿಬೀಳುವ ಪುರುಷ, ಆ ಬಂಧನದಿಂದ ಹೊರಬರುವ ಅಂದರೆ ಮುಕ್ತನಾಗುವ ಪ್ರಯತ್ನಕ್ಕೆ ಅದು ನಾಂದಿಯಾಗುತ್ತದೆ.

(x) ಸಾಂಖ್ಯ ದರ್ಶನದಲ್ಲಿ, 'ಪುರುಷ'ನನ್ನು 'ಉದಾಸೀನ'ನೆಂದೂ, 'ನಿಷ್ಕ್ರಿಯ'ನೆಂದೂ, 'ಪ್ರಕೃತಿ' ಕ್ರಿಯಾತ್ಮಕವಾದುದೆಂದೂ ಹೇಳಿದ್ದರೆ, ಅರಿಸ್ಟಾಟಲ್ 'ರೂಪ' ಮತ್ತು 'ದ್ರವ್ಯ'ಗಳೆರಡೂ ಕ್ರಿಯಾತ್ಮಕವಾದುವುಗಳೆಂದು ಅಭಿಪ್ರಾಯಪಡುವಂತೆ ಕಂಡುಬರುತ್ತದೆ. ಅಡಚಣೆಯನ್ನು ನಿರೋಧವನ್ನು ಉಂಟುಮಾಡುವ ಕ್ರಿಯಾತ್ಮಕ 'ದ್ರವ್ಯ'ವನ್ನು ರೂಪ ಮೆಟ್ಟಿ ನಿಲ್ಲುತ್ತದೆ. ಆಗಲೇ ವಿಶ್ವ ವಿಕಾಸಹೊಂದುತ್ತದೆ.

(xi) ಸಾಂಖ್ಯ ದರ್ಶನವಷ್ಟೇ ಅಗಿರದೆ ಯೋಗವನ್ನು ಸಾಧನಮಾರ್ಗವಾಗಿ ಮುಂದಿಡುತ್ತದೆ. ಆದರೆ ಅರಿಸ್ಟಾಟಲನ ತತ್ವಚಿಂತನೆಯಲ್ಲಿ ಆ ಧ್ಯೇಯವನ್ನು ಮುಟ್ಟುವಂತೆ ಮಾಡುವ ಸಾಧನೆಯ ಬಗ್ಗೆ ವಿವರವಾದ ಪ್ರಸ್ತಾಪವಿಲ್ಲ.

(xii) ಸಾಂಖ್ಯದರ್ಶನ 'ವಸ್ತುಸ್ಥಿತಿವಾದ' (Realism)ವಾಗಿದೆ. ಅಂದರೆ ವಸ್ತುಗಳಿಗೆ ಪ್ರತ್ಯೇಕ ಹಾಗೂ ಸ್ವತಂತ್ರ ಅಸ್ತಿತ್ವವನ್ನು ಅದು ನೀಡುತ್ತದೆ. ಆದರೆ ಅರಿಸ್ಟಾಟಲ್ ಪ್ರಾರಂಭದಲ್ಲಿ ವಸ್ತುಸ್ಥಿತಿವಾದಿಯಾದರೂ ಕೊನೆಯಲ್ಲಿ ಚಿತ್ಪ್ರಧಾನವಾದಿಯೂ (Idealist) ನಿರಪೇಕ್ಷವಾದಿಯೂ (Absolutist) ಆಗಿಬಿಡುತ್ತಾನೆ.

(xiii) ಕೊನೆಯಲ್ಲಿ ಒಂದು ಪ್ರಮುಖ ಸಂಗತಿಯನ್ನು ಹೇಳಿ ಈ ತೌಲನಿಕ ಅಧ್ಯಯನವನ್ನು ಮುಗಿಸಬಹುದು. ಭಾರತೀಯ ವಿಚಾರ ಪರಂಪರೆಯ ಮೇಲಿನ ಸಾಂಖ್ಯ ದರ್ಶನದ ಪ್ರಭಾವ ಅಗಾಧವಾದುದಾಗಿದೆ. ವೇದಾಂತದ ಪ್ರಭಾವವನ್ನು ಬಿಟ್ಟರೆ ಎರಡನೆಯದೇ ಸಾಂಖ್ಯವಾಗಿದೆ. ಹಾಗೆಯೇ ಇಡೀ ಪಾಶ್ಚಾತ್ಯ ತತ್ವಚಿಂತನೆಯ ಮೇಲೆ ಅರಿಸ್ಟಾಟಲ್ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾನೆ. 'ಯಾರು ಜ್ಞಾನಿಗಳೋ ಅವರ ಗುರು ಅವನು' ಎನ್ನುವಷ್ಟರಮಟ್ಟಿಗೆ ಅವನ ಕೀರ್ತಿ ಪಸರಿಸಿದೆ.

೩೩

ಅರಿಸ್ಟಾಟಲ್ ತನ್ನ ತತ್ವಚಿಂತನೆಯಲ್ಲಿ 'ಪದಾರ್ಥಗಳ' (categories)ನ್ನು ಕುರಿತು ಪರಾಮರ್ಶಿಸಿದ್ದಾನೆ, 'ಪದಾರ್ಥ'ವೆಂದರೆ ಯಾವ ಕರ್ತೃವಿನ ವಿಷಯ ವಾಗಲೀ ಆಗಲಿ ಎಷ್ಟೆಷ್ಟು ವಿಶೇಷಣಗಳನ್ನು ಹೇಳಬಹುದೋ ಅದು. ಅವನು ಹತ್ತು 'ಪದಾರ್ಥ'ಗಳನ್ನು ಪ್ರತಿಪಾದಿಸುತ್ತಾನೆ : 1. ದ್ರವ್ಯ (substance), 2. ಗುಣ (Quality) 3. ಪರಿಮಾಣ (Quantity), 4. ಸಂಬಂಧ (Relation), 5. ದಿಕ್ (Space), 6. ಕಾಲ (Time), 7. ಆಸನ (Position), 8. ವಸ್ತು

ಸ್ಥಿತಿ (Mode of Being or State), 9. ಕರ್ಮ (action) ಮತ್ತು 10. ಅನುಭವ (Affection).

ಒಂದು ನಿರ್ದಿಷ್ಟ ಉದಾಹರಣೆಯನ್ನು ತೆಗೆದುಕೊಳ್ಳುವುದರ ಮೂಲಕ 'ಪದಾರ್ಥ'ವೆಂದರೇನೆಂಬುದನ್ನು ವಿವರಿಸಬಹುದು. ವಸ್ತುಗಳು 'ವಸ್ತುತ್ವ'ವನ್ನು ಹೊಂದಿವೆ. ಈ ಅರ್ಥದಲ್ಲಿ ಅವುಗಳನ್ನು 'ದ್ರವ್ಯ'ಗಳು ಎನ್ನಬಹುದು. ಅವು ದೇಶ (ದಿಕ್) ಹಾಗೂ ಕಾಲಗಳಲ್ಲಿರುವಂಥವುಗಳಾಗಿವೆ. ಅವುಗಳಿಗೆ ಗುಣಗಳೂ, ಉಪಗುಣಗಳೂ ಉಂಟು. ಅವುಗಳನ್ನು ಗಣಿಸಬಹುದು (ಪರಿಮಾಣ). ಅವು ಇತರ ವಸ್ತುಗಳೊಂದಿಗೆ ಸಂಬಂಧವನ್ನು ಹೊಂದಿವೆ ಇತ್ಯಾದಿ.

ಭಾರತೀಯ ದರ್ಶನವಾದ ವೈಶೇಷಿಕ ಸಿದ್ಧಾಂತದಲ್ಲೂ 'ಪದಾರ್ಥ'ಗಳ ವಿಚಾರ ವಿಮರ್ಶೆಯಿದೆ. ವೈಶೇಷಿಕರ ಪ್ರಕಾರ ಯಾವುದನ್ನು ಹೆಸರಿಸಬಹುದೋ, ತಿಳಿಯಬಹುದೋ ಹಾಗೂ ವರ್ಗೀಕರಿಸಬಹುದೋ ಅದೇ 'ಪದಾರ್ಥ'. ಅವರು ಸಪ್ತ ಪದಾರ್ಥಗಳನ್ನು ಮಾತ್ರ ಒಪ್ಪುತ್ತಾರೆ. ಅವುಗಳು ಯಾವುವೆಂದರೆ: 1. ದ್ರವ್ಯ (Substance) 2. ಗುಣ (Quality) 3. ಕರ್ಮ (Action), 4. ಸಾಮಾನ್ಯ (Universal), 5. ಸಮವಾಯ (Inherence), 6. ವಿಶೇಷ (Particular) ಮತ್ತು 7. ಅಭಾವ (Non-existence).

ವೈಶೇಷಿಕರು ಮತ್ತು ಅರಿಸ್ಟಾಟಲ್‌ರ 'ಪದಾರ್ಥ' ಸಿದ್ಧಾಂತದ ತೌಲನಿಕ ಪರಾಮರ್ಶೆಯನ್ನು ಈ ಕೆಳಗೆ ಕಂಡಂತೆ ಮಾಡಬಹುದು :

(i) ವೈಶೇಷಿಕ ದರ್ಶನದಲ್ಲಿ ಪ್ರತಿಪಾದಿತವಾಗಿರುವ 'ಪದಾರ್ಥ'ಗಳು ಅರಿಸ್ಟಾಟಲನ ಪದಾರ್ಥಗಳಿಗಿಂತಲೂ ಮೂಲಭೂತವಾದವುಗಳಾಗಿವೆ. ಅವು ಸಂಖ್ಯೆಯಲ್ಲಿ ಏಳೇ ಆಗಿದ್ದರೂ, ಅರಿಸ್ಟಾಟಲ್‌ನ ಹತ್ತು ಪದಾರ್ಥಗಳನ್ನೂ ತಮ್ಮಲ್ಲಿ ಒಳಗೊಂಡಿವೆ.

(ii) ವೈಶೇಷಿಕ ದರ್ಶನದ 'ಸಮವಾಯ' ಮತ್ತು 'ಅಭಾವ' ಕಲ್ಪನೆಗಳಿಗೆ ಸರಿಸಮಾನವಾದ 'ಪದಾರ್ಥ'ಗಳು ಅರಿಸ್ಟಾಟಲನಲ್ಲಿ, ಏಕೆ ಇಡೀ ಪಾಶ್ಚಾತ್ಯ ಚಿಂತನೆಯಲ್ಲಿಯೇ ಕಾಣಸಿಗುವುದಿಲ್ಲ. ಹೀಗೆ ಅವು ವೈಶೇಷಿಕ ದರ್ಶನಕ್ಕೆ ವಿಶಿಷ್ಟವಾದವುಗಳಾಗಿವೆ. ಆದರೆ ವೈಶೇಷಿಕರ 'ವಿಶೇಷ' ಪಾಶ್ಚಾತ್ಯರ 'Differentia'ವನ್ನು ಸರಿಸುಮಾರಾಗಿ ಹೋಲುತ್ತದೆ ಎನ್ನಬಹುದು.

(iii) ವೈಶೇಷಿಕರ 'ಪದಾರ್ಥ ಪರಾಮರ್ಶೆ' ಪ್ರಧಾನತಃ ತಾತ್ವಿಕವಾದುದು. ಆದರೆ ಅರಿಸ್ಟಾಟಲನ ಪದಾರ್ಥಗಳನ್ನು ನೋಡುವ ದೃಷ್ಟಿ ತಾರ್ಕಿಕವಾದುದಾಗಿದೆ. ಅದು ಚಿಂತನೆಯ ಸ್ವರೂಪವನ್ನು ಸೂಚಿಸುತ್ತದೆ.

೩೪

ನ್ಯಾಯ ಅಥವಾ ತರ್ಕವನ್ನು ಶಾಸ್ತ್ರೀಯ ರೀತಿಯಲ್ಲಿ ಕಟ್ಟಿ ಬೆಳಸಿದವನು ಅರಿಸ್ಟಾಟಲ್. ತರ್ಕ, ತತ್ವಶಾಸ್ತ್ರಕ್ಕೆ ಅತ್ಯಾವಶ್ಯಕವಾದದ್ದು. ತರ್ಕವಿಲ್ಲದ ಪ್ರತ್ಯೇಕ

ಗಳನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ತರ್ಕಶಾಸ್ತ್ರದ ವಿಷಯ 'ಚಿಂತನೆ'ಯನ್ನು ಶಾಸ್ತ್ರೀಯವಾಗಿ ವಿಚಾರಮಾಡುವುದಾಗಿದೆ. ವಿಷಯವನ್ನು ಶಾಸ್ತ್ರೀಯವಾಗಿ ಪರಿಶೀಲಿಸುವುದೇ 'ಚಿಂತನೆ' ಎನಿಸುವುದು. ಚಿಂತನೆ 'ಪ್ರಮೇಯ' (Judgements)ಗಳನ್ನು ಒಳಗೊಂಡಿರುತ್ತದೆ. ಭಾವಗಳ ಒಟ್ಟು ಸೇರುವಿಕೆಯೇ 'ಪ್ರಮೇಯ' ಅಥವಾ 'ಪ್ರಜ್ಞೆ' ಎನಿಸುವುದು. ಅಂಥ ಚಿಂತನೆಯನ್ನು 'ಅನುಮಾನ' (Inference) ಎನ್ನಬಹುದು. ಭಾವನೆಯನ್ನು ಶಬ್ದದ ಮೂಲಕ ಸೂಚಿಸಿದಾಗ 'ಪದ'(Term) ವಾಗುವುದು. ಪ್ರಮೇಯವನ್ನು ಭಾಷೆಯ ಮೂಲಕ ವ್ಯಕ್ತಪಡಿಸಿದಾಗ ಅದು ಪ್ರಮೇಯ ವಾಕ್ಯ (Proposition)ವೆನಿಸುವುದು. ಚಿಂತನೆಯ ಸ್ವರೂಪ, ಜ್ಞಾನವನ್ನು ಪಡೆಯುವ ವಿವಿಧ ಮಾರ್ಗಗಳನ್ನು ಕುರಿತು ಅರಿಸ್ಟಾಟಲ್ ದೀರ್ಘವಾಗಿ ತನ್ನ ಜ್ಞಾನಮೀಮಾಂಸೆಯಲ್ಲಿ ಚರ್ಚಿಸಿದ್ದಾನೆ. ಅವನು ಪ್ರತಿಪಾದಿಸಿದ 'ಅನುಮಾನ' ಭಾರತೀಯ ಷಡ್ದರ್ಶನಗಳಲ್ಲಿ ಒಂದಾದ 'ನ್ಯಾಯ ದರ್ಶನ'ದ 'ಅನುಮಾನ' ಪ್ರಮಾಣದೊಡನೆ ಸಾದೃಶ್ಯ ವೈದೃಶ್ಯಗಳನ್ನು ಹೊಂದಿದೆ.

ಅಡಿ ಟಿಪ್ಪಣಿಗಳು

1. ನೋಡಿ. ಪ್ಲೇಟೋವಿನ 'Republic', ಅಧ್ಯಾಯ : 6
2. ಅದೇ, ಅಧ್ಯಾಯ : 7
3. ನೋಡಿ. ಪ್ಲೇಟೋವಿನ 'Phaedrus'
4. ಅದೇ.

ಎಲ್ಲಕ್ಕೂ ಕಾರಣವಾದ ಎಲ್ಲವನ್ನೂ ಸೇರಿಸುವ, ಎಲ್ಲದರ ಮನಕ್ಕೂ ಗುರಿಯಾದ ಸತ್ತಿನ ಸ್ವರೂಪವನ್ನು ತಿಳಿಸುವ ಶಾಸ್ತ್ರವನ್ನು ಅರಿಸ್ಟಾಟಲ್ ತತ್ತ್ವಶಾಸ್ತ್ರವೆಂದು ಕರೆದಿರುತ್ತಾನೆ. ಇವನ ತತ್ತ್ವಶಾಸ್ತ್ರದ ಮೂಲತತ್ತ್ವಗಳು ಎರಡು : ಪರಮಚೈತನ್ಯ ಮತ್ತು ಮೂಲಭೂತ ವಸ್ತು. ಮೂಲಭೂತ ವಸ್ತು ಪೂರ್ಣವಾಗಿ ಜಡವಾದದ್ದು, ಅವ್ಯಕ್ತವಾದದ್ದು, ಚಲನೆ ಇಲ್ಲದ್ದು, ಮೂಲಭೂತ ವಸ್ತು ಪ್ರತ್ಯೇಕಗಳನ್ನು ಒದಗಿಸುತ್ತದೆ, ಚೈತನ್ಯರೂಪಗಳನ್ನು ಒದಗಿಸುತ್ತದೆ. ಇವೆರಡರ ಸಂಯೋಗದಿಂದ ವಿವಿಧ ವಸ್ತುಗಳಾಗುತ್ತವೆ. ಆಯಾರೂಪಕ್ಕೆ ಅನುಗುಣವಾಗಿ ಒಂದೊಂದು ವಸ್ತುವೂ ಬೇರೆ ಬೇರೆ ಅಂತಸ್ತನ್ನು ಪಡೆಯುತ್ತದೆ. ಪೃಥ್ವಿ, ಅಪ್, ವಾಯು, ತೇಜಸ್, ಸಸ್ಯಗಳು, ಪ್ರಾಣಿಗಳು, ಮಾನವರು ಹೀಗೆ ಕ್ರಮವಾಗಿ ಒಂದಕ್ಕಿಂತ ಒಂದು ಮೇಲಿನ ಅಂತಸ್ತಿನವು. ಎಲ್ಲಕ್ಕೂ ಕೆಳಗಿನದಾದ ಭೌತವಸ್ತುವಿನಿಂದ ಹಿಡಿದು ಎಲ್ಲಕ್ಕೂ ಮೇಲಿನದಾದ ಚೈತನ್ಯದವರೆಗೆ ಪ್ರಕೃತಿಯಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಬೇರೆ ಬೇರೆ ಅಂತಸ್ತಿನ ವಸ್ತುಗಳಿವೆ. ಕೆಳಗಿನ ಅಂತಸ್ತಿನ ವಸ್ತುಗಳು ಮೇಲಿನ ಅಂತಸ್ತಿನ ವಸ್ತುಗಳಿಗೆ ಆಧಾರಗಳು : ಅವು ತಮಗಿಂತ ಮೇಲಿನವಾದ ವಸ್ತುಗಳಿಗೆ ಆಧಾರಗಳು. ಹೀಗೆ ಪ್ರಕೃತಿಯಲ್ಲಿ ಕ್ರಮವಾದ ಏರಿಕೆ, ಹೊಂದಿಕೆ ಇದೆ.

[ಕನ್ನಡ ವಿಶ್ವಕೋಶ, ಸಂಪುಟ ಒಂದು, ಪು. ೪೮೩]

ಸಿ. ಎಂ. ಮುನಿರಾಮಪ್ಪ
ವೈ. ಎ. ದೇವಪಾಲ್

ಮೈಸೂರು ನಗರದ ವ್ಯಾಪ್ತಿಯಲ್ಲೇಕೆ ಇಷ್ಟೊಂದು ಕೈಗಾರಿಕೆಗಳು ?

ಮೈಸೂರು ಜಿಲ್ಲೆ ಪ್ರಕೃತಿಯ ಒಂದು ವರದಾನ. ಪಶ್ಚಿಮದಲ್ಲಿ ತುಂಬಿ ತುಳುಕುವ ಹಸಿರು ನೆಲೆ ಕೊಡಗು. ಈ ಪ್ರದೇಶದಿಂದ ಹರಿದು ಬರುವ ನದಿಗಳು ಮೈಸೂರು ಜಿಲ್ಲೆಯನ್ನಲ್ಲದೆ ಪಕ್ಕದ ಜಿಲ್ಲೆಗಳಾದ ಹಾಸನ ಮತ್ತು ಮಂಡ್ಯ ಜಿಲ್ಲೆಗಳನ್ನು ಸಹ ಹಸಿರಾಗಿಸಿವೆ. ಈ ಮೂಲಕವಾಗಿ ಬರುವ ಅನೇಕ ಕಚ್ಚಾ ಪದಾರ್ಥಗಳಿಂದ ಮೈಸೂರು ಜಿಲ್ಲೆ ವಿವಿಧ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳ ಬೀಡಾಗಿದೆ.

ಮೈಸೂರು ಜಿಲ್ಲೆಯ ಜನ ತಮ್ಮ ತುಂಬು ಹೃದಯದ ನಮನಗಳನ್ನು ಅಂದಿನ ರಾಜರ್ಷಿ ಎನಿಸಿಕೊಂಡ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರಿಗೆ ಸಲ್ಲಿಸಬೇಕು. ಅವರು ತಮ್ಮ ಆಡಳಿತ ಕಾಲದಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದರು.

ಜಿಲ್ಲೆಯ ಭೌಗೋಳಿಕ ನಕ್ಷೆ

ಹನ್ನೊಂದು ಸಾವಿರದ ಒಂಭೈನೂರ ನಲವತ್ತೆಂಟು ಚದರ ಕಿ.ಮೀ. ವಿಸ್ತೀರ್ಣವಿರುವ ಮೈಸೂರು ಜಿಲ್ಲೆಯಲ್ಲಿ ಸಾವಿರದ ಒಂಭೈನೂರ ಎಂಭತ್ತೊಂದರ ಜನಗಣತಿ ಪ್ರಕಾರ 26·32 ಲಕ್ಷ ಜನರಿದ್ದಾರೆ. ಇದರಲ್ಲಿ ಶೇ 50·4 ರಷ್ಟು ಗಂಡಸರು ಮತ್ತು ಶೇ 49·6 ರಷ್ಟು ಹೆಂಗಸರು.

ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ 26 ರಷ್ಟು ಅರಣ್ಯ ಸಂಪತ್ತು 1971ರಲ್ಲಿ ಇತ್ತು. ಆದರೆ ವಿವೇಚನಾರಹಿತ ಸರಕಾರ ಹಾಗು ದೂರಾಲೋಚನೆಯಿಲ್ಲದ ಜನರಿಂದಾಗಿ ಇಂದು ಕಾಡು ಪ್ರತಿಶತ 2 ರಷ್ಟು ಕಡಿಮೆಯಾಗಿದೆ.

ಈ ಜಿಲ್ಲೆಯಲ್ಲಿ ಅನೇಕ ನದಿಗಳು ಹರಿಯುತ್ತವೆ. ಅವುಗಳಲ್ಲಿ ಪ್ರಮುಖವಾದವು: ಕಾವೇರಿ, ಕಬಿನಿ, ಲಕ್ಷ್ಮಣತೀರ್ಥ, ನುಗು, ತಾರಕ ಮತ್ತು ಪಾಲರ ನದಿಗಳು. ಕಬಿನಿ ಮತ್ತು ಲಕ್ಷ್ಮಣತೀರ್ಥ ಜಿಲ್ಲೆಯ ದೊಡ್ಡ ಜಲಾಶಯಗಳೂ ಹೌದು. ಇವುಗಳ ಹೊರ

ತಾಗಿ ಹದಿನಾರು ಸಣ್ಣ ಜಲಾಶಯಗಳು ಜಿಲ್ಲೆಯ ಅನೇಕ ಸಣ್ಣ ಕೈಗಾರಿಕೆಗಳಿಗೆ ಪೂರಕವಾಗಿವೆ.

ಕೈಗಾರಿಕಾ ಪ್ರಗತಿಗೆ ಬೇಕಾದ ವಿವಿಧ ಸಂಪನ್ಮೂಲಗಳು ಜಿಲ್ಲೆಯಲ್ಲಿ ವಿಪುಲವಾಗಿ ದೊರೆತರೂ ಅವುಗಳ ಪೂರ್ಣ ಪ್ರಯೋಜನವನ್ನು ಜಿಲ್ಲೆ ಇನ್ನು ಪಡೆದುಕೊಂಡಿಲ್ಲ. ಈ ದೃಷ್ಟಿಯಲ್ಲಿ ಜಿಲ್ಲೆಯ ಕೈಗಾರಿಕಾ ಬೆಳವಣಿಗೆ ಅಷ್ಟೇನೂ ಆಶಾದಾಯಕವಾಗಿಲ್ಲವೆಂದರೆ ತಪ್ಪಾಗಲಾರದು.

ಈ ಅಂಶವನ್ನು ಮನಗಂಡು ಯೋಜನಾ ಆಯೋಗ ಮೈಸೂರು ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಿದೆ.

ಜಿಲ್ಲೆಯ ಕೈಗಾರಿಕಾ ಪ್ರಗತಿ

ಇಂದು ಜಿಲ್ಲೆಯಲ್ಲಿ ಸುಮಾರು 63 ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳಿವೆ. ಇದಲ್ಲದೆ 1692 ಸಣ್ಣ ಕೈಗಾರಿಕೆಗಳಿವೆ. ಶೇ 80 ರಷ್ಟು ದೊಡ್ಡ ಕೈಗಾರಿಕೆಗಳು ಮೈಸೂರು ನಗರದ 10 ಕಿ.ಮೀ. ವ್ಯಾಪ್ತಿಯಲ್ಲಿ ಸ್ಥಾಪಿಸಲ್ಪಟ್ಟಿವೆ. ಈ ರೀತಿಯ ಕೈಗಾರಿಕಾ ಕೇಂದ್ರೀಕರಣಕ್ಕೆ ಪ್ರಮುಖ ಕಾರಣವೆಂದರೆ ಸರಕಾರದಿಂದ ದೊರಕುವ ಶೇ 15 ಸಹಾಯ ಧನ ಹಾಗು ಕೈಗಾರಿಕೆಗಳಿಗೆ ಪೂರಕವಾದ ಸಾರಿಗೆ, ಸಂಪರ್ಕ ಮತ್ತಿತರ ಸೌಲಭ್ಯಗಳು.

ಈ ಕೆಳಗಿನ ಪಟ್ಟಿಯು ಮೈಸೂರು ಜಿಲ್ಲೆಯ ಸಣ್ಣ ಕೈಗಾರಿಕೆಗಳ ಸಮಗ್ರ ಚಿತ್ರವನ್ನು ನೀಡುತ್ತದೆ. (1980-81)

ಕ್ರಮ ಸಂಖ್ಯೆ	ಕೈಗಾರಿಕೆಗಳ ಹೆಸರು	ಕೈಗಾರಿಕಾ ಘಟಕಗಳ ಸಂಖ್ಯೆ	ಬಂಡವಾಳ (ಲಕ್ಷ ರೂ)	ಕೆಲಸಗಾರರ ಸಂಖ್ಯೆ
1.	ರಸಾಯನ	218	101.69	2,589
2.	ವಿದ್ಯುತ್ ಮತ್ತು ಅದಕ್ಕೆ ಸಂಬಂಧಿಸಿದವು	184	20.16	940
3.	ಆಹಾರ ಪಾನೀಯ ಮತ್ತು ಹೊಗೆಸೊಪ್ಪು	196	197.57	1630
4.	ಕಬ್ಬಿಣ ಮತ್ತು ಇತರ	492	217.27	2235
5.	ಗಾಜು ಮತ್ತು ಸೆರಮಿಕ್	37	49.12	583
6.	ಚರ್ಮ ಮತ್ತು ರಬ್ಬರ್	56	48.12	628
7.	ಯಂತ್ರೋಪಕರಣಗಳು	27	63.97	256
8.	ಕಾಗದ ಮತ್ತು ಅದಕ್ಕೆ ಸಂಬಂಧಿಸಿದವು	32	29.68	342
9.	ಅಚ್ಚುಗಾರಿಕೆ	110	55.97	720
10.	ಬಟ್ಟೆ	129	60.11	1364
11.	ಮರ ಮತ್ತು ಅದಕ್ಕೆ ಸಂಬಂಧಿಸಿದವು	157	104.00	1515
12.	ಇತರ	74	35.3	468
	ಒಟ್ಟು	1692	982.95	13,320

ಜಿಲ್ಲೆಯ ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸುವಲ್ಲಿ ಕೈಗಾರಿಕೆಗಳ ಪಾತ್ರವನ್ನು ಈ ಪಟ್ಟಿ ಸಾದರಪಡಿಸುತ್ತದೆ.

ಮುಂದಿನ ಪಟ್ಟಿಯು ಜಿಲ್ಲೆಯ ಕೈಗಾರಿಕಾ ಪ್ರಗತಿಯ ಎರಡು ಅವಧಿಗಳ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ಕ್ರಮ ಸಂಖ್ಯೆ	ಕೈಗಾರಿಕೆಗಳ ಹೆಸರು	1969–70			1980–81		
		ಕೈಗಾರಿಕೆಗಳ ಸಂಖ್ಯೆ	ಬಂಡವಾಳ (ಲಕ್ಷವಲ್ಲಿ)	ಕೆಲಸಗಾರರ ಸಂಖ್ಯೆ	ಕೈಗಾರಿಕೆಗಳ ಸಂಖ್ಯೆ	ಬಂಡವಾಳ (ಲಕ್ಷವಲ್ಲಿ)	ಕೆಲಸಗಾರರ ಸಂಖ್ಯೆ
1.	ರಸಾಯನ	23	3·45	331	218	101·69	2589
2.	ವಿದ್ಯುತ್ ಮತ್ತು ಅದಕ್ಕೆ ಸಂಬಂಧಿಸಿದವು	129	0·05	552	184	20·16	940
3.	ಆಹಾರ, ಪಾನೀಯ ಮತ್ತು ಹೊಗೆಸೊಪ್ಪು	46	17·55	204	196	197·57	1630
4.	ಕಬ್ಬಿಣ ಮತ್ತು ಇತರ	129	32·70	552	492	217·27	2235
5.	ಗಾಜು ಮತ್ತು ಸೆರಮಿಕ್	3	2·85	34	37	49·12	583
6.	ಚರ್ಮ ಮತ್ತು ರಬರ್	—	—	—	56	48·12	628
7.	ಯಂತ್ರ ಮತ್ತು ಉಪಕರಣಗಳು	—	—	—	27	63·97	256
8.	ಕಾಗದ ಮತ್ತು ಅದಕ್ಕೆ ಸಂಬಂಧಿಸಿದವು	1	0 80	20	32	29·68	342
9.	ಅಚ್ಚುಗಾರಿಕೆ	14	2·95	91	110	55·97	720
10.	ಬಟ್ಟೆ	31	6·89	196	129	60·11	1364
11.	ಮರ ಮತ್ತು ಅದಕ್ಕೆ ಸಂಬಂಧಿಸಿದವು	16	5·95	142	157	104·00	1515
12.	ಇತರ	2	0·30	8	74	35·3	468
	ಒಟ್ಟು	394	73·49	2,130	1692	982·95	13320

ಹಿಂದಿನ ಪಟ್ಟಿಯನ್ನು ಗಮನಿಸಿದಾಗ 1969-70ರಲ್ಲಿದ್ದ ಒಟ್ಟು ಕೈಗಾರಿಕೆಗಳ ಸಂಖ್ಯೆ 394. ಇದು 1980-81ರ ಹೊತ್ತಿಗೆ 4ರಷ್ಟು ಬೆಳೆದಿದೆ. ಇದೇ ಅವಧಿಯಲ್ಲಿ ಬಂಡವಾಳ ಹೂಡಿಕೆಯು 73.49 ಲಕ್ಷದಿಂದ 982.95 ಲಕ್ಷಕ್ಕೆ ಏರಿದೆ. ಅಲ್ಲದೆ ಉದ್ಯೋಗ ಸೌಲಭ್ಯವು ಸುಮಾರು ಆರರಷ್ಟು ಏರಿದೆ. ವಾಸ್ತವವಾಗಿ ಈ ಅಂಕಿ ಅಂಶ ಗಳು ಇನ್ನೂ ಹೆಚ್ಚು ಎಂದು ಅಂದಾಜು ಮಾಡಲಾಗಿದೆ.

ಸ್ಥಾಪನಾ ಸೌಲಭ್ಯಗಳು

ಒಟ್ಟಿನಲ್ಲಿ ಹೇಳುವುದಿದ್ದರೆ ಇಲ್ಲಿನ ಬೃಹತ್ ಕೈಗಾರಿಕಾ ಬೆಳವಣಿಗೆಗೆ ಸರಕಾರ ಕಲ್ಪಿಸಿದ ಅನೇಕ ಸೌಲಭ್ಯಗಳೇ ಕಾರಣವಾಗಿವೆ. ಅವುಗಳಲ್ಲಿ ಕೆಳಗಿನವುಗಳು ಪ್ರಮುಖ ವಾದವು.

1. ಕೇಂದ್ರ ಸರಕಾರದಿಂದ ಶೇ 10 ರಷ್ಟು ಉಚಿತ ಹಣ ಸಹಾಯ ನೀಡಿಕೆ. ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುವ ಅಥವಾ ವೃದ್ಧಿಪಡಿಸಲ್ಪಡುವ ಎಲ್ಲ ಕೈಗಾರಿಕೆಗಳಿಗೂ ಅವು ಗಳ ಸ್ಥಿರ ಬಂಡವಾಳದ ಶೇ. 10 ರಷ್ಟನ್ನು ಕೇಂದ್ರ ಸರಕಾರ ಉಚಿತವಾಗಿ ನೀಡು ವುದು. ಆದರೆ ಈ ಮೊಬಲಗನ್ನು ಗರಿಷ್ಟ 15 ಲಕ್ಷ ರೂಪಾಯಿಗಳಿಗೆ ಮಿತಿಗೊಳಿಸ ಲಾಗಿದೆ.

2. ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಾದ ಭೂಮಿಯನ್ನು ರಿಯಾಯತಿ ದರದಲ್ಲಿ ಒದಗಿಸುವುದು.

3. ಕೈಗಾರಿಕಾ ಮಳಿಗೆಗಳನ್ನು ಕಟ್ಟಿಸಿಕೊಡುವುದು.

4. ನಿರುದ್ಯೋಗಿ ತಂತ್ರಜ್ಞರಿಗೆ ನೆರವು ಯೋಜನೆಯಡಿಯಲ್ಲಿ ಕಮ್ಮಿ ಬಡ್ಡಿದರ ದಲ್ಲಿ ಸಾಲದ ಸೌಲಭ್ಯಗಳನ್ನು ಒದಗಿಸುವುದು.

5 ಹೊಸ ಕೈಗಾರಿಕೆಗಳಿಗೆ ಮೊದಲ ಐದು ವರುಷಗಳಲ್ಲಿ ಮಾರಾಟ ತೆರಿಗೆ ಮತ್ತು ವಿದ್ಯುಚ್ಛಕ್ತಿ ತೆರಿಗೆಗಳಲ್ಲಿ ರಿಯಾಯತಿ ಮತ್ತು ವಿನಾಯಿತಿಯನ್ನು ನೀಡುವುದು.

6. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಅತಿ ಕಡಿಮೆ ಬಡ್ಡಿ ದರ ದಲ್ಲಿ ವಿವಿಧ ರೀತಿಯ ಸಾಲದ ಸೌಲಭ್ಯಗಳನ್ನು ಒದಗಿಸುವುದು.

7. ವಿಶೇಷ ಧನ ಸಹಾಯ ಮತ್ತು ಸುಲಭ ಬಡ್ಡಿಯ ಸಾಲದ ಸೌಲಭ್ಯಗಳನ್ನು ಅಗತ್ಯ ಕೈಗಾರಿಕೆಗಳಿಗೆ ಒದಗಿಸುವುದು.

8. ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ನ ವಿಶೇಷ ನೆರವು. ಈ ಸಂಸ್ಥೆಯು ಸಾಮಾನ್ಯವಾಗಿ ಖಾಸಗಿ ಕ್ಷೇತ್ರದ ನಿಯಮಿತ ಷೇರು ಬಂಡವಾಳದ ಸಂಸ್ಥೆ ಗಳಿಗೆ ಮಾತ್ರ ನೇರ ಧನ ಸಹಾಯವನ್ನು ನೀಡುತ್ತದೆ. ಮೈಸೂರು ಜಿಲ್ಲೆಗೆ ಈ ಹಣ ಕಾಸು ಸಂಸ್ಥೆಯಿಂದ ದೊರೆಯುವ ಕೆಲವು ವಿಶೇಷ ರಿಯಾಯತಿಗಳು ಇಂತಿವೆ.

(1) ಕೈಗಾರಿಕೆಗಳಿಗೆ ಒದಗಿಸುವ ಸಾಲದ ಬಡ್ಡಿ ದರದಲ್ಲಿ ಶೇ. ಒಂದರಷ್ಟು ರಿಯಾಯಿತಿ.

(2) ಸಾಲದ ಮರು ಪಾವತಿಯು ಮೂರು ವರುಷಗಳ ನಂತರ ಪ್ರಾರಂಭ ವಾಗುವುದರ ಬದಲು ಐದು ವರುಷಗಳ ನಂತರ ಪಾವತಿ ಮಾಡುವ ಅವಕಾಶ ಕಲ್ಪಿಸಿರು ವುದು.

(3) ಸಾಲದ ಮರುಪಾವತಿಯ ಅವಧಿಯನ್ನು 10–15 ವರುಷಗಳ ಬದಲಾಗಿ 15–20 ವರುಷಗಳಿಗೆ ಹೆಚ್ಚಿಸಿರುವುದು.

(4) ನಿರ್ವಹಣಾ ಬಂಡವಾಳಕ್ಕೆ ಹೆಚ್ಚಿನ ಸಹಾಯವನ್ನು ಕಲ್ಪಿಸಿರುವುದು.

(5) ಸಲಹಾ ಸೇವೆಗೆ ತಗಲುವ ವೆಚ್ಚವನ್ನು ಮುಂಗಡವಾಗಿ ಒದಗಿಸುವುದು.

9. ದೇಶೀಯ ಕಚ್ಚಾ ಪದಾರ್ಥಗಳ ಸರಬರಾಜು ಮತ್ತು ವಿದೇಶಗಳಿಂದ ಕಚ್ಚಾ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲು ಸುಲಭವಾಗಿ ಪರವಾನಗಿಗಳನ್ನು ನೀಡುವುದು.

10. ವಿದ್ಯಾವಂತ ನಿರುದ್ಯೋಗಿಗಳಿಗೆ ಪ್ರೋತ್ಸಾಹ ನೀಡಲು ವಿಶೇಷ ಯೋಜನೆ ಗಳು.

11. ಮೆಟ್ರಿಕ್ಯುಲೇಶನ್/ಎಸ್.ಎಸ್.ಎಲ್.ಸಿ. ಮಟ್ಟದ ೨೦೦ ನಿರುದ್ಯೋಗಿ ಗಳಿಗೆ ಕೈಗಾರಿಕಾ ಉದ್ದಿಮೆಯ ಆಡಳಿತದ ಬಗ್ಗೆ ಶಾಲಾ ಶಿಕ್ಷಣವನ್ನು ನೀಡುವುದು ಮತ್ತು ತಾಂತ್ರಿಕ ವಿದ್ಯಾರ್ಹತೆಯನ್ನು ಹೊಂದಿರುವ ನಿರುದ್ಯೋಗಿಗಳಿಗೆ ಯಂತ್ರೋಪ ಕರಣ, ಕಟ್ಟಡ ಮತ್ತು ನಿವೇಶನಗಳನ್ನು ಕೊಳ್ಳಲು ೨ ಲಕ್ಷ ರೂಪಾಯಿಗಳಿಗೆ ಮೀರ ದಂತೆ ಬಂಡವಾಳದ ಸಾಲ ಪಾವತಿ. ಅಲ್ಲದೆ ಸರಕಾರದಿಂದ ಮಂಜೂರಾದ ಯೋಜ ನೆಯ ಮೇರೆಗೆ ತಾಂತ್ರಿಕ ಪದವೀಧರರಿಗೆ ತಿಂಗಳಿಗೆ 400 ರಿಂದ 750 ರೂಪಾಯಿ ಗಳಷ್ಟು ಶಿಕ್ಷಣ ವೃತ್ತಿ ವೇತನ ನೀಡಿ ಕೈಗಾರಿಕೆಗಳಲ್ಲಿ ಒಂದು ವರ್ಷ ತರಬೇತಿ ನೀಡು ವುದು ಇತ್ಯಾದಿ.

ಮೇಲಿನ ಅಂಶಗಳಿಗೆ ಪೂರಕವಾಗಿ, ಹೊರ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬರುವ ಕೈಗಾರಿಕೋದ್ಯಮಿಗಳೂ ಜಿಲ್ಲೆಯ ಕೈಗಾರಿಕಾ ಪ್ರಗತಿಗೆ ಕಾರಣರಾಗಿದ್ದಾರೆ. ಕಾರ್ಮಿಕ ಅಂಶಾತಿಯಿರುವ ಕೇರಳ, ಬಂಗಾಳಗಳಿಂದ ಸುರಕ್ಷಿತ ಕರ್ನಾಟಕ ಕೈಗಾ ರಿಕೋದ್ಯಮಿಗಳನ್ನು ಸಹಜವಾಗಿ ಆಕರ್ಷಿಸಿದೆ.

ಜಿಲ್ಲೆಯ ಪ್ರಮುಖ ಕೈಗಾರಿಕೆಗಳಾದ ಮೈಸೂರ್ ಮೆಷಿನರಿ ಕಂಪನಿ, ವಿಕ್ರಾಂತ್, ಕರ್ನಾಟಕ ಬಾಲ್ ಬೇರಿಂಗ್, ಕೃಷ್ಣರಾಜ ಮಿಲ್ಸ್, ಬಣ್ಣ ಮತ್ತು ಅರ ಗಿನ ಕಾರ್ಖಾನೆ ಇವೆಲ್ಲ ಇಂದು ನಗರದ ಸರಹದ್ದಿನಲ್ಲಿ ಸ್ಥಾಪಿಸಲ್ಪಟ್ಟಿವೆ. ಈ ರೀತಿಯ ಬೆಳವಣಿಗೆಯಿಂದ ಕೈಗಾರಿಕೆಗಳೆಲ್ಲವೂ ಮೈಸೂರು ನಗರದ ಸುತ್ತಮುತ್ತ ಕೇಂದ್ರಿಕೃತ ವಾಗಿವೆ. ಈ ದೃಷ್ಟಿಯಿಂದ ಕೈಗಾರಿಕೆಗಳಿಂದಾಗುವ ಪ್ರಯೋಜನ ಮತ್ತು ಬೆಳವಣಿಗೆ ಯಿಂದ ಜಿಲ್ಲೆಯ ಇತರ ಪ್ರದೇಶಗಳು ವಂಚಿತವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬